ಬೆಲೆ: ಎರಡು ಆಣೆ

ಕರ್ಮವೀರ

ವರ್ಗಣಿ ದರ
(ಅಂಚೆವೆಚ್ಚ ಸೇರಿ)
ವರ್ಷಕ್ಕೆ ರೂ. ೬-೪-೦
೬ ತಿಂಗಳಿಗೆ ,, ೩-೪-೦
೩ ತಿಂಗಳಿಗೆ ,, ೧-೧೨-೦
ವ್ಹಿ. ಪಿ. ಮೂಲಕ
ತರಿಸಿಕೊಂಡಲ್ಲಿ ೫ ಆಣೆ
ಹೆಚ್ಚಿಗೆ ಬೀಳುವದು.

KARMAVEER
WEEKLY
HUBLI
★
JUNE 10
1946

ಸಂಪಾದಕರು :
ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor : H. R. Purohit, M. A.

ಸಂಪುಟ ೧೮] ಹುಬ್ಬಳ್ಳಿ ಸೋಮವಾರ ತಾರೀಖು ೧೦ — ೬ — ೧೯೪೬ [ಸಂಚಿಕೆ ೧೦

ಹಿಂದುಸ್ತಾನದ ಭವಿಷ್ಯತ್ ರಾಜ್ಯಘಟನೆ

ರಶಿಯನ್ ಮಾದರಿಯನ್ನೇ ಅನುಸರಿಸುವದು ಅನಿವಾರ್ಯವಾಗಬಹುದು: ಚಲಾವಣೆಯನ್ನು ಕೇಂದ್ರಕ್ಕೆ ಬಿಟ್ಟುಕೊಡದಿದ್ದರೆ ಮುಸ್ಲಿಮರಿಗೆ ಹಾನಿ

— ಶ್ರೀ ಕೆ. ಸಂತಾನಂ ಅವರಿಂದ —

ಮಂತ್ರಿತ್ರಯ ರಾಯಭಾರದ ಸೂಚನೆಗಳಿಗೆ ಒಪ್ಪಿಗೆ ದೊರೆತು ಅವು ಅಮಲಿಗೆ ಬಂದರೆ ಅದು ನಿಯಂತ್ರಿತ ರಾಜ್ಯಘಟನಾ ರಚನೆಯ ಅಪೂರ್ವ ಉದಾಹರಣೆಯಾಗುತ್ತದೆ. ಈ ನಿಯಂತ್ರಣವೇನೂ ಅಪರಿವರ್ತನೀಯವಾದುದಲ್ಲನಿಜ ಏಕೆಂದರೆ ಎರಡೂ ದೊಡ್ಡ ಜಾತಿಗಳ ಬಹುಸಂಖ್ಯಾಕ ಪ್ರತಿನಿಧಿಗಳು ಒಪ್ಪಿಗೆ ಕೊಟ್ಟರೆ ರಾಯಭಾರದವರ ಸೂಚನೆಗಳಲ್ಲಿ ಅಡಕವಾದ ಯಾವುದೇ ಕರಾರನ್ನು ಬದಲಿಸುವದು ಘಟನಾಸಮಿತಿಗೆ ಸಾಧ್ಯವಿದೆ. ಆದರೆ ಬದಲಾವಣೆಗೆ ಒಪ್ಪಿಗೆ ಪ್ರಾರಂಭದಲ್ಲಂತೂ ದೊರೆಯುವ ಸಂಭವ ಕಡಿಮೆ. ಘಟನಾ ಸಮಿತಿಗೆ ಯಾವುದೇ ಬಗೆಯ ಘಟನೆಯನ್ನು ಸ್ವೀಕರಿಸುವ ಸ್ವಾತಂತ್ರ್ಯವಿದೆ. ಆದರೂ ರಾಯಭಾರದವರು ಗೊತ್ತುಪಡಿಸಿದ ವಿಶಾಲ ತಳಪಾಯದ ಪ್ರಭಾವ ಹಿಂದುಸ್ತಾನದ ಘಟನಾತ್ಮಕ ವಿಕಾಸದ ಮೇಲೆ ತೀಕ್ಷ್ಣವಾಗಿ ಬೀಳುವದು ಖಂಡಿತ. ಅಂದ ಬಳಿಕ ಅದು ಸೂಕ್ಷ್ಮ ಪರಿಶೀಲನೆಗೆ ಅರ್ಹವಾಗಿದೆ. ಈ ದೇಶದ ಭವಿತವ್ಯವನ್ನು ನಿರ್ಣಯಿಸುವಲ್ಲಿ ಪ್ರಸಕ್ತವಾಗಿರುವ ಪ್ರಬಲ ಪಕ್ಷಗಳು ಬಯಸುವದಕ್ಕಿಂತ ತೀರ ಬೇರೆಯಾದ ಪರಿಣಾಮವೇ ಇದರಿಂದ ಹೊರಟರೆ ನನಗೇನೂ ಅಚ್ಚರಿಯಾಗದು.

ಸಾದಾ ಸಂಯುಕ್ತ ರಾಜ್ಯ

ಹಿಂದುಸ್ತಾನಕ್ಕೆ ಏಕಘಟಕಾತ್ಮಕವಾದ (ಅಂದರೆ ಇಡೀ ದೇಶವೂ ಒಂದೇ ಘಟಕವೆಂಬ ತಳಹದಿಯ) ರಾಜ್ಯಪದ್ಧತಿ ಅನುಕೂಲವಾಗಿಲ್ಲವೆಂಬ ಮಾತಿನ ಬಗೆಗೆ ಮತಭೇದವಿದ್ದೇ ಇಲ್ಲ. ಪಾಕಿಸ್ತಾನ ವಿವಾದ ಉದ್ಭೂತವಾಗುವ ವರೆಗೂ ಕೇಂದ್ರಕ್ಕೂ ವಿವಿಧ ಘಟಕಗಳಿಗೂ ಅಧಿಕಾರಗಳ ಹಂಚುವಳಿ ಹೇಗಾಗಬೇಕೆಂಬದೇ ವಾದಗಳ ವಸ್ತುವಾಗಿತ್ತು. ರಾಷ್ಟ್ರೀಯ ಹಿಂದುಸ್ತಾನದ ರಾಜಕೀಯ ದೃಷ್ಟಿ ಯಾವಾಗಲೂ ಸಂಪ್ರದಾಯಪ್ರಿಯವಲ್ಲದಿದ್ದರೂ ಉದಾರ (ಲಿಬರಲ್) ವಿಚಾರದ್ದಿತ್ತು. ಅಮೇರಿಕೆಯ ಸಂಯುಕ್ತ ಸಂಸ್ಥಾನದಂತೆ ಸಾದಾ ಸಂಯುಕ್ತ ಘಟನೆಯ ಕಡೆಗೇ ಅದರ ಒಲವು ಇತ್ತು. ಈ ಘಟನಾ ಪದ್ಧತಿಯ ಸಂಯುಕ್ತತೆ ಸ್ಪಷ್ಟವೇ ಇದೆ. ಬಿಗಿಯಾದ ಕಾಯಿದೆಯ ಕಟ್ಟುಪಾಡಿನಲ್ಲಿ ಅದನ್ನು ಕಟ್ಟಬಹುದು, ಅದು ಸ್ಥಿರವಾಗಿ ನಿಲ್ಲುವ ಸಂಭವ ಹೆಚ್ಚು, ಮತ್ತು ಅದರಲ್ಲಿ ಗೊಂದಲಕ್ಕೆಡೆಯಿಲ್ಲದಂತೆ ಐಕ್ಯವನ್ನೂ ಸ್ವಾಯತ್ತತೆಯನ್ನೂ ಸಮಾವೇಶಗೊಳಿಸಿ ಕಾಯ್ದುಕೊಳ್ಳುವ ಅನುಕೂಲವಿದೆ. ಅಮೇರಿಕೆಯ ಸಂಯುಕ್ತ ಸಂಸ್ಥಾನದಲ್ಲಿ ೧೧೦೨೪೭ ಜನಸಂಖ್ಯೆಯುಳ್ಳ ಚಿಕ್ಕ ನೆವಡಾ ಸಂಸ್ಥಾನಕ್ಕೂ ಸಂಯುಕ್ತ ಕೇಂದ್ರದ ಧೋರಣ ನಿರ್ಣಾಯಕ ಸಭೆಯಾದ ಸೆನೇಟದಲ್ಲಿ ಒಂದೇಸ್ಥಾನ, ೧೩೫೧೩೦೦೦ ಜನಸಂಖ್ಯೆಯುಳ್ಳ ಹಿರಿ ನ್ಯೂಯಾರ್ಕ ಸಂಸ್ಥಾನಕ್ಕೂ ಒಂದೇ ಸ್ಥಾನವಿದೆ. ಆದರೆ ಪ್ರತಿನಿಧಿಸಭೆಯಲ್ಲಿ ಮಾತ್ರ ಸ್ಥಳಗಳ ಹಂಚುವಳಿ ಕಟ್ಟುನಿಟ್ಟಾಗಿ ಜನಸಂಖ್ಯಾ ಪ್ರಮಾಣದಲ್ಲಿದ್ದು ನೆವಡಾಕ್ಕೆ ಒಂದೇ ಸ್ಥಾನ ದೊರೆತರೆ ನ್ಯೂಯಾರ್ಕಕ್ಕೆ ೪೫ ಸಿಗುತ್ತವೆ. ಈಗ ದಶಮಾನಗಳಿಂದ ಹಿಂದೀ ರಾಷ್ಟ್ರೀಯರು ಅಂಥದೇ ಒಂದು ಹಿಂದುಸ್ತಾನದ ಸಂಯುಕ್ತ ಸಂಸ್ಥಾನದ ಕನಸು ಕಾಣುತ್ತ ಬಂದಿದ್ದಾರೆ. ಅದರಲ್ಲಿ ಬ್ರಿಟಿಶ ಹಿಂದುಸ್ತಾನವೂ ದೇಶೀ ಸಂಸ್ಥಾನಗಳೂ ಓರಣವಾದ ಸಮಾನ ಧರ್ಮ ಘಟಕಗಳಾಗಿ ಒಡೆಯಲ್ಪಟ್ಟು ಎಲ್ಲಕ್ಕೂ ಒಂದೇ ಮಟ್ಟದ ಸ್ವಾತಂತ್ರ್ಯವಿರಬೇಕೆಂದೂ ಚಿಕ್ಕ ಪ್ರಾಂತವಾದ ಗಡಿನಾಡಿಗೂ ಬಂಗಾಲ ಯುಕ್ತಪ್ರಾಂತಗಳಿಗೆ ಸಮಾನವಾದ ಸ್ಥಾನಮಾನ ಕೇಂದ್ರದಲ್ಲಿರಬೇಕೆಂದೂ ಅವರ ಆಶೆಯಾಗಿತ್ತು. ಈ ಕನಸು ಸರಿಯೋ ತಪ್ಪೊ ಹೇಳಲಾರೆ. ಆದರೆ ಹಿಂದುಸ್ತಾನದ ಕ್ಲಿಷ್ಟವಾದ ಸಾಮಾಜಿಕ ಸ್ವರೂಪವನ್ನು ನೋಡಿದರೆ ಇದಕ್ಕಿಂತ ಹೆಚ್ಚು ವಿಸ್ತಾರವಾದ ರಾಜಕೀಯ ಅಭಿವ್ಯಕ್ತಿ ಅವಶ್ಯವಿದೆಯೆಂದು ಸಕಾರಣವಾಗಿ ವಾದಿಸಬಹುದು. ಮಂತ್ರಿಗಳ ಯೋಜನೆ ಇದನ್ನು ಅನಿವಾರ್ಯವಾಗಿ ಮಾಡಿದೆ.

ರಶಿಯಾದ ಮಾದರಿ

ಈಗ ಸೂಚಿಸಲ್ಪಟ್ಟಿರುವ ಯೋಜನೆಯನ್ವಯ ಕೆಲಸ ಮಾಡುವದೇ ಆದರೆ ರಶಿಯನ್ ಮಾದರಿಯನ್ನೇ ಹಿಂದುಸ್ತಾನ ಅನುಸರಿಸಬೇಕಾಗುವದೆಂದು ಮಂತ್ರಿತ್ರಯರಲ್ಲೊಬ್ಬರಾದರೂ ಯೋಚಿಸಿರುವರೋ ಇಲ್ಲವೊ. ತತ್ವದಲ್ಲೇನೋ ಅಮೇರಿಕನ ಪದ್ಧತಿಗಿಂತ ಕೇವಲ ಮೆಟ್ಟಲುಗಳಲ್ಲಷ್ಟೇ ಭಿನ್ನವಾದ ಮೂರು ಅಂತಸ್ತಿನ ಬಿಗಿಯಾದರಚನೆಯನ್ನು ಕಟ್ಟುವದು ಸಾಧ್ಯವೆನಿಸೀತು. ಆದರೆ ಹೀಗಾಗುವದು ಬಹಳ ಸಂದೇಹಾಸ್ಪದ. ಗುಂಪು ಕಟ್ಟುವದಕ್ಕೆ ಅವಕಾಶವಿರುವ ಒಂದೇ ಕಾರಣದಿಂದ ಇನ್ನೂ ಬೇರೆ ವಿಧಾನಗಳನ್ನು ಕಲ್ಪಿಸಬೇಕಾಗಿ ಬಂದು ಅದರಿಂದ ಉದ್ಭವಿಸುವ ಘಟನೆ ರಶಿಯನ್ ಘಟನೆಯಂತೆ ಅನೇಕಮುಖವೂ ದ್ರವರೂಪವೂ ಆಗಿ ರೂಪುಗೊಳ್ಳದಿರದು. ಸೋವಿಯೆಟ್ ಯೂನಿಯನ್ನಿನಲ್ಲಿ ನಾಲ್ಕು ಬಗೆಯ ಘಟಕಗಳಿಗೆ ಮನ್ನಣೆಯಿದೆ: ಯೂನಿಯನ್ ಪ್ರಜಾರಾಜ್ಯಗಳು, ಸ್ವಾಯತ್ತ ಪ್ರಜಾರಾಜ್ಯಗಳು, ಸ್ವಾಯತ್ತ ಪ್ರದೇಶಗಳು ಮತ್ತು ರಾಷ್ಟ್ರೀಯ ಜಿಲ್ಹೆಗಳು. ಇವುಗಳಲ್ಲಿ ಕೊನೆಯ ಮೂರು, ಯೂನಿಯನ್ ಪ್ರಜಾರಾಜ್ಯಗಳ ಅಂಕಿತಕ್ಕೇ ಒಳಪಟ್ಟಿದ್ದರೂ ಅವುಗಳಿಗೆ ವಿಶಿಷ್ಟ ಸ್ಥಾನಮಾನವಿದ್ದು ರಾಷ್ಟ್ರಗಳ ಸಭೆಗೆ (Council of Nationalities) ಅವು ಪ್ರತಿನಿಧಿಗಳನ್ನು ಕಳಿಸುತ್ತವೆ. ಯೂನಿಯನ್ ಪ್ರಜಾರಾಜ್ಯಗಳು ಪ್ರತಿಯೊಂದು ೨೫ ಸದಸ್ಯರನ್ನು, ಸ್ವಾಯತ್ತ ಪ್ರಜಾರಾಜ್ಯಗಳು ಪ್ರತಿಯೊಂದು ೧೧ ಪ್ರತಿನಿಧಿಗಳನ್ನು, ಸ್ವಾಯತ್ತ ಪ್ರದೇಶಗಳು ಪ್ರತಿಯೊಂದು ೫ ಪ್ರತಿನಿಧಿಗಳನ್ನು, ರಾಷ್ಟ್ರೀಯ ಜಿಲ್ಹೆಗಳು ಪ್ರತಿಯೊಂದು ಒಬ್ಬ ಪ್ರತಿನಿಧಿಯನ್ನು ಕಳಿಸುವವು. ಈ ವಿವಿಧ ಘಟಕಗಳ ಸ್ವಾಯತ್ತತೆ ಸಂಪೂರ್ಣ ಸಾರ್ವಭೌಮತ್ವದಿಂದ ಹಿಡಿದು ಕೇವಲ ಸಾಂಸ್ಕೃತಿಕ ಮತ್ತು ಭಾಷಾ ಸ್ವ-ರಾಜ್ಯದ ವರೆಗೆ ಭಿನ್ನ ಭಿನ್ನ ದರ್ಜೆಯದಾಗಿದೆ. ಹಿಂದುಸ್ತಾನದ ಯೂನಿಯನ್ ಸರಕಾರಕ್ಕೆ ಒಂದು ಶಾಸನ ಸಭೆ ಬೇಕೆಂದು ನಿರ್ಧರಿಸಲ್ಪಟ್ಟಿರುವದರಿಂದ ಅದನ್ನು ಹೆಚ್ಚುಕಡಿಮೆ ಸೋವಿಯೆಟ್ ರಾಜ್ಯದ ವರಿಷ್ಠ ಸಭೆಯ ಮಾದರಿಯಲ್ಲಿ, ಅಂದರೆ ಹಿಂದುಸ್ತಾನದ ಪ್ರಜೆಗಳಿಗೆ ನೇರವಾಗಿ ಜನಸಂಖ್ಯೆಯ ಪ್ರಮಾಣದಲ್ಲಿ ಪ್ರಾತಿನಿಧ್ಯವಿರುವ ಒಂದು ಭವನ; ಮತ್ತು ಗುಂಪುಗಳು, ಅವುಗಳ ಘಟಕಗಳು, ಸಂಯುಕ್ತವಾಗುವ ಘಟಕಗಳು, ಇತರ ಸ್ವಾಯತ್ತ ಗುಂಪುಗಳು ಇವಕ್ಕೆಲ್ಲ ಯಾವುದಾದರೊಂದು ಸಮಂಜಸ ರೀತಿಯ ಪ್ರಾತಿನಿಧ್ಯ ಕೊಡುವ ಎರಡನೆಯ ಭವನ; ಹೀಗೆ ಎರಡು ಭವನಗಳಿಂದ ಕೂಡಿದ ಶಾಸನ ಸಭೆಯನ್ನು ನಿರ್ಮಿಸಬೇಕೆಂದು ಹೇಳಿದರೆ ತಪ್ಪಾಗಲಾರದು. ಯೂನಿಯನ್ ಕೇಂದ್ರದ ಅಧಿಕಾರಗಳು ಬಹಳ ಸೀಮಿತವಾಗಿರುವದರಿಂದ ಇಂಥ ದೊಡ್ಡ ಶಾಸನಸಭೆ ಬೇಕಾಗಿಲ್ಲವೆಂದು ಯಾರಾದರೂ ಆಕ್ಷೇಪಿಸಬಹುದು. ಅದನ್ನು ನಾನೊಪ್ಪಲಾರೆ. ಸಂರಕ್ಷಣೆ, ವಿದೇಶ ಧೋರಣೆ ಮತ್ತು ಮಾರ್ಗಸೌಕರ್ಯ, ಇವು ಹಿಂದುಸ್ತಾನದ ಭದ್ರತೆ ಐಕ್ಯಗಳ ದೃಷ್ಟಿಯಲ್ಲಿ ಅತಿಶಯ ಮಹತ್ವವುಳ್ಳವುಗಳು. ಇವುಗಳಿಗೆ ಸಂಬಂಧಿಸಿದ ಧೋರಣೆಗಳಿಗೆ ಸಾಧ್ಯವಿದ್ದಷ್ಟು ವಿಸ್ತಾರವಾದ ಪ್ರಚುರತೆ ದೊರೆಯಬೇಕು. ತೀವ್ರ ಮತಭೇದವಾದ ಸಂದರ್ಭದಲ್ಲಿ ಮಾಡಲ್ಪಡುವ ನಿರ್ಣಯಗಳು ಎಲ್ಲ ಗುಂಪು ಘಟಕಗಳ ಮೇಲೆ ನಿಸ್ಸಂದಿಗ್ಧವಾಗಿ ಬಂಧಕವಾಗುವಂತಿರಬೇಕು. ಜಗತ್ತಿನ ದೊಡ್ಡ ರಾಷ್ಟ್ರಗಳಲ್ಲಿ ಹಿಂದುಸ್ತಾನಕ್ಕೆ ಯೋಗ್ಯ ಸ್ಥಾನ ದೊರಕಬೇಕಾದರೂ ಕೇಂದ್ರದಲ್ಲಿ ಒಳ್ಳೇ ಮಾಟವಾಗಿ ಕಾಣುವ ಶಾಸನಸಭೆ ಅವಶ್ಯವಾಗಿದೆ.

ಮಧ್ಯವರ್ತಿ ಗುಂಪು

ಮಂತ್ರಿತ್ರಯರ ಯೋಜನೆಯ ವೈಶಿಷ್ಟ್ಯ ಮುಸ್ಲಿಂ ಬಹುಸಂಖ್ಯಾಕ ಗುಂಪುಗಳೆರಡನ್ನು ರಚಿಸಿದ್ದರಲ್ಲಿರದೆ "ಅ" ಗುಂಪೊಂದನ್ನು ರಚಿಸಿದ್ದರಲ್ಲಿದೆ. "ಅ" ಗುಂಪಿಗೂ ಹಿಂದೀ ಯೂನಿಯನ್ನಿಗೂ ಇರುವ ಸಂಬಂಧ ರಶಿಯನ್ ಸೋವಿಯೆಟ್ ಪ್ರಜಾರಾಜ್ಯಕ್ಕೂ ಸೋವಿಯೆಟ್ ಯೂನಿಯನ್ನಿಗೂ ಇರುವ ಸಂಬಂಧದಂತೆಯೇ ಇರುವದು. ಪ್ರಾರಂಭದಲ್ಲಿಯೇ "ಅ" ಗುಂಪಿನಲ್ಲಿ ಯುಕ್ತಪ್ರಾಂತ, ಮಧ್ಯಪ್ರಾಂತ, ಬಿಹಾರ, ಓಡಿಸಾ ಮದ್ರಾಸ, ಮುಂಬಯಿಗಳೆಂಬೀ ಆರು ಪ್ರಾಂತಗಳಲ್ಲದೆ ದಿಲ್ಲಿ, ಅಜಮೀರ-ಮೇವಾಡ ಮತ್ತು ಕೊಡುಗುಗಳು ಸೇರುವವು. ಇನ್ನು ಸಂಸ್ಥಾನಗಳಿಗೆ ಯೂನಿಯನ್ ಕೇಂದ್ರದೊಡನೆ ಸ್ವಲ್ಪಲ್ಲ ಸ್ವಲ್ಪ ಸಂಬಂಧವಿರುವದಾದರೂ ಅವು ಮುಖ್ಯತಃ ಈ "ಅ" ಗುಂಪಿನೊಡನೆಯೇ ಸಂಬಂಧವನ್ನು ಬೆಳಸಬೇಕಾಗಿ ತೀರುವದೆಂಬಲ್ಲಿ ನನಗೇನೂ ಸಂದೇಹವಿಲ್ಲ. ಈಗಿರುವ ಅನೇಕಭಾಷಾ ಪ್ರಾಂತಗಳನ್ನು ಒಡೆದು ಭಾಷಾವಾರು ಪ್ರಾಂತಗಳಾಗಿ ಮಾಡಿದಲ್ಲಿ ಈ ಮಧ್ಯವರ್ತಿ ಗುಂಪು ನಾಲ್ಕೈದು ಬಗೆಯ ಇಪ್ಪತ್ತು ಮುವ್ವತ್ತು ಘಟಕಗಳನ್ನೊಳಗೊಂಡು ಗುಂಪಿನ ಶಾಸನ ಸಭೆಯಲ್ಲಿ ಸಂಕೀರ್ಣ ರೀತಿಯ ಪ್ರಾತಿನಿಧ್ಯ ಅವುಗಳಿಗೆ ದೊರೆಯುವದು. ಇಷ್ಟೇ ಅಲ್ಲ, ಅತಿ ಚಿಕ್ಕಸಂಸ್ಥಾನಗಳು ಈ ಗುಂಪಿನೊಳಗಿನ ಘಟಕಗಳಲ್ಲೊಂದಲ್ಲ ಒಂದರಲ್ಲಿ ಸ್ವಾಯತ್ತ ಉಪಘಟಕಗಳಾಗಿ ಅಥವಾ ಸ್ವಾಯತ್ತ ಜಿಲ್ಹೆಗಳಾಗಿ ಸೇರಬೇಕಾಗುವದು. ಉಳಿದೆರಡು ಗುಂಪುಗಳು ಕೂಡ ("ಕ" ಮತ್ತು "ಬ" ಗುಂಪುಗಳು) ಕೆಲ ಸಂಸ್ಥಾನಗಳನ್ನೂ ಅನಾಗರಿಕ ಪ್ರದೇಶಗಳನ್ನೂ ತಮ್ಮಲ್ಲಿ ಸೇರಿಸಿಕೊಳ್ಳಬೇಕಾಗುವದಾದರೂ ಆ ಗುಂಪುಗಳಲ್ಲಿನ ವೈವಿಧ್ಯ ಸಂಕೀರ್ಣತೆಗಳು "ಅ" ಗುಂಪಿನಲ್ಲಿರುವಷ್ಟು ಆಗಲಾರವು.

ಸಂರಕ್ಷಣೆ, ವಿದೇಶ ಧೋರಣೆಗಳು ಯೂನಿಯನ್ ಸರಕಾರಕ್ಕೂ ಶಿಕ್ಷಣ, ಶುಚಿತ್ವ, ವೈದ್ಯಕೀಯ ಸಹಾಯ ಮೊದಲಾದ ಮೂಲಭೂತ ಸಾಮಾಜಿಕ ಹಿತದ ಕಾರ್ಯಗಳು ಘಟಕಗಳಿಗೂ ಸೇರುವದರಿಂದ ಗುಂಪಿನ ಸರಕಾರಕ್ಕೆ ಮುಖ್ಯವಾಗಿ ಆರ್ಥಿಕ ವಿಕಾಸದ ಕಾರ್ಯಗಳು ಸೇರುವವು. ೧೯೩೫ ರ ಹಿಂದುಸ್ತಾನ ಸರಕಾರ ಕಾಯಿದೆಯ ೩ ನೆ ಯಾದಿಯಲ್ಲಿ ಸೇರಿದ ಎಲ್ಲ ಅಧಿಕಾರಗಳು ಗುಂಪಿಗೆ ಸೇರುವವು. ಇದೂ ಅಲ್ಲದೆ ಯೂನಿಯನ್ ಕೇಂದ್ರದ ಅಧಿಕಾರಗಳನ್ನು ಹೆಚ್ಚಿಸಿದ ಹೊರತು, ಚಲಾವಣೆ, ಜನಗಣತಿ, ದೊಡ್ಡ ಠೇವುಗಳು, ಚೆಕ್ಕುಗಳು ಮತ್ತು ಹುಂಡಿಗಳು, ಅಫು, ಪೆಟ್ರೋಲಿಯಂ, ಕಂಪನಿಗಳು, ಔದ್ಯೋಗಿಕ ವಿಕಾಸ, ಗಣಿಗಳು, ಬ್ಯಾಂಕಿಂಗ್, ಉಪ್ಪು, ಅಬಕಾರಿ, ಆದಾಯತೆರಿಗೆ, ಬಂಡವಳ ತೆರಿಗೆ, ಸಾವಿನ ತೆರ ಎಂಬೀ ೧ನೆಯಾದಿಯ ವಿಷಯಗಳೂ ಗುಂಪಿಗೇ ಸೇರಬೇಕಾಗುವದು. ಇನ್ನು ಎರಡನೆ ಯಾದಿಯಲ್ಲಿರುವ ಕೆಲ ವಿಷಯಗಳನ್ನೂ ಪ್ರತ್ಯೇಕ ವಿಷಯವಾಗಿಯಲ್ಲದಿದ್ದರೂ ಸಂವಾಹಿ (ಘಟಕಗಳಿಗೂ ಗುಂಪಿಗೂ ಸಮಾನಾಧಿಕಾರವುಳ್ಳ) ವಿಷಯಗಳಾಗಿಯಾದರೂ ಗುಂಪಿಗೆ ಕೊಡಬೇಕಾದೀತು. ನೀರು [ನೀರಾವರಿ ಮತ್ತು ಜಲಶಕ್ತಿ ಸೇರಿ], ಅಡವಿ, ಮೀನುಗಾರಿಕೆ ರಸ್ತೆ ಮತ್ತು ವೈಜ್ಞಾನಿಕ ಸಂಶೋಧಗಳನ್ನು ಈ ಸಂಬಂಧದಲ್ಲಿ ಉಲ್ಲೇಖಿಸಬಹುದು. ಈ ಕಾರ್ಯಗಳ ನಿರ್ವಾಹದಲ್ಲಿ ಮಧ್ಯವರ್ತಿ ಗುಂಪಿನ ದೊಡ್ಡ ಆಕಾರದಿಂದಾಗಿ ಅದಕ್ಕೆ ಚಿಕ್ಕ ಗುಂಪುಗಳಿಗಿಂತ ಹೆಚ್ಚಿನ ಅನುಕೂಲತೆಗಳು ದೊರೆಯುತ್ತವೆ. ಈಗ ಕೂಡ ಬ್ರಹ್ಮದೇಶ ಸಿಂಹಳಗಳ ಚಲಾವಣೆಗಳು ಹಿಂದೀ ಚಲಾವಣೆಗಳನ್ನು ಬಹಳವಾಗಿ ಅವಲಂಬಿಸಿವೆ. ಹಿಂದೀ ಚಲಾವಣೆ ಬ್ರಿಟಿಶ ಚಲಾವಣೆಯ ಹಿಡಿತದಿಂದ ಮುಕ್ತಾಯವಾದರಂತೂ ಅವುಗಳ ಈ ಪರಾವಲಂಬನೆ ಇನ್ನಷ್ಟು ತೀವ್ರವಾಗುತ್ತದೆ. ಹಿಂದೀ ಯೂನಿಯನ್ನಿಗೆ ಚಲಾವಣೆ ಮತ್ತು ಬ್ಯಾಂಕಿಂಗಿನ ಅಧಿಕಾರವನ್ನು ಕೊಡದೆ ಹೋದರೆ ಚಲಾವಣೆಯ ನಿಜವಾದ ಶಕ್ತಿ ಮಧ್ಯವರ್ತಿ (ಅ) ಗುಂಪಿನ ಕೈಗೇ ಹೋಗಿ ಬಿಡುವದು ಖಂಡಿತ. ಇತರ ಎರಡು ಗುಂಪುಗಳ ಚಲಾವಣೆಗಳು ಮಧ್ಯವರ್ತಿ ಗುಂಪಿನ ಚಲಾವಣೆಯ ತಾಳಕ್ಕೇ ಹೆಜ್ಜೆ ಹಾಕಬೇಕಾಗುವದು. ಮೂರು ಬೇರೆ ಬೇರೆ ಚಲಾವಣೆಗಳು ಹಿಂದುಸ್ತಾನದಲ್ಲಿರುವದರಿಂದ ವ್ಯಾಪಾರೋದ್ಯಮಗಳಿಗೆ ಬಹಳ ಉಪದ್ರವವಾಗುವದು. ನಿಶ್ಚಯ. ಆದರೆ ಇದರಲ್ಲಿ ಮುಖ್ಯವಾಗಿ ತೊಂದರೆಗೊಳಗಾಗುವದು ಚಿಕ್ಕ ಗುಂಪುಗಳೇ ಹೊರತು ದೊಡ್ಡದಲ್ಲ.

ತಿದ್ದುಪಡಿ

ಮೂರಂತಸ್ತಿನ ಸಂಕೀರ್ಣ ರಾಜ್ಯಘಟನೆಯಲ್ಲಿ ವಿವಿಧ ಭಾಗಗಳ ಪರಸ್ಪರ ಸಂಬಂಧವನ್ನು ಕಾಯಿದೆಯ ಪ್ರಣಾಲಿಯಿಂದ ನಿಯಮಿತಗೊಳಿಸುವದು ಸಾಧ್ಯವಾಗದು. ಅದಕ್ಕಿಂತಲೂ ಹೆಚ್ಚು

-೧೬ನೇ ಪುಟ ನೋಡಿರಿ

ವಾಸುನ ವನವಾಸ

ಶ್ರೀಕೃಷ್ಣ ಪಾಟೀಲ, ಕಲಾಮಂಟಪ ಬೆಳಗಾವಿ

"ಎಲ್ಲಿಗೆ ನಡೆದೆ ವಾಸು? '' ಎಂದು ತುಟಿಗಳನ್ನು ಹಸಿಮಾಡಿಕೊಂಡು ನಾನು ಕೇಳಿದೆನು.

"ಈ ತಂಬಿಗೆಯನ್ನು ಬೆಸೆದುಕೊಂಡು ಬರುವೆನು, '' ಎಂದು ಗೋಣುಮುರಿದ ಗಣಪ್ಪನಂತೆ ನಿಂತು ಹೇಳಿದನು.

ಹೆಣ್ಣುತನದ ತಲೆ, ಭಿಕ್ಷುಕರ ಹೊಟ್ಟೆ, ಅನಾಥರ ಬೆನ್ನು, ಪುರೂಪಿಯ ತೊಡೆ, ಗೊರಸಿನ ಕಾಲು ಏಡಿಯ ಮುಂಗಾಲು ಕೂಡಿಸಿ ಒಂದು ಮನುಷ್ಯರೂಪವನ್ನು ಕೊಟ್ಟರೆ ವಾಸುನಾಗುವನೆಂದು ಕಣ್ಣೆತ್ತಿ ನೋಡಿದಾಗ ನನಗೆ ಹೊಳೆಯಿತು. ಈ ಸಹಸ್ರಮುಖದ ಸಂಗಮಕ್ಕೆ ನಾನು ಕರುಣೆಬಟ್ಟೆ. ಅಯ್ಯೋ ಎನಿಸಿತು. "ಏನಾಗಿದೆ'' ? ಎಂದೆ.

"ತೂತು ಬಿದ್ದಿದೆ, '' ಎಂದು ತಂಬಿಗೆಯಲ್ಲಿ ಕಣ್ಣಿಟ್ಟು ಆಕಾಶದಲ್ಲಿಯ ಸಹಸ್ರಾಕ್ಷನನ್ನು ನೋಡಿದನು.

"ನೀರು ಸೋರುವವೇನು; "

" ನೀರಷ್ಟೇ ಅಲ್ಲ ಕಾಳುಗಳು ಸಹ ಸೋರಿ ಹೋಗುವವು.''

" ಕಾಳು ತುಂಬಿಡುವೆಯಾ ? ''

"ಕಾಳು ಕೂಡಿಸಿ ತರುವೆ'' ಎಂದು ತೊಳೆಯಿಟ್ಟ ದೈನ್ಯವನ್ನು ಕಣ್ಣೀರಿನಿಂದ ಹರಿಸಿದನು.

ನಾನು ಕೇಳುವ ಮಾತಿಗೆ ಅವನು ಕೊಡುವ ಉತ್ತರವು ಇಂದಿನ ಪ್ರಸಂಗವನ್ನಷ್ಟೇ ಸಂಬಂಧಿಸಿದಂತಿರಲಿಲ್ಲ.. ಹಿಂದಿನದೊಂದು ಪ್ರಸಂಗಕ್ಕೆ ಇಂದಿನ ಮಾತುಗಳಿಂದ ಗುರಿಯಿಟ್ಟು ಎಸೆಯುತ್ತಿರುವನೆಂದು ತಿಳಿದೆನು.

"ವಿಶೇಷವೇನು; '' ಎಂದು ಮಾತು ಆರಂಭಿಸದೆ.

" ಎರಡು ಬಿಲ್ಲಿ ಇದ್ದರೆ ಕೊಡು.'' ಎಂಬು ತನ್ನ ಬಳೆಚೂರಿನಂತಹ ಬೆರಳುಗಳನ್ನು ಮುಂದೆ ಚಾಚಿದೆನು.

" ಈ ಬೆರಳುಗಳಲ್ಲಿ ನನ್ನ ದುಡ್ಡು ನಿಲ್ಲುವವೋ? " ಎಂದೆನು

"ಒಂದು ಕೈಕೆಳಗೆ ಇನ್ನೊಂದು ಕೈಹಾಕಿ ನಿಲ್ಲಿಸಿಕೊಳ್ಳುವೆನು, '' ಎಂದು ಅವನ ದಾರಿದ್ರ್ಯವು ತನ್ನ ಯಾಚನೆಯ ಪರೀಕ್ಷೆಯಲ್ಲಿ ಹೊಂದಿದ ತರಬೇತನ್ನು ಸ್ಪಷ್ಟಪಡಿಸಿತು. ನನಗೆ ನಿನ್ನಿನ ಪ್ರಸಂಗವು ಥಕ್ಕನೆ ನೆನಪಾಗಿ " ಶಂಭುಲಿಂಗಪ್ಪನ ಮನೆಗೆ ಹೋಗಿದ್ದೆಯಾ? " ಎಂದು ಕೇಳಿದೆನು

" ಹೋಗಿದ್ದೆ. ಮಾಡಿದೆ. ಅದರ ಪರಿಣಾಮ ಈ ತಂಬಿಗೆಯನ್ನು ಬೆಸೆಯಹಚ್ಚಿದೆ.'' ಎಂದು ಮಾತು ಮುಗಿಸದೆ ನಿಂತನು.

" ರಾಮಾ! '' ಎಂದನು. ದೈನ್ಯವು ಸ್ವರವ್ಯಂಜನಗಳಲ್ಲಿ ಸಮರಸವಾಗಿದ್ದಿತು. ಒಮ್ಮೆ ನನ್ನನ್ನು ಒಮ್ಮೆ ತನ್ನನ್ನು ನೋಡಿ ಮಾತು ಮುಂದರಿಸಿದನು "ನೀನು ನಿನ್ನೆ ಹೇಳಿದಂತೆ ಇಂದು ಮುಂಜಾವಿನಲ್ಲಿ ಎದ್ದೆನು. ಸ್ನಾನವನ್ನು ಮಾಡಿದೆನು. ಒಗೆದ ಅಂಗಿಟೊಪ್ಪಿಗೆಗಳನ್ನು ಮಾಡಿ ಶಂಭುಲಿಂಗಪ್ಪನ ಮನೆಗೆ ಹೋದೆನು '' ಎಂದು ಗಲ್ಲದ ಮೇಲಿದ್ದ ಗುಂಗಾಡಿಯನ್ನು ಹೊಡೆದು ತಿಕ್ಕಿದನು. ನಾನು ನಕ್ಕೆನು. ನಗೆಯನ್ನು ಮುಚ್ಚಲಿಕ್ಕೆ " ಮುಂದೆ'' ಎಂದೆನು.

" ಶಂಭುಲಿಂಗಪ್ಪನು ಅಂಗಡಿಯ ಬಾಗಿಲನ್ನು ತೆರೆಯುತ್ತಿದ್ದನು. ನಾನು ನಮಸ್ಕಾರ ಎಂದೆ. ಅವನು ಸಹ ನಮಸ್ಕಾರ ಎಂದನು. ನನ್ನ ಆಯುಷ್ಯದಲ್ಲಿ ಇವನಷ್ಟು ವಿನಯದಿಂದ ನಮಿಸಿದವರನ್ನು ಕಾಣೆ. ಒಳ್ಳೆಯವನೆಂದುಕೊಂಡೆ"

" ನಿನಗೆ ಯಾರೂ ನಮಸ್ಕರಿಸಲಿಲ್ಲವೇ ?'' ಎಂದು ನಕ್ಕೆನು.

" ಇಲ್ಲ ಎಂದು ತಲೆಯನ್ನು ಅಲುಗಾಡಿಸಿದನು.

" ಒಳ್ಳೇದು ಮುಂದೆ "

"ಅವನ ಕಟ್ಟೆಯಮೇಲೆ ಕುಳಿತೆ. ಶಂಭುಲಿಂಗಪ್ಪನು ತನ್ನ ಸಾಮಾನುಗಳನ್ನು ಸರಿಪಡಿಸಿ ಹಚ್ಚಿದನು. ಚುನಮರಿಯ ಬುಟ್ಟಿ ಪುಟ್ಟಾಣಿಯ ಬುಟ್ಟಿ ಹುರಿಗಡಲೆಯ ಬುಟ್ಟಿ. ಅವಲಕ್ಕಿಯ ಬುಟ್ಟಿ, ಮುಂತಾದವುಗಳನ್ನು ಓರಣದಿಂದ ಹಚ್ಚಿ ನಡುವೆ ತಾನು ಕುಳಿತನು. ಹಣದ ಪೆಟ್ಟಿಗೆಯನ್ನು ಮುಂದಿಟ್ಟುಕೊಂಡು ಅರಿಷಿಣ - ಕುಂಕುಮವನ್ನು ಏರಿಸಿ ಅಳೆಯುವ ಮಾಪುಗಳನ್ನು ಹತ್ತಿರದಲ್ಲಿಟ್ಟುಕೊಂಡು ನನ್ನ ಕಡೆಗೆ ನೋಡಲು ಒಂಬತ್ತು ಹೊಡೆಯಿತು.

" ವಾಸಪ್ಪ ನಿನಗೆ ಓದುಬರಹ ಬರುವದೇ' ಎಂದು ಕೇಳಿದನು.

" ತುಸು ಬರುವದು' ಎಂದೆನು.

" ಮುಂದೆ ಒಳಗಿನ ಒಂದು ಸೇರು ಪುಟ್ಟಾಣಿ ಅಳೆಯಲಿಕ್ಕೆ ಹೇಳಿದನು. ನಾನು ಅಳೆದು ತಂದೆ ಅವುಗಳನ್ನೂ ಮುಂದಿನ ಬುಟ್ಟಿಯಲ್ಲಿ ಸುರವಿ ತಾನು ಅಳೆದನು. "ಎಷ್ಟು ತಂದಿದ್ದೆ? ' ಎಂದು ಕೇಳಿದನು.

" ಒಂದು ಸೇರು ' ಎಂದೆ.

" ಇಷ್ಟು ಹೆಚ್ಚಾದವು ಎಂದು ಬೊಗಸೆಯಲ್ಲಿ ಎತ್ತಿದ ಪುಟ್ಟಾಣಿಯನ್ನು ತೋರಿಸಿದನು. ನಾನು ಅಳೆದದ್ದು ಒಂದು ಸೇರು.

" ನಾನು ಅಳೆಯುವೆ ನೋಡಿರಿ' ಎಂದು ಅಳೆದು ಕೊಟ್ಟೆನು. ನನಗೆ ಅಳೆಯಲು ಹೇಳಿದನು. ನಾನು ಅಳೆದೆ ಕಡಿಮೆಯಾಯಿತು. ಮೊದಲಿನ ಸೇರಿನಲ್ಲಿ ಹೆಚ್ಚಾದದ್ದು ಇಲ್ಲಿ ಕಡಿಮೆ ಮಾಡಿ ತೋರಿಸಿದನು. ನನಗೆ ಇದರರ್ಥ ತಿಳಿಯಲಿಲ್ಲ. ಮುಂದೆ ನನಗೆ ಸಮೀಪಕ್ಕೆ ಕರೆದು ಅಳೆದು ತೆಗೆದು ಕೊಳ್ಳುವದನ್ನು ಹೇಳಿದನು. ಇದರಲ್ಲಿ ಇಷ್ಟು ಲಾಭ. ಇದರಲ್ಲಿ ಇಷ್ಟು ಲಾಭವೆಂದೂ ಹೇಳಿದನು.

"ನಿನಗೆ ತಿಳಿಯಿತೋ ? ಎಂದನು.

ಅವನ ಮಾತಿನ ರೀತಿಯೇ ತಿಳಿಯದೆ ನಾನು ಆಶ್ಚರ್ಯದಿಂದ ಹೂ ! ಎಂದೆನು.

ಮುಂದೆ ನನಗೆ ಒಂದು ಬುಟ್ಟಿಯಲ್ಲಿ ಒಂದು ಸೇರು ಬಯಮೂಗು, ಇನ್ನೊಂದು ಬುಟ್ಟಿಯಲ್ಲಿ ಎಂಟು ಸೇರು ಪುಟ್ಟಾಣಿ ಹಾಕಿದನು. ಇವುಗಳನ್ನು ಮಾರಿಕೊಂಡು ಬಾ ಎಂದು ಹೇಳಿ ನನ್ನನ್ನು ಕಳಿಸಿದನು.

"ಆಗ ಸುಮಾರು ಒಂಬತ್ತು ಗಂಟೆಯಾಗಿರಬೇಕು. ತಲೆಯ ಮೇಲೆ ಬುಟ್ಟಿಯನ್ನು ಹೊತ್ತುಕೊಂಡು ಹನುಮನ ಬೀದಿಗೆ ಬಂದೆ. ಹತ್ತಾರು ಮನೆಗಳನ್ನು ದಾಟಿರಬೇಕು. ಬಾಯಿಂದ ಯಾವ ಮಾತುಗಳೂ ಬರಲಿಲ್ಲ. ನಿನ್ನೆ ಮಲಗಿದಾಗ್ಗೆ ಪುಟ್ಟಾಣಿ, ಬಯಮೂಗು ಬೇಕೆ? ಎಂದು ಹತ್ತಾರು ಸಾರೆ ಒದರಿ ಪಾಠ ಮಾಡಿದ್ದೆನು. ಇಂದು ಹಾಳು ಅಭಿಮಾನವು ನಾಲಿಗೆಯನ್ನು ಎಳೆದು ಹಿಡಿದಿದ್ದಿತು. ಮತ್ತೆ ಎರಡು ಮನೆಗಳನ್ನು ದಾಟಿದೆ. ಎದುರಿನಿಂದ ಮಹಾದೇವನು ಬಂದು —ಇದೇನು ವಾಸು ? ಎಂದು ಕೇಳಿದನು. ನಾನು ಎಲ್ಲ ಸಂಗತಿಯನ್ನು ಹೇಳಿದೆ. ಅವನು —

" 'ಹೊಟ್ಟೆಗೆ ಏನಾದರು ಮಾಡಬೇಕಷ್ಟೇ' ಇದು ಕದ್ದು ತಿಂದು ಬದುಕುವವರಂತೆ ಕೀಳಲ್ಲ ಒಳ್ಳೆಯದಾಯಿತು ? ಎಂದು ಹುರಿದುಂಬಿಸಿದನು. ನನ್ನ ನಾಚಿಕೆಯು ಎಷ್ಟೋ ಮಾಯವಾಯಿತು. ಮತ್ತೆರಡು ಮನೆ ನಡೆದೆನು. ಒಮ್ಮೆ ಬಾಯಿ ತೆರೆದು ಪುಟ್ಟಾಣಿ—ಬಯಮೂಗು ಬೇಕೆ ! ಎಂದು ಕೂಗಿದೆನು. ಮದುವೆಯ ಹುಡುಗಿಯು ಲಗ್ನಮಂಟಪದಲ್ಲಿ ಗಂಡನ ಹೆಸರನ್ನು ಹೇಳಿದಂತೆ ನಡುಗಿದೆ. ನಡುಗುವಿಕೆಯ ಸಂಗಡ ನನ್ನ ಕರ್ತವ್ಯವು ಎಷ್ಟೋ ಜಾಗ್ರತವಾಯಿತು. ಹೆಜ್ಜೆ ಹೆಜ್ಜೆಗೆ ಅದು ದ್ವಿಗುಣತವಾಗಿ ಬೆಳೆದು ಮಂದಿ ಮಕ್ಕಳು ಇದ್ದಲ್ಲಿಯೇ ಬೇಕೆಂದು ಒದರಹತ್ತಿದೆ.

"ಹನುಮನ ಬೀದಿಯನ್ನು ಅರ್ಧ ದಾಟಿರಬೇಕು, ಬಿಸಿಬಿಸಿ ಪುಟಾಣಿ,ಬಿಸಿಬಿಸಿ ಬಯಮೂಗು ಎಂದು ಕಟ್ಟೆಯ ಮೇಲೆ ಕುಳಿತ ರಾಯರನ್ನು ನೋಡಿ ಒದರಿದೆನು. ರಾಯರು ಕರೆದರು. ಹೇಗೆ ಸೇರೆಂದು ಕೇಳಿದರು.

" ನಾನು ಬುಟ್ಟಿಯನ್ನು ಇಳಿಸಿ ಎಂಟು ಬಿಲ್ಲಿಗೆ ಸೇರು ಎಂದು ಹೇಳಿದೆನು.

ಹೂ ! ಹೀಗೇನು ಎಂದು ರಾಯರು ಹುಬ್ಬಿನ ಮೇಲೆ ಚಾಳೀಸು ಏರಿಸಿದರು.

"ಪುಠಾಣಿಯನ್ನು ನೋಡಿರಿ. ಇದೇ ಹುರಿದು ತಂದಿರುವೆ ! ಒಂದಾದರು ಒಡೆದ ಕಾಳುಂಟೇ ? ಎಂದು ಹೊಗಳಿದೆ.

"ಸುತ್ತಾಗಿ ನಿಂತ ಹುಡುಗರು ಬುಟ್ಟಿಯಲ್ಲಿ ಕೈಹಾಕಿ ಹೇಗೆ? ಎಂದು ಕೇಳಿದರು.

ಎಂಟು ಬಿಲ್ಲಿಗೆ ಸೇರು ಎಂದೆನು.

"ಆರು ಬಿಲ್ಲಿಗೆ ಸೇರು. ಪೇಟಿಯಲ್ಲಿ ಸಿಗುವವು? ಎಂದು ತಿನ್ನುತ್ತಿದ್ದ ಬಾಯಿಂದ ಮೂರು ನಾಲ್ಕು ಹುಡುಗರು ಹೇಳಿದರು.

" ಹುಡುಗರ ಮಾತಿನಿಂದ ನನ್ನ ವ್ಯಾಪಾರದ ನಿರ್ಣಯವಾಯಿತು. ರಾಯರು ಸಹ ಮೂಗು ಮುರಿದರು. ಬುಟ್ಟಿಯನ್ನು ತಲೆಯ ಮೇಲೆ ಹೇರಿಕೊಂಡು ಮುಂದೆ ಸಾಗಿದೆನು. ರಾಮದೇವರ ಓಣಿಗೆ ಬಂದೆನು.

" ಎದುರು ಕಟ್ಟೆಯ ಮೇಲೆ ಕುಳಿತ ಕೆಲ ಹೆಂಗಸರು ಕರೆದರು. ಹೆಂಗಸರು ಕೊಳ್ಳಬಹುದೆಂದು ಸಂತೋಷಪಟ್ಟೆ. ಮಕ್ಕಳು ಹಿಂಡು ಹಿಂಡಾಗಿ ಇರಲಿಲ್ಲ.

" ಹೇಗೆ ಸೇರೆಂದು ಕೇಳಿದರು.

"ನಾನು ಎಂಟು ಬಿಲ್ಲಿಗೆ ಸೇರೆಂದು ಹೇಳಿ ಬೊಗಸೆಯಲ್ಲಿ ಹಿಡಿದು ತೋರಿಸಿದೆ. ಅದರಲ್ಲಿಯ ಒಬ್ಬರು ಮಡಿವಂತರು ನೋಡೋಣತಾ ಎಂದರು ನಾನು ತುಸು ಅವರ ಕೈಗೆ ಹಾಕಿದೆ. ನನ್ನ ಮುಂದೆ ಸುಲಿದು ಬಾಯಿಗೆ ಹಾಕಿಕೊಂಡು— ಆರು ಬಿಲ್ಲಿಗೆ ಸೇರು? ಪೇಟೆಯಲ್ಲಿ ಸಿಗುವವು ಎಂದು ಆ ರಸಜ್ಞರು ನುಡಿದರು.

" ಅಹುದು ರಂಗಮ್ಮ ಆರು ಬಿಲ್ಲಿಗೆ ಸೇರು ? ಎಂದು ಇನ್ನೊಬ್ಬಳು ಅನುಮೋದಿಸಿದಳು,

"ಒಂದಿಷ್ಟು ಅಗ್ಗಮಾಡಿ ಕೊಡುವಿಯಾದರೆ ಹೇಳು? ಎಂದು ಮತ್ತೊಬ್ಬರು ಕೈ ಒಡ್ಡಿದರು. ನಾನು ಅನುಮಾನಿಸಿದೆ. ರಂಗಮ್ಮನು ಮುಂದೆ ಬಂದು

"ಅವರಿಗಷ್ಟು ಹಾಕು, ಕೊಳ್ಳುವ ಮಾಲೀಕರು ಅವರೇ! ನಾವು ಸುಮ್ಮನೆ ಮಾತಾಡುವವರು? ಎಂದು ಚರ್ವಿತ ಖಾದ್ಯವನ್ನು ಗಂಟಲಿಗೆ ನುಗಿಸಿದರು. ನಾನು ಕೊಟ್ಟೆ. ಜನರು ತಿಂದು ಏಳು ಬಿಲ್ಲಿಯಾದರೆ ತುಸು ಕೊಡು? ಎಂದು ಮೊದಲಿನವರಿಗಿಂತಲೂ ಒಂದಿಷ್ಟು ಔದಾರ್ಯವನ್ನು ತೋರಿಸಿದರು.

"ನಾನು ಹಾಗೆ ಆಗಲಾರದು. ಎಂಟು ಬಿಲ್ಲಿಗೆ ಸೇರು ! ಎಂದೆ

"ಹಾಗಾದರೆ ನೀನು ಹೋಗು ಎಂದು ಅಪ್ಪಣೆಯನ್ನು ಕೊಟ್ಟರು. ನಾನು ಬುಟ್ಟಿಯನ್ನು ತಲೆಯ ಮೇಲೆ ಹೊತ್ತಿರಲಿಲ್ಲ.—ಆ ಚೆನ್ನಿಯ ಗಂಡ ....? ಎಂದು ಮಾತಾಡಿ ನಡೆದರು. ನಾನು ಮುಂದಿನ ದಾರಿಯನ್ನು ಹಿಡಿದೆ. ಆ ಚೆನ್ನಿಯ ಗಂಡನ ಮಾತು ನನಗೆ ಮುಂದೆ ಕೇಳಿಸಲಿಲ್ಲ. ದಾರಿಗುಂಟ ನಡೆದಂತೆ —ಆ ಚೆನ್ನಿಯ ಗಂಡನ ಸುದ್ದಿಯು ನನ್ನ ಪುಠಾಣಿಗಳಿಗಿಂತ ರುಚಿಯಾದ ಮೇಲೆ ಕೊಳ್ಳುವದೆಂತು ? ಎಂದು ಹೊಳೆಯಿತು.

"ರಾಮದೇವ ಗಲ್ಲಿಯನ್ನು ದಾಟಿ, ಸ-ಮಹಾದೇವಿ ಓಣಿಯನ್ನು ಹಿಂದೆ ಹಾಕಿ ಹೂಗಾರ ವೇಶಕ್ಕೆ ಬಂದೆನು. ದಾರಿಯಲ್ಲಿ ಒಬ್ಬಿಬ್ಬರು ಕರೆದರು ಧಾರಣೆಯನ್ನು ಕೇಳಿದರು. ಬುಟ್ಟಿಯಲ್ಲಿ ಕೈಹಾಕಿ ಜುಲುಮೆಯಿಂದ ತೆಗೆದುಕೊಂಡು ಕಡಿಮೆ ಬೆಲೆಗೆ ಬೇಡಿ ತಿರಸ್ಕರಿಸಿದರು. ನಾನು ನಿರುಪಾಯನಾಗಿ ದೇಶಪಾಂಡೆಯವರ ಓಣಿಗೆ ಬಂದೆ. ಅಲ್ಲಿಯ ಜೈನ ಹೆಣ್ಣು ಮಕ್ಕಳು ಕಾಳಿಗೆ ಕಾಳು ಕೊಡೆಂದು ಬೇಡಿದರು. ನಾನು ಹಣಕ್ಕೆ ಕೊಡುವೆನೆಂದು ಹೇಳಿದೆನು. ನೋಡೋಣ ಬುಟ್ಟಿಯನ್ನು ಇಳಿಸು? ಎಂದರು. ನನಗೆ ಗೊತ್ತು ಕಾಳಿಗೆ ಕಾಳು ಬೇಡುವವರು ಕೊಳ್ಳುವವರಲ್ಲ. ತಿಂದು ತೇಗುವವರು ಎಂದು ಮುಂದಿನ ಓಣಿಗೆ ನಡೆದನು.

ಈಗ ಅನಂತಶಯನನ ಬೀದಿಗೆ ಬಂದೆ ನನಗೆ ಶುಭದರ್ಶನವಾದಂತೆ ಎನಿಸಿತು. ಎರಡು ಮನೆ ದಾಟಿರಬೇಕು. ಮೂರು ಮನೆಯವರು ನನ್ನನ್ನು ಒಮ್ಮೆಲೆ ಕೂಗಿದರು."ನಮ್ಮಲ್ಲಿ ಮೊದಲು ನಮ್ಮಲ್ಲಿ '' ಎಂಬ ಮಕ್ಕಳ ಕೂಗು ನನ್ನನ್ನು ಹರ್ಷದಲ್ಲಿ ತೇಲಿಸಿಕೊಂಡು ಹೋಯಿತು. ಇಬ್ಬರ ಮನೆಗೂ ಬರುವೆ ಬಾಯಿ ಎಂದು ಹೇಳಿ ಮೂರನೆಯವರ ಮನೆಗೆ ಹೋದೆ. ಕಟ್ಟೆಯ ಮೇಲೆ ಬುಟ್ಟಿಯನ್ನು ಇಳಿಸಿ, ಆ ಎರಡು ಮನೆಯವರಿಗೆ ಈಗ ಬರುವೆ ಎಂದು ಮುಖ ತಿರುಗಿಸಿ ಹೇಳಿದೆ. ಅವರು ಸುಮ್ಮನಾಗಿದ್ದರು.

" ಬರ್ರಿ ತಾಯಿ' ಎಂದೆನು.

" -'ಹೇಗೆ ಸೇರು?' ಬುಟ್ಟಿಯಲ್ಲಿ ಕೈಹಾಕಿ ಕೇಳಿದರು.

" ಎಂಟು ಬಿಲ್ಲಿಗೆ ಸೇರು'

" ಎಲ್ಲಿಯವು? '

" ಇಲ್ಲಿಯವೇ?'

" ಪುಠಾಣಿ ಗೋಕಾಕದವೇನು?'

" ಇರಬಹುದು? ಎಂದು ತಿಳಿಯದೆ ಹೂಗುಟ್ಟಿ ನುಡಿದೆ.

" ಮಾಪು ತೋರಿಸು?

" ನಾನು ತೋರಿಸಿದೆನು.

" ಹೊಸ ಮಾಪು?

" ಅಹುದು?

" ಆರು ಬಿಲ್ಲಿಗೆ ಒಂದು ಸೇರಾದರೆ ಒಂದು ಸೇರು ಕೊಡು'ಎಂದರು.

" ಆಗದು' ಎಂದು ಹೇಳಿ ಬುಟ್ಟಿಯನ್ನು ಹೊತ್ತೆನು. ಎರಡನೆಯವರ ಮನೆಯ ಮುಂದೆ ಬಂದು ' ಬಯಮೂಗು ಬೇಕೆ? ' ಎಂದು ಕೂಗಿದೆನು. ಎರಡು–ಮೂರು ಸಲ ಕೂಗಿದೆನು ಮತ್ತೊಮ್ಮೆ ಒದರಿದೆನು. ಉತ್ತರವಿಲ್ಲ. ಮೂರನೆಯವರ ಮನೆಯ ಮುಂದೆ ಒದರಿದೆ. ಅವರು ಸಹ ಮಾತಾಡಲಿಲ್ಲ. ಬಾ ಎಂದು ಆತುರದಿಂದ ಒದರಿದವರು ಒಬ್ಬರೂ ಬರಲಿಲ್ಲ. ನೋಡುತ್ತ ಒಳಗೆ ಕುಳಿತಿದ್ದ ನನಗೆ ಕಾರಣ ತಿಳಿಯಲಿಲ್ಲ. ಮುಂದೆ ನಿಲ್ಲುವದು ಸರಿಯಲ್ಲವೆಂದು ತಿರುಗಿದೆ. ಮನೆಯನ್ನು ಸೇರುವ ಒಬ್ಬ ಹುಡುಗನು ಎದುರಾದನು.

" ಪುಠಾಣಿಬೇಕೆ? 'ಎಂದೆನು.

" ಒಂದಿಷ್ಟು ಕಣ್ಣುಬಿಟ್ಟು ನನ್ನ ಕಡೆಗೆ ನೋಡಿ 'ಅವರ ಮನೆಗೆ ಮೊದಲು ಹೋದವನು ಅಲ್ಲಿಯೆ ಮಾರಿಕೊಂಡು ಹೋಗು ಇಲ್ಲೇಕೆ ಬಂದೆ? ನನಗೆ ಬೇಡ ಎಂದು ಒಳಗೆ ಹೋದನು.

" ನನಗೆ ಅರ್ಥವಾಯಿತು. ಅವರು ಇವರು ಬಡಿದಾಡಿರುವರು. ಒಬ್ಬರು ಒಬ್ಬರ ಶತ್ರುಗಳು. ಅವರ ಮನೆಗೆ ಮೊದಲು ಹೋದದ್ದರಿಂದ ಇವರಿಗೆ ಸಿಟ್ಟು. ಆ ಸಿಟ್ಟಿನ ಸೇಡು ನನ್ನ ಬಯಮೂಗು ಕೊಳ್ಳದಿರುವದು.

" ಮುಂದೆ ಓಣಿಯುದ್ದಕ್ಕೂ ಒದರಿದೆ. ಎಂಟು ಬಿಲ್ಲಿಗೆ ಸೇರು ಕೊಳ್ಳುವ ಪುಣ್ಯಾತ್ಮನು ದೊರಕಲಿಲ್ಲ.

" ಬಾಯಿ ಒಣಗಿ ಬಂದಿತು. ಹೊಟ್ಟೆಯಲ್ಲಿ ಕಾಗೆಗಳು ಹಾರಾಡಹತ್ತಿದವು. ಕಾಲುಗಳು ಸೋತು ಹೋದವು. ಮಧ್ಯಾಹ್ನದ ೧೨ ಗಂಟೆಯ ವರೆಗೆ ತಿರುಗಿದರೂ ಒಬ್ಬನು ಸಹ ಕೊಳ್ಳಲಿಲ್ಲ. ಮಧ್ಯಾಹ್ನದ ಆಸೆಯನ್ನಿಟ್ಟುಕೊಂಡು ಶಂಭುಲಿಂಗಪ್ಪನ ಮನೆಗೆ ಹೋದೆನು. ಅವನು ಅಂಗಡಿಯನ್ನು ಮುಚ್ಚುವ ಎತ್ತುಗಡೆಯಲ್ಲಿದ್ದನು. ನನ್ನನ್ನು ನೋಡಿ ಆದರದಿಂದ ಬರಮಾಡಿಕೊಂಡು 'ಎಷ್ಟು ಮಾರಿದವು ಎಂದು ನಕ್ಕು ಕೇಳಿದೆನು.

ನಾನು ಬುಟ್ಟಿಯನ್ನು ಇಳಿಸಿ ಸುಮ್ಮನೆ ನಿಂತೆ.

" ಎಷ್ಟು ಮಾರಿದವು ಎಂದು? ' ಕಾಳು ಅಳೆಯ ಹತ್ತಿದನು.

" ನಾನು ಮತ್ತೆ ಸುಮ್ಮನೆ ನಿಂತೆ.

"ಪುಠಾಣಿ ಗಿರಪಾವು ಮಾರಿದೆ ಇರಲಿ; ಮಧ್ಯಾಹ್ನದಲ್ಲಿ ಇದಕ್ಕೂ ಹೆಚ್ಚು ಮಾರಬಹುದು? ಎಂದನು.

ನನ್ನ ತಲೆಯಲ್ಲಿ ಚಿಟಿ ಚಿಟಿ ಹೊಡೆಯಹತ್ತಿತು. ಹಣೆಯ ಮೇಲಿನ ಬೆವರು ಒರಿಸುತ್ತಾ ಪೇಟೆಯ ದಾರಿಯನ್ನು ನೋಡುತ್ತ ಕುಳಿತೆ.

" ಬಯಮೂಗು ಸಹ ಗಿರಪಾವೇ ಮಾರಿದೆ, ಅಂತೂ ಅರ್ಧ ಸೇರು ಮಾರಿದೆ. ಮೊದಲನೆಯ ದಿವಸದ ವ್ಯಾಪಾರದಿಂದ ನೀನು ಹೆದರುವ ಕಾರಣವಿಲ್ಲ. ೮–೧೦ ದಿವಸಗಳು ಹೋಗಲಿ ನಿನಗೆ ಯಶವು ಸಿಗುವದು. ಅರವತ್ತು ಸಾವಿರ ವಸತಿಯ ಬೆಳಗಾಂವಿಯ ಜನರಿಗೆ ೪–೬ ರೂಪಾಯಿಯ ಬಯಮೂಗು–ಪುಠಾಣಿ ಮಾರುವದು ಕಷ್ಟದ ಕೆಲಸವಲ್ಲ. ಆದರೆ ಇಂದಿನ ಒಂದೇ ಪ್ರಸಗಂಕ್ಕೆ ಎದೆಗುಂದಬೇಡ? ಎಂದು ಮಾತು ಮುಗಿಸಿದನು.

"ನಾಲಗೆಯು ಅಂಗಳಕ್ಕ ಅಂಟಿಕೊಂಡಿದ್ದರೂ ಏನು ಹೇಳಲಿ ಎಂಬುವದೇ ತಿಳಿಯಲಿಲ್ಲ.

"ಒಳ್ಳೇದು ಮಧಾಹ್ನ ಮೂರು ಗಂಟೆಗೆ ಬಾ. ಆ ಅಣೆ ನಿನ್ನಲ್ಲಿಯೇ ಇರಲಿ'' ಎಂದನು.

" ನಾನು ಒಂದಿಷ್ಟು ಗಾಬರಿಯಾದೆ. 'ಕೊನೆ ಮಾತು ಕೇಳಿಸಲಿಲ್ಲ' ಏನು?' ಎಂದೆನು.

" ಅರ್ಧ ಸೇರು ಕಾಳು ಮಾರಿದ ಬೆಲೆಯು?'

" ಅದು ನನ್ನಕಡೆಗಿಲ್ಲ?'

—೧೫ನೇ ಪುಟ ನೋಡಿರಿ

ಕೊಡಗು ಮತ್ತು ಕರ್ನಾಟಕ

ಕೊಡಗು ಸ್ವತಂತ್ರ ಪ್ರಾಂತವೆಂದು ಹಿಂದುಸ್ತಾನ ಸರಕಾರದ ನೇರವಾದ ನಿಯಂತ್ರಣದಲ್ಲಿದ್ದರೂ ಅದು ಕರ್ನಾಟಕದ ಪ್ರಮುಖವಾದ ಒಂದು ಭಾಗವಾಗಿದೆ. ಬ್ರಿಟಿಶರು ತಮ್ಮ ಸೌಕರ್ಯಕ್ಕಾಗಿ ವಿಶೇಷತಃ ಅಲ್ಲಿರುವ ತೋಟಿಗರ ಲಾಭಕ್ಕಾಗಿ ಅದನ್ನು ಕರ್ನಾಟಕದಿಂದ ಪ್ರತ್ಯೇಕವಾಗಿರಿಸಿರುವರು. ಭಾವೀ ಪ್ರಾಂತ ರಚನೆಯಲ್ಲಿ ಈ ಅನ್ಯಾಯದ ಪರಿಮಾರ್ಜನೆಯಾಗಿ ಕೊಡಗು ಕರ್ನಾಟಕದಲ್ಲಿ ಸಮಾವೇಶವಾಗುವುದವಶ್ಯವಾಗಿದೆ. ಕೊಡಗು ಕರ್ನಾಟಕದ ಪ್ರಮುಖ ಭಾಗವಾದುದರಿಂದಲೆ ಕಾಂಗ್ರೆಸ್ಸು ೧೯೨೧ ನೆಯ ಇಸ್ವಿಯಿಂದಲೆ ಅದನ್ನು ಕರ್ನಾಟಕ ಪ್ರಾಂತದಲ್ಲಿ ಕೂಡಿಸಿದೆ. ಅಂದಿನಿಂದ ಅದರ ಕಾರ್ಯಕಲಾಪಗಳು ಕಾಂಗ್ರೆಸ್ಸಿನ ಮಟ್ಟಿಗೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಮುಖಾಂತರವಾಗಿಯೆ ನಡೆಯುತಿವೆ. ಆದರೆ ಇತ್ತೀಚೆ ಮಾತ್ರ ಯುರೋಪಿಯನ್ ತೋಟಿಗರ ಪ್ರಚಾರ, ವರ್ಚಸ್ಸಿನ ಮೂಲಕ ಕೊಡಗಿನ ಕೆಲವರಲ್ಲಿ ಪ್ರತ್ಯೇಕತೆಯ ಭಾವನೆ ಬೆಳೆಯುತ್ತಲಿದೆ. ಕರ್ನಾಟಕ ಪ್ರಾಂತದಲ್ಲಿ ಕೂಡುವುದರಿಂದ ಕೊಡಗಿನ ಉನ್ನತಿಯಾಗದೆಂಬ ಕಲ್ಪನೆ ಅವರಲ್ಲಿ ಬಲಿಯಹತ್ತಿದೆ. ಇದು ಘಾತಕವಾದುದೆಂದು ಬೇರೆ ಹೇಳಬೇಕಿಲ್ಲ. ಕರ್ನಾಟಕದ ಕನ್ನಡಿಗರ ಸಾರ್ವಾಂಗಿಕ ಉನ್ನತಿಯಾಗಬೇಕಾದರೆ ಕನ್ನಡ ಮಾತಾಡುವವರೆಲ್ಲರ ಏಕೀಕರಣವಾಗುವುದತ್ಯವಶ್ಯವಾಗಿದೆ. ಕನ್ನಡಿಗರು ಹಲವು ಆಡಳಿತಗಳಲ್ಲಿ ಸಿಡಿದು ಹೋಗುವುದರಿಂದ ಉದ್ಧಾರವಾಗದು. ಕೊಡಗಿನ ಕನ್ನಡಿಗರು ಮತ್ತು ಇತರರು ಈ ಮಾತನ್ನು ಮನದಂದು ತಮ್ಮ ಧೋರಣವನ್ನು ತದನುಸಾರವಾಗಿ ನಿರ್ಧರಿಸಬೇಕು. ಭಾವೀ ಘಟನಾ ಸಮಿತಿಯಲ್ಲಿ ಈ ಪ್ರಶ್ನೆಯ ನಿರ್ಣಯವಾಗಬಹುದು. ಈಗಾಗಲೆ ಕೊಡಗಿನಿಂದ ಶ್ರೀ ಪೂಣಚ್ಚ ಇವರು ಘಟನಾ ಸಮಿತಿಯ ಸದಸ್ಯರಾಗಿ ಆರಿಸಲ್ಪಟ್ಟಿರುವರು. ಕಾಂಗ್ರೆಸ್ ನಿರ್ಧರಿಸಿ ಸಲಹೆ ಕೊಡುವ ವರೆಗೆ ಶ್ರೀ ಪೂಣಚ್ಚರವರು ಕೊಡಗಿನ ಪ್ರತ್ಯೇಕತೆ ಇಲ್ಲವೆ ಏಕೀಕರಣದ ಬಗ್ಗೆ ಅಭಿಪ್ರಾಯ ವ್ಯಕ್ತಮಾಡಬಾರದೆಂದು ಪ್ರಾಂತಾಧ್ಯಕ್ಷರು ಸಲಹೆ ಕೊಟ್ಟಿದ್ದಾರೆ. ಕೊಡಗಿನ ಕನ್ನಡಿಗರು ಈ ಸಂಬಂಧದಲ್ಲಿ ಪರಕೀಯ ಸ್ವಾರ್ಥಸಾಧಕರ ಮಾತುಗಳಿಗೆ ಬಲಿಬೀಳದೆ ತಮ್ಮ ಹಿತ ಕನ್ನಡಿಗರಲ್ಲಿ ಕೂಡಿಕೊಂಡು ಹೋಗುವುದರಲ್ಲಿಯೆ ಅಡಕವಾಗಿದೆಂಬುದನ್ನರಿತು ಆ ರೀತಿಯ ಪ್ರಚಾರವನ್ನೆ ಮಾಡಬೇಕು. ಶ್ರೀಪೂಣಚ್ಚರವರಾದರೂ ಘಟನಾ ಸಮಿತಿಯಲ್ಲಿ ಆ ರೀತಿಯ ಅಭಿಪ್ರಾಯವನ್ನೆ ವ್ಯಕ್ತಪಡಿಸಿ ಕೊಡಗು ಕರ್ನಾಟಕದಲ್ಲಿ ಸಮಾವೇಶವಾಗುವಂತೆ ನೋಡಿಕೊಳ್ಳುವರೆಂದು ನಂಬುತ್ತೇವೆ.

ಮೈಸೂರು ಪ್ರಜಾಪ್ರತಿನಿಧಿ ಸಭೆ

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಆಯವ್ಯಯ ಅಧಿವೇಶನ ಕಳೆದ ವಾರ ದಿವಾಣರ ಅಧ್ಯಕ್ಷತೆಯಲ್ಲಿ ನಡೆಯಿತು. ಮೈಸೂರು ಪ್ರಗತಿಪರ ಸಂಸ್ಥಾನವಾದುದರಿಂದ ಆರ್ಥಿಕಾಭಿವೃದ್ಧಿಯತ್ತ ಹೆಚ್ಚಾಗಿ ಗಮನಿಸುತಿದೆ. ಆದರಿಂದ ಅದರ ಆಯವ್ಯಯಗಳನ್ನು ನಿರೀಕ್ಷಿಸುವದು ಬೋಧಪ್ರದವಾಗಬಹುದು. ಸಂಸ್ಥಾನ ಸರಕಾರದವರು ಆರ್ಥಿಕಾಭಿವೃದ್ಧಿಯ ಯೋಜನೆಗಳನ್ನು ಕೈಕೊಂಡಿದ್ದರಿಂದ ೧ ಕೋಟಿ ರೂಪಾಯಿ ಉತ್ಪನ್ನವಿದ್ದುದು ೧೦ ಕೋಟಿಗೇರಿದೆ. ಇನ್ನು ಮುಂದೆ ಯುದ್ಧ ನಿಂತದ್ದರಿಂದ ಉತ್ಪನ್ನ ಕಡಿಮೆಯಾದರೂ ಯುದ್ಧೋತ್ತರ ಕಾಲದ ವೆಚ್ಚ ಮಾತ್ರ ಕಡಿಮೆಯಾಗವು ಆದರೂ ಅರ್ಥಸಚಿವರು ಮುಂಗಾಣಿಯನ್ನು ಬಾಯಿಗೂಡಿಸಲು ಪ್ರಯತ್ನಿಸಿದ್ದಾರೆ. ಆಪನ್ನಿಧಿಯಿಂದ ೬೦ ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಕೊರತೆಯನ್ನು ಹೋಗಲಾಡಿಸಿದ್ದಾರೆ. ಈ ಸಲ ಮೈಸೂರು ಸಂಸ್ಥಾನದಲ್ಲಿ ಆಹಾರ ಪರಿಸ್ಥಿತಿ ತೀರ ನಿಕೃಷ್ಟ ಸ್ಥಿತಿಗೆ ಮುಟ್ಟಿದ್ದರಿಂದ ಸರಕಾರದವರು ಅತ್ತ ಗಮನಿಸಬೇಕಾಗಿದೆ. ೩೩ ಲಕ್ಷ ಜನ ಬರಗಾಲಪೀಡಿತರಾಗಿರುವರು. ಅವರಲ್ಲಿ ೨೦ ಲಕ್ಷ ಜನರನ್ನು ಇಡೀ ವರ್ಷ ತೌಪಿಸಬೇಕಾಗಿದೆ. ಇದರ ಸಹಾಯಾರ್ಥ ೪೯ ಲಕ್ಷ ರೂಪಾಯಿಗಳ ಅನೇಕ ಕಾಮಗಾರಿಗಳನ್ನು ಪ್ರಾರಂಭಿಸಿದ್ದಾರೆ. ಆಹಾರ ಪೂರಯಿಕೆಗಾಗಿಯೂ ಸರಕಾರದವರು ಪ್ರಯತ್ನಿಸುತಿರುವರು. ಹೊರಗಿನಿಂದ ಆಹಾರ ಪದಾರ್ಥಗಳನ್ನು ತರಿಸುವುದಲ್ಲದೆ ಸಂಸ್ಥಾನದಲ್ಲಿಯೂ ಹೆಚ್ಚಿಗೆ ಆಹಾರ ಬೆಳೆಸಲೂ ಪ್ರಯತ್ನಿಸುತಿರುವರು. ಇದೆಲ್ಲ ಸಂಸ್ಥಾನದ ಪ್ರಗತಿಪರ ದೃಶ್ಯವು. ಆದರೆ ಇಷ್ಟರಿಂದ ನಾವು ಸಂಪೂರ್ಣ ಸಮಾಧಾನ ಹೊಂದುವಂತಿಲ್ಲ. ಏಕೆಂದರೆ ಸಂಸ್ಥಾನದ ಅರ್ಥಿಕ ಅಭಿವೃದ್ಧಿಯಿಂತಾಗಿದ್ದರೂ ಜನತೆಯ ಬಡತನ, ಅಜ್ಞಾನ, ಅನಾರೋಗ್ಯ ಕಡಮೆಯಾಗಿಲ್ಲ. ರಾಜಕೀಯ ಪರಿಸ್ಥಿತಿಯಲ್ಲಿಯ ಮೈಸೂರು ಇನ್ನೂ ಹಿಂದಿದೆ. ಪ್ರಜಾಪ್ರತಿನಿಧಿ ಸಭೆಯಲ್ಲಿ ಸರಕಾರಕ್ಕೆ ಸೋಲಿನ ಮೇಲೆ ಸೋಲು ಬರಹತ್ತಿದೆ. ಪ್ರಜಾಪ್ರತಿನಿಧಿಗಳು ಸರಕಾರದ ಧೋರಣದ ಬಗ್ಗೆ ಅಸಂತುಷ್ಟರಾಗಿರುವರೆಂಬುದನ್ನು ಈ ಪರಾಜಯಮಾಲೆ ವ್ಯಕ್ತಪಡಿಸುತ್ತದೆ. ಮೈಸೂರು ಸರಕಾರದವರು ವಿಶೇಷತಃ ಶ್ರೀಮನ್ಮಹಾರಾಜರು ಇತ್ತ ಗಮನಿಸುವುದವಶ್ಯವಾಗಿದೆಂದು ಹೇಳದಿರಲಾರೆವು.

ಹೊಣೆಗಾರ ಸರಕಾರದ ಬೇಡಿಕೆ

ಮೈಸೂರು ಪ್ರಜೆಗಳು ಹೊಣೆಗಾರ ಸರಕಾರದ ಬಗೆಗೆ ಎಷ್ಟೊಂದು ಆತುರರಾಗಿರುವರೆಂಬುದು ಅಲ್ಲಿನ ಸಭೆ ಸಮ್ಮೇಲನಗಳಲ್ಲಿ ಪಾಸಾಗುತಿರುವ ಗೊತ್ತುವಳಿಗಳಿಂದ ಸರಕಾರಕ್ಕೆ ಮಾಡಿಕೊಳ್ಳುತಿರುವ ಅರಿಕೆಗಳಿಂದ, ಮತ್ತು ಮುಖಂಡರ ಹೇಳಿಕೆಗಳಿಂದ ಸ್ಪಷ್ಟವಾಗುವುದು. ಸಂಸ್ಥಾನಗಳಲ್ಲಿ ಈಗ ಜಾಗ್ರತಿಯಾದ್ದರಿಂದ ಹಿಂದಿನಂತೆ ಅಲ್ಲಿನ ಪ್ರಜೆಗಳು ಹತ್ತಿಕ್ಕಲ್ಪಡಲಾರರು. ನ್ಯಾಯ್ಯವಾದ ಹಕ್ಕುಬಾಧ್ಯತೆಗಳನ್ನು ಪಡೆಯುವಲ್ಲಿ ಅವರು ಉತ್ಸುಕರಾಗಿರುವರು. ಪ್ರಜೆಗಳಿಗೆ ಹೊಣೆಗಾರಿಕೆಯನ್ನು ಕೊಟ್ಟು ಅವರ ಸಲಹೆ ಸಹಕಾರಗಳಿಂದ ಆಡಳಿತ ನಡೆಸಿದ್ದಾದರೆ ಸಂಸ್ಥಾನಿಕರನ್ನು ಕಿತ್ತೊಗೆಯಬೇಕೆಂಬ ಚಳವಳಿ ನಡೆಯಲಾರದು. ಇತ್ತೀಚೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ ಪಕ್ಷದ ಧುರೀಣರು ಮೈಸೂರು ಸಂಸ್ಥಾನದಲ್ಲಿ ಕೂಡಲೆ ಹೊಣೆಗಾರ ಸರಕಾರ ಸ್ಥಾಪಿಸಬೇಕೆಂದು ಕೇಳಿಕೊಳ್ಳುವ ಮನವಿಯನ್ನು ಅಧ್ಯಕ್ಷ ದಿವಾಣರಿಗೆ ೩ನೇ ತಾರೀಕು ಸಮರ್ಪಿಸಿದರು. ಪ್ರಜಾಪ್ರತಿನಿಧಿ ಸಭೆಯ ಒಟ್ಟುಗಿರುವ ೩೦೦ ಸದಸ್ಯರಲ್ಲಿ ೨೦೦ ಕ್ಕಿಂತ ಹೆಚ್ಚು ಸದಸ್ಯರು ಇದಕ್ಕೆ ಸಹಿ ಮಾಡಿರುವರು. ಎಂದ ಬಳಿಕ ಪ್ರಜಾಪ್ರತಿನಿಧಿಗಳ ಬೇಡಿಕೆಗೆ ಎಷ್ಟೊಂದು ಬೆಂಬಲವಿದೆಂಬುದು ಸ್ಪಷ್ಟವಾಗುವುದು. ಈ ಸಲ ಸರಕಾರದವರು ಹೊಣೆಗಾರ ರಾಜ್ಯವನ್ನು ಸಂಸ್ಥಾನದಲ್ಲಿ ಸ್ಥಾಪಿಸದಿದ್ದರೆ ಕಾಂಗ್ರೆಸ್ಸಿನವರು ಮತ್ತೆ ಹೋರಾಟ ಹೂಡುವರೆಂದೂ ಈ ಸಲದ ಹೋರಾಟದಲ್ಲಿ ಒಪ್ಪಂದಕ್ಕೆ ಎಡೆಯಿಲ್ಲ; ಕಾಂಗ್ರೆಸ್ಸು ಬೇಡಿದ್ದು ದೊರೆಯಲೇಬೇಕೆಂದೂ ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರು ಸಾರಿದ್ದಾರೆ. ಇಂಥ ಉಗ್ರವಾದ ಹೋರಾಟವನ್ನು ತಡೆಯುವುದು ಸರಕಾರದ ಧೋರಣವನ್ನೇ ಅವಲಂಬಿಸಿದೆ. ಸಂಸ್ಥಾನ ಸರಕಾರದವರು ಜನರ ಬೇಡಿಕೆಯನ್ನು ಸಹಾನುಭೂತಿಪೂರ್ವಕ ವಿಚಾರಿಸಿ ಕೂಡಲೆ ಹೊಣೆಗಾರ ರಾಜ್ಯ ಸ್ಥಾಪನೆಗಾಗಿ ಮುಂದಾಗಬೇಕೆಂದು ಅಗ್ರಹಪಡಿಸುತ್ತೇವೆ.

ಮುಂಬಯಿ ಮಂತ್ರಿಗಳ ಮುನ್ನಡೆ

ಮುಂಬಯಿ ಕಾಂಗ್ರೆಸ ಮಂತ್ರಿಮಂಡಳದವರು ಪ್ರಾಂತದ ಸಾರ್ವಾಂಗಿಕ ಅಭಿವೃದ್ಧಿಗಾಗಿ ಒಳ್ಳೆ ಉತ್ಸಾಹದಿಂದ ಅಣಿಯಾಗಿರುವರೆಂಬುದು ಅವರ ವಿವಿಧ ಯೋಜನೆಗಳಿಂದ ಸ್ಪಷ್ಟವಾಗುವುದು. ಪ್ರಾಂತದಲ್ಲಿಯ ನಿರಕ್ಷರತೆಯ ನಿರ್ಮೂಲ, ಮದ್ಯಪಾನ ಪ್ರತಿಬಂಧ, ಒಕ್ಕಲತನ ಅಭಿವೃದ್ಧಿಯ ಯೋಜನೆ, ಪ್ರಾಥಮಿಕ ಶಿಕ್ಷಣ ಪ್ರಗತಿ ಮೊದಲಾದವುಗಳ ಬಗ್ಗೆ ಅವರು ಸಿದ್ಧಪಡಿಸಿದ ಯೋಜನೆಗಳು ಪ್ರಗತಿಪರವಾಗಿವೆ. ಈ ಯೋಜನೆಗಳ ರೂಪರೇಷೆಗಳನ್ನು ಇದೇ ಸಂಚಿಕೆಯಲ್ಲಿ ಬೇರೆ ಕಡೆ ಕೊಟ್ಟಿದ್ದೇವೆ. ಈ ರೀತಿ ಜನತೆಯ ಉನ್ನತಿ ಯೋಜನೆಗಳಲ್ಲದೆ ಕಳ್ಳಪೇಟೆ, ಲಂಚಗುಳಿತನ ಮೊದಲಾದವುಗಳನ್ನು ತೊಡೆದು ಹಾಕಲೂ ಉದ್ಯುಕ್ತರಾಗಿರುವರು. ಮಂತ್ರಿಗಳ ಈ ಕಾರ್ಯ ಸಂಪೂರ್ಣ ಯಶಸ್ವಿಯಾಗಬೇಕಾದರೆ ಜನತೆಯ ಹಾರ್ದಿಕ ಸಹಕಾರ ಸರಕಾರಕ್ಕೆ ಸಿಕ್ಕಲಿಕ್ಕೆ ಬೇಕು. ಯಾವದೇ ಕಾರಣದಿಂದ ಈ ಸಹಾಯ ಸಲ್ಲಿಸುವದನ್ನು ಯಾರೂ ಬಿಡಲಾರರು. ಮುಂಬಯಿ ಪ್ರಾಂತದಲ್ಲಿ ಎಲ್ಲ ಪಕ್ಷಪಂಗಡಗಳವರೂ ಸರಕಾರದ ಕಾರ್ಯದಲ್ಲಿ ಸಹಕರಿಸಿ ಪ್ರಾಂತದ ಸಾರ್ವಾಂಗಿಕ ಉನ್ನತಿಯನ್ನು ಸಾಧಿಸಿದ ಶ್ರೇಯಸ್ಸಿನಲ್ಲಿ ಪಾಲುಗಾರರಾಗಬೇಕೆಂದು ಬಿನ್ನವಿಸುತ್ತೇವೆ.

ನಾಗರಿಕ ಶಾಂತಿಪಾಲನೆ

ಹಿಂದುಸ್ತಾನವಿಂದು ಒಂದು ಬಗೆಯ ಕ್ರಾಂತಿಯ ಸ್ಥಿತಿಯಲ್ಲಿದೆ. ಸ್ವಾತಂತ್ರ್ಯ ಸಂಪಾದನೆಗಾಗಿ ಅದು ಚಡಪಡಿಸುತ್ತದೆ. ಈ ಸಮಯದಲ್ಲಿ ಆಯಾ ಹಿತಸಂಬಂಧಗಳಲ್ಲಿ ತಿಕ್ಕಾಟನಡೆಯುವುದುಸ್ವಾಭಾವಿಕ. ಇದರ ಲಾಭ ತೆಗೆದುಕೊಂಡು ಸ್ವಾರ್ಥಸಾಧಕರು ಮತ್ತು ಪರಕೀಯರು ನಲಿದಾಡುತಿರುವರು. ದೇಶದಲ್ಲಿ ಅಶಾಂತ ಪರಿಸ್ಥಿತಿಯನ್ನು ಹಬ್ಬಿಸಲೂ ಪ್ರಯತ್ನಿಸುತಿರುವರು. ಅಂತೆಯೆ ಇದೀಗ ಅಧಿಕಾರಾರೂಢವಾದ ಸರಕಾರಗಳು ಈ ತಿಕ್ಕಾಟವನ್ನು ಹೋಗಲಾಡಿಸಲು ಶಾಂತಿಯನ್ನು ಪ್ರಸ್ಥಾಪಿಸಲು ಹೆಣಗಬೇಕಾಗಿದೆ. ಹಿಂದುಸ್ತಾನದಂಥ ಅನೇಕ ಜಾತಿ ಪಕ್ಷ ಪಂಗಡಗಳಿಂದ ಕೂಡಿದ ದೇಶದಲ್ಲಿ ಶಾಂತಿಯನ್ನು ಕಾಪಾಡಿಕೊಳ್ಳುವುದು ಕಷ್ಟದ ಕೆಲಸವೆಂದು ಬೇರೆ ಹೇಳಬೇಕಿಲ್ಲ. ಅದರಲ್ಲಿಯೂ ಭಾವೀ ರಾಜ್ಯಘಟನೆಯ ಸಂಬಂಧದಲ್ಲಿ ಕಾಂಗ್ರೆಸ್ ಲೀಗ ಅಂಬೇಡಕರ ಪಕ್ಷ ಮೊದಲಾದವರಲ್ಲಿ ಮತಭೇದವಾದ್ದರಿಂದ ಇದರ ಕಹಿ ಫಲಗಳನ್ನು ದೇಶ ಅನುಭವಿಸಬೇಕಾಗಿದೆ. ಇದರ ಮೂಲಕವೇ ಅಲ್ಲಲ್ಲಿ ತಿಕ್ಕಾಟಗಳೇಳುತ್ತವೆ. ಸ್ವಾರ್ಥಸಾಧಕರು ಇದರ ಲಾಭ ಪಡೆಯುತಿರುವರು. ಮುಂಬಯಿಯ ವರ್ಲಿ ಭಾಗದಲ್ಲಿ ಕಳೆದ ವಾರ ನಡೆದ ತಿಕ್ಕಾಟದ ಕಾರಣವು ಇದೇ ಎಂದು ಹೇಳಬಹುದಾಗಿದೆ. ಇದರಿಂದ ಉಂಟಾದ ಅಶಾಂತ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕಾಗಿ ಮುಂಬಯಿ ಸರಕಾರದವರು ಯೋಗ್ಯ ಉಪಾಯ ಕೈಕೊಂಡಿದ್ದು ಅಭಿನಂದನೀಯವಾಗಿದೆ. ವರಳಿಯಲ್ಲಿ ಸ್ಪೃಶ್ಯ ಹಿಂದುಗಳು ಮತ್ತು ಅಸ್ಪೃಶ್ಯ ಹಿಂದುಗಳಲ್ಲಿ ಆದ ತಿಕ್ಕಾಟವನ್ನು ಹೋಗಲಾಡಿಸಲು ಶಾಂತತೆಯನ್ನು ಕಾಯ್ದುಕೊಳಲು ಸರಕಾರದವರು ಮತ್ತು ಡಾ. ಅಂಬೇಡಕರರು ಪ್ರಕಟನೆಯನ್ನು ಹೊರಡಿಸಿ ಜನತೆಗೆ ಬಿನ್ನವಿಸಿಕೊಂಡಿರುತ್ತಾರೆ. ವರ್ಲಿ ಭಾಗದಲ್ಲಿಯ ಜನರು ಮತ್ತು ಇತರ ಕಡೆಗಳಲ್ಲಿರುವವರು ಇದರ ಮರ್ಮವನ್ನು ತಿಳಿದುಕೊಂಡು ಎಲ್ಲೆಡೆ ಶಾಂತಿಯನ್ನು ಸಂಸ್ಥಾಪಿಸಲು ಪ್ರಯತ್ನಿಸಬೇಕು. ದೇಶದಲ್ಲಿ ಹಬ್ಬಬಹುದಾದ ಅಶಾಂತತೆಯನ್ನು ಯಾದವಿಯನ್ನು ಹೊಡೆದು ಹಾಕಲು ಎಲ್ಲ ಬಗೆಯ ಉಗ್ರ ಉಪಾಯ ಕೈಕೊಳ್ಳಲಾಗುವದೆಂದು ಮುಂಬಯಿ ಗೃಹಮಂತ್ರಿ ಮುರಾರಜಿಯವರು ಮಾಂಡವಿಯ ಸಭೆಯಲ್ಲಿ ಆಶ್ವಾಸನ ಕೊಟ್ಟಿದ್ದಾರೆ. ದೇಶದಲ್ಲಿ ಶಾಂತತೆ ನೆಲಿಸಬೇಕಾದರೆ ಜನತೆಯ ಹಾರ್ದಿಕ ಸಹಕಾರ ಅವಶ್ಯವಾಗಿದೆ. ಜನರು ತಮ್ಮ ಹೊಣೆಯನ್ನರಿತುಕೊಂಡು ಸರಕಾರ ಕೈಕೊಳ್ಳಬಹುದಾದ ಎಲ್ಲ ಉಪಾಯಗಳಲ್ಲಿ ತಮ್ಮ ನೆರವನ್ನು ನೀಡಿ ದೇಶ ಸುಖಸಮೃದ್ಧಿಯಲ್ಲಿ ನಲಿದಾಡುವಂತೆ ನೋಡಿಕೊಳ್ಳಬೇಕೆಂದು ಅಗ್ರಹಪಡಿಸುತ್ತೇವೆ.

ಬಟ್ಟೆಯ ಕೊರತೆ

ಮಾರ್ಚ ತಿಂಗಳಲ್ಲಿ ಹಿಂದುಸ್ತಾನದಲ್ಲಿ ಸಾಕಷ್ಟು ಬಟ್ಟೆಯಿದೆಂದು ಹೇಳಲಾಗುತಿತ್ತು ಅದರೀಗ ನೋಮಧ್ಯದಲ್ಲಿ ಹಿಂದುಸ್ತಾನದಲ್ಲೆಲ್ಲ ಬಟ್ಟೆಯ ಕೊರತೆಯಾಗಿದೆ. ಸರಕಾರದವರಿಗೂ ಇದು ಗೊತ್ತಾದ್ದರಿಂದ ಜುಲೈ ಕೊನೆಯ ವರೆಗೆ ಬಟ್ಟೆ ನಿರ್ಯಾತವನ್ನು ಅವರು ನಿಲ್ಲಿಸಿದ್ದಾರೆ. ಮೊದಲಿನಿಂದಲೆ ಸರಕಾರದವರು ಸಾಕಷ್ಟು ಜಾಗ್ರತೆ ವಹಿಸಿದ್ದರೆ ಇಂದು ಈ ಬಗೆಯ ಪರಿಸ್ಥಿತಿ ಪ್ರಾಪ್ತವಾಗುತಿದ್ದಿಲ್ಲ. ನಿಜವಾಗಿ ವಿಚಾರ ಮಾಡಿದರೆ ಈಗ ಬಟ್ಟೆಯ ಕೊರತೆಯಾಗಬಾರದು. ಯುದ್ಧ ನಿಂತು ಹೋದ್ದರಿಂದ ಸೈನ್ಯಕ್ಕಾಗಿ ವ್ಯಯವಾಗುತ್ತಿದ್ದ ಬಟ್ಟೆ ಪ್ರಮಾಣ ಕಡಿಮೆಯಾಗಿದೆ. ಆದರೆ ಗಿರಣಿಗಳಿಗೆ ಕಲ್ಲಿದ್ದಲಿ ಪೂರಯಿಕೆ ಸಾಕಷ್ಟಿಲ್ಲದ್ದರಿಂದ ಹರತಾಳ ಸಂಪು ಮೊದಲಾದವುಗಳು ಅಲ್ಲಲ್ಲಿ ಹೂಡಲ್ಪಟ್ಟದ್ದರಿಂದ ಬಟ್ಟೆ ಉತ್ಪಾದನೆಯೆ ಕಡಮೆಯಾಗಿದೆ. ಈ ರೀತಿ ಅಂದಾಜಿಗಿಂತ ಕಡಮೆ ಬಟ್ಟೆ ಗಿರಣಿಗಳಲ್ಲಿ ಸಿದ್ಧವಾದ್ದರಿಂದ ಇಂದು ಬಟ್ಟೆಯ ಕೊರತೆ ವಿಶೇಷವೆನಿಸಹತ್ತಿದೆ. ಈ ಕೊರತೆಯನ್ನು ಹೋಗಲಾಡಿಸುವುದಕ್ಕಾಗಿ ಸರಕಾರದವರು ಪ್ರಯತ್ನಿಸುವುದತ್ಯವಶ್ಯವಾಗಿದೆ. ನಿರ್ಯಾತವನ್ನು ನಿಲ್ಲಿಸುವುದನ್ನು ಕೇವಲ ಜುಲೈ ಕೊನೆಯ ವರೆಗೆ ಮಾತ್ರವೆಂದೇ ನಿರ್ದಿಷ್ಟಪಡಿಸದೆ ಪರಿಸ್ಥಿತಿ ಸುಧಾರಿಸುವ ವರೆಗೆ ಬಟ್ಟೆ ಹೊರಗೆ ಹೋಗದಂತೆ ದಕ್ಷತೆ ವಹಿಸಬೇಕು. ಕಳ್ಳ ಮಾರ್ಗಗಳಿಂದ ಬಟ್ಟೆ ಹೋಗುತಿರುವುದನ್ನು ಕೂಡಲೆ ನಿಲ್ಲಿಸಬೇಕು. ಗಿರಣಿಗಳಲ್ಲಿಯೂ ಹೆಚ್ಚು ಉತ್ಪಾದನೆಯಾಗಬೇಕು. ಚಿಲ್ಲರೆ ಕಾರಣಗಳಿಗಾಗಿ ಕೆಲಸಗಾರರು ಸಂಪು ಮೊದಲಾದ್ದನ್ನು ಹೂಡದಂತೆ ಏರ್ಪಡಿಸಬೇಕು. ಗಿರಣಿಯೊಡೆಯರು ಈ ಸಂಬಂಧದಲ್ಲಿ ಸ್ವಲ್ಪ ತ್ಯಾಗ ಮಾಡಲು ಮುಂದಾಗಬೇಕು. ತಮಗೆ ಸಿಕ್ಕುತಿರುವ ಹೇರಳ ಹಣದಲ್ಲಿ ಕೆಲಅಂಶವನ್ನಾದರೂ ಕೆಲಸಗಾರರಿಗೆ ಕೊಡುವಂತೆ ನೋಡಿಕೊಳ್ಳಬೇಕು. ಕಾಂಗ್ರೆಸ್ಸಿನ ಮತ್ತು ಮಹಾತ್ಮಾ ಗಾಂಧಿಯವರ ಪ್ರಯತ್ನದಿಂದ ಖಾದಿಯು ಹಿಂದೀಯರಲ್ಲಿ ಪ್ರಸಾರವಾಗುತಿದೆ. ಆದರೆ ಅದಕ್ಕೆ ಸಾಕಷ್ಟು ಪ್ರೋತ್ಸಾಹನೆ ಸಿಕ್ಕುತಿರುವುದಿಲ್ಲ. ಇದರಿಂದ ಅದು ಹೆಚ್ಚು ಪ್ರಚಾರವಾಗಲೊಲ್ಲದು. ಈ ಕಡೆಗೂ ಸರಕಾರದವರು ಗಮನಿಸಬೇಕು. ಮುಖ್ಯಮಂತ್ರಿಗಳು ಹೇಳಿದಂತೆ ಖಾದಿಯಲ್ಲಿ ನಡುವಿನ ದಲ್ಲಾಳರ ಲಾಭ ನಿಂತು ಅದು ಹೆಚ್ಚು ಅಗ್ಗವಾಗಬೇಕು. ಬಡವರಿಗೂ ಕೊಳ್ಳುವಂತೆ ಅನುಕೂಲವಾಗಬೇಕು. ಹೀಗೆ ಗಿರಣಿ ಬಟ್ಟೆ ಮತ್ತು ಖಾದಿಯ ಉತ್ಪಾದನೆ ಹೆಚ್ಚಿಸಿ ಬಟ್ಟೆಯ ಕೊರತೆ ಬೇಗನೆ ಹಿಂಗುವಂತೆ ನೋಡಿಕೊಳ್ಳಬೇಕಾಗಿ ಸೂಚಿಸುತ್ತೇವೆ.

ತತ್ವಗಳನ್ನು ಬಿಡಕೂಡದು

ಕಾಂಗ್ರೆಸಿಗರು ಇತ್ತೀಚೆ ತಾವು ಇಟ್ಟುಕೊಂಡ ನಿಯಮ ನಿಬಂಧನೆಗಳನ್ನೆ ಮುರಿಯುತ್ತ ನಡೆದುದರಿಂದ ಆ ನಿಯಮಗಳನ್ನು ತೆಗೆದುಹಾಕಬೇಕೆಂದು ಕಾಂಗ್ರೆಸ್ಸಿನ ಸೂತ್ರಧಾರಿಗಳಾದ ಮಹಾತ್ಮಾ ಗಾಂಧಿಯವರು ಸೂಚಿಸಿದ್ದಾರೆ. ಶಾಂತ ಮತ್ತು ನ್ಯಾಯಸಮ್ಮತವಾದ ಮಾರ್ಗಗಳಿಂದ ಸ್ವರಾಜ್ಯ ಸಂಪಾದಿಸುವದೇ ತನ್ನ ಧ್ಯೇಯವೆಂದು ಕಳೆದ ೨೫ ವರ್ಷಗಳಿಂದ ಕಾಂಗ್ರೆಸು ಇಟ್ಟುಕೊಂಡಿದೆ. ಘಟನೆಯಲ್ಲಿ ಅದಕ್ಕೆ ಮುಖ್ಯಸ್ಥಾನ ಅದರಂತೆಯೆ ಕಾಂಗ್ರೆಸ ಅಧಿಕಾರಿಗಳು ಸತತ ಖಾದಿಧಾರಿಗಳಾಗಿರಬೇಕೆಂಬ ನಿಯಮವಿದೆ. ಈ ನಿಯಮಗಳನ್ನೂ ಕಾಂಗ್ರೆಸ್ಸಿಗರು ನಿಷ್ಠೆಯಿಂದ ಪಾಲಿಸದಿರುವದರಿಂದ ಅವನ್ನೂ ತೆಗೆದು ಹಾಕಬೇಕೆಂದು ಮಹಾತ್ಮರು ಸೂಚಿಸಿದ್ದಾರೆ. ಘಟನೆಯಲ್ಲಿಯ ನಿಯಮಗಳನ್ನು ಹೀಗೆ ಬದಲಿಸುತ್ತ ಹೋಗುವುದು ಇದಕ್ಕೆ ತಕ್ಕ ಉಪಾಯವಲ್ಲೆಂದು ಹೇಳಬಹುದಾಗಿದೆ. ನಿಯಮಗಳನ್ನು ಹೆಚ್ಚು ಒತ್ತಾಯದಿಂದ ಪಾಲಿಸಹಚ್ಚುವುದೆ ತಕ್ಕ ಉಪಾಯವು. ಒಂದೊಂದೆ ನಿಯಮವನ್ನು ಹೀಗೆ ಬಿಟ್ಟುಗೊಡುತ್ತ ನಡೆಯುವುದರಿಂದ ಯಾವ ನಿಯಮಗಳೂ ಪಾಲಿಸಲ್ಪಡಲಾರವು. ಗಾಂಧೀಜಿಯವರು ಹೊಸದಾಗಿ ಸೂಚಿಸಬಹುದಾದ ನಿಯಮಗಳನ್ನು ಕಾಂಗ್ರೆಸ್ಸಿಗರು ಪಾಲಿಸುವರೆಂದು ಯಾರು ಹೊಣೆ ಹೊರುವರು. ಆ ನಿಯಮಗಳನ್ನೂ ಪಾಲಿಸುವದಿಲ್ಲೆಂದು ಕಂಡು ಬಂದರೆ ಗಾಂಧೀಜಿಯವರು ಅವನ್ನೂ ಬಿಡಲು ಹೇಳುವರೆ? ಹೀಗೆ ಎಲ್ಲ ನಿಯಮಗಳನ್ನೂ ಬಿಟ್ಟುಗೊಡುತ್ತ ಹೋದರೆ ಕಾಂಗ್ರೆಸ್ಸಿಗರು ಯಾವ ನಿಯಮ ನಿಬಂಧನೆಗಳಿಗೂ ಒಳಗಾಗದೆ ಸ್ವೇಚ್ಛಾಚಾರಿಗಳಾಗಬಹುದು. ಸಂಸ್ಥೆಯ ದೃಷ್ಟಿಯಿಂದ ಇದು ಘಾತಕವಾದುದು ಆದುದರಿಂದ ಗಾಂಧೀಜಿಯವರು ಇಂಥ ಅವಶ್ಯಕ ನಿಯಮಗಳಲ್ಲಿ ಬದಲಾವಣೆಗಳನ್ನು ಸೂಚಿಸದೆ ಈಗಾಗಲೆ ಇದ್ದ ನಿಯಮಗಳನ್ನು ಪಾಲಿಸುವಂತೆ ಕಾಂಗ್ರೆಸ್ಸಿಗರನ್ನು ಒತ್ತಾಯಪಡಿಸಬೇಕು ಪಾಲಿಸದಿದ್ದವರ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕು. ತಾವೇ ಗೊತ್ತುಪಡಿಸಿದ ನಿಯಮಗಳನ್ನು ಬಿಟ್ಟುಗೊಡಲು ಕಾಂಗ್ರೆಸ್ಸಿಗೆ ಮಹಾತ್ಮರು ಸೂಚಿಸಬೇಕಾದರೆ ಅವರೆಷ್ಟು ನೊಂದಿಕೊಂಡಿರಬೇಕೆಂಬುದನ್ನು ನೆನೆದು ಕಾಂಗ್ರೆಸ್ಸಿಗರೂ ಈ ನಿಯಮಗಳನ್ನು ಅಕ್ಷರಶಃ ಪಾಲಿಸಬೇಕೆಂದು ಅಗ್ರಹ ಪಡಿಸುತ್ತೇವೆ.

ಬ್ರಿಟಿಶ ರಾಯಭಾರದ ಯೋಜನೆ ಮುಸ್ಲಿಂಲೀಗ ಸ್ವೀಕರಿಸಿತು

ಅವರಲ್ಲಿ ಪಾಕಿಸ್ತಾನದ ಬೀಜ ಅಡಕವಾಗಿದೆಯಂತೆ

ಯೋಜನೆ ಬಗ್ಗೆ ಮಹಾತ್ಮರ ಆಶಾವಾದ

ಬ್ರಿಟಿಶ್ ಮಂತ್ರಿಗಳ ಘೋಷಣೆಯನ್ನು ವಿಚಾರ ಮಾಡಿ ಕಾಂಗ್ರೆಸ್ ಮುಸ್ಲಿಂ ಲೀಗ ಶೀಖ ಮೊದಲಾದವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರಷ್ಟೆ. ಅದರಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗಿನವರು ಎತ್ತಿದ ಆಕ್ಷೇಪಗಳಿಗೆ ಸಮಾಧಾನವೆಂದು ಮಂತ್ರಿತ್ರಯರು ಸ್ಪಷ್ಟೀಕರಣವನ್ನು ಪ್ರಸಿದ್ಧಿಸಿದರು. ಅನಂತರ ದೇಶದಲ್ಲಿ ಒಂದು ಬಗೆಯ ಜಾಡ್ಯ ಪರಿಸ್ಥಿತಿಯುಂಟಾದಂತಾಗಿತ್ತು. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗಿನವರು ತಮ್ಮ ಕೊನೆಯ ನಿರ್ಣಯ ಮಾಡದೆ ಇದ್ದುದರಿಂದ ಮುಂದೇನು ಎಂದು ಎಲ್ಲೆಡೆ ಒಂದು ಬಗೆಯ ವಿವಂಚನೆಯುಂಟಾಗಿತ್ತು. ಮುಸ್ಲಿಂ ಲೀಗಿನವರು ಈಗಾಗಲೇ ಸಭೆ ಸೇರಿ ವಿಚಾರ ನಡೆಸಿ ಪ್ರಚಂಡ ಬಹುಮತದಿಂದ ರಾಯಭಾರದ ಯೋಜನೆಯನ್ನು ಸ್ವೀಕರಿಸುವ ನಿರ್ಣಯ ಮಾಡಿತು. ಕೇವಲ ೧೩ ಜನ ಮಾತ್ರ ವಿರುದ್ಧ ಮತ ಕೊಟ್ಟರಂತೆ. 'ನಾವು ಲೆತ್ತವನ್ನು ಚಲ್ಲಿದ್ದೇವೆ' ಎಂದು ಬ್ಯಾ. ಜಿನ್ನಾರವರು ಸಭೆಯ ನಂತರ ನುಡಿದರು. ಕಾಂಗ್ರೆಸ ವರ್ಕಿಂಗ ಕಮಿಟಿಯು ೯ನೇ ತಾರೀಕಿಗೆ ಕೂಡಿ ತನ್ನ ಕೊನೆಯ ನಿರ್ಣಯ ಮಾಡಬಹುದು. ಮಧ್ಯಂತರ ಅವಧಿಯಲ್ಲಿ ವಾಯಿಸರಾಯರು ಕಾಂಗ್ರೆಸ್ ಮತ್ತು ಲೀಗ ಧುರೀಣರನ್ನು ಭೆಟ್ಟಿಯಾಗಿ ಪರಿಸ್ಥಿತಿಯನ್ನು ತಿಳಿ ಮಾಡಲು ಪ್ರಯತ್ನಿಸುತಿರುವರು. ಈಗ ಹೊರಬಿದ್ದ ಅಂಶಗಳನ್ನು ನೋಡಿದರೆ ಪರಿಸ್ಥಿತಿ ಆಶಾದಾಯಕವಿದೆಯೆಂದು ಹೇಳಬಹುದು.

ಬ್ಯಾ. ಜಿನ್ನಾರ ಭಾಷಣ

ಮುಸ್ಲಿಂ ಲೀಗಿನ ಕ್ರಿಯಾ ಸಮಿತಿಯ ಸಭೆ ಸೇರಿ ವಿಚಾರ ವಿನಿಮಯ ಮಾಡಿದ ನಂತರ ಕೊನೆಯ ನಿರ್ಣಯ ಮಾಡಲು ಕೌನ್ಸಿಲ್ಲಿಗೆ ಅಧಿಕಾರ ಕೊಟ್ಟಿತು. ಹೀಗೆ ಮಾಡುವಾಗ ತನ್ನ ಅಭಿಪ್ರಾಯವನ್ನು ಕೌನ್ಸಿಲ್ಲಿಗೆ ತಿಳಿಸಿತು. ಲೀಗ ಧುರೀಣರಾದ ಬ್ಯಾ. ಜಿನ್ನಾರವರೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವರು. ಅವರು ಮಂತ್ರಿಗಳ ಸ್ಪಷ್ಟೀಕರಣದಿಂದ ಸಮಾಧಾನ ಹೊಂದಿದ್ದರೂ ಲೀಗ ಕೌನ್ಸಿಲ್ಲಿನ ಬಹುಮತದ ನಿರ್ಣಯಕ್ಕೆ ತಲೆ ಬಾಗುವ ಧೋರಣವನ್ನು ತಳೆದಂತೆ ತೋರುವದು. ಲೀಗಿನ ಕೌನ್ಸಿಲ್ ಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ಹೇಳಿ ಮುಂದಿನ ನಿರ್ಣಯವನ್ನು ಕೈಕೊಳ್ಳಲು ಕೌನ್ಸಿಲ್ಲಿಗೆ ಅವಕಾಶ ಕೊಡುವದಾಗಿ ತೋರುತ್ತದೆ. ಲೀಗ ಕೌನ್ಸಿಲ್ಲಿನ ಸಭೆ ೫ನೇ ತಾರೀಕಿನಿಂದ ಪ್ರಾರಂಭವಾಯಿತು. ಒಟ್ಟಿಗಿರುವ ೪೭೫ ಸದಸ್ಯರಲ್ಲಿ ೩೦೦ಕ್ಕಿಂತ ಹೆಚ್ಚು ಸದಸ್ಯರು ಬಂದಿದ್ದರು.

ಬ್ಯಾ. ಜಿನ್ನಾರವರು ಮಂತ್ರಿತ್ರಯರ ಘೋಷಣೆಯ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ ಹೀಗೆ ಹೇಳಿದರು. ಮೊದಲು ಅವರು ಮಂತ್ರಿತ್ರಯರ ಯೋಜನೆ, ಮೂರೂ ಪಕ್ಷಗಳೊಳಗೆ ನಡೆದ ಪತ್ರವ್ಯವಹಾರ, ತಮ್ಮ ಅಭಿಪ್ರಾಯ ಮೊದಲಾದ್ದನ್ನು ವಿವರಿಸಿದರು. ವರ್ಕಿಂಗ ಕಮಿಟಿ ಇದರ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಬಹುದಾಗಿತ್ತು. ಆದರೆ ಲೀಗ ಕೌನ್ಸಿಲ್ಲೇ ಕೂಡುವದಿದ್ದುದರಿಂದ ಆ ಹೊಣೆಯನ್ನು ಕ್ರಿಯಾ ಸಮಿತಿ ಹೊರಬಯಸಲಿಲ್ಲೆಂದು ಹೇಳಿದರು;

ನಾವು ಸಂಪೂರ್ಣ ಹಾಗೂ ಸಾರ್ವಭೌಮ ಪಾಕಿಸ್ತಾನ ಸ್ಥಾಪಿಸಿದ ಹೊರತು ಮುಸಲ್ಮಾನಹಿಂದುಸ್ತಾನಕ್ಕೆ ಸಮಾಧಾನವಿಲ್ಲ. ಬ್ರಿಟಿಶ್ ಮಂತ್ರಿತ್ರಯರು ನಿಜಾಂಶಗಳನ್ನು ಬಚ್ಚಿಟ್ಟದ್ದು ಹಾಗೂ ಅವರು ಮುಂದೆ ಮಾಡಿದ ಕಾರಣ ಮತ್ತು ಪ್ರತಿಪಾದನೆಗಳು ಕೇವಲ ಕಾಂಗ್ರೆಸ್ಸನ್ನು ಸಂತೈಸುವ ಹಾಗು ಸಂತುಷ್ಟಗೊಳಿಸುವ ಉದ್ದೇಶದವಿರುವವು. ನಿಜವಾಗಿ ನೋಡಿದರೆ ಅವರ ಯೋಜನೆಯಲ್ಲಿಯೇ ಪಾಕಿಸ್ತಾನದ ತಳಹದಿಯಿರುವದೆಂದು ಬ್ಯಾ. ಜಿನ್ನಾರವರು ಹೇಳಿ ಬ್ರಿಟಿಶ್ ಮಂತ್ರಿತ್ರಯರು ಮಾಡಿದ ಮಹಾ ಪ್ರಮಾದವಿದೆಂದು ಹೇಳಿದರು. ಇದರ ಪರಿಣಾಮವಾಗಿ ಕಾಂಗ್ರೆಸ ಪತ್ರಿಕೆಗಳು ಹಾಗೂ ಹಿಂದೂ ಜನರು ಹರ್ಷಭರಿತರಾಗಿರುವರು. ಪಾಕಿಸ್ತಾನ ನಿರಾಕರಿಸಲ್ಪಟ್ಟಿದ್ದರೂ ಅದು ಸಕ್ಕರೆ ಹಚ್ಚಿದ ಗುಳಿಗೆಯೆಂಬುದು ಅವರಿಗೆ ಗೊತ್ತಾಗುವದಿಲ್ಲ. ಅದರಲ್ಲಿ ಸ್ವಲ್ಪೇ ಸಕ್ಕರೆ ಇದ್ದುದರಿಂದ ಕಾಂಗ್ರೆಸ ಪತ್ರಿಕೆಗಳಿಗೆ ಹಿಂದುಗಡೆ ಅದು ಸಕ್ಕರೆರಹಿತ ಗುಳಿಗೆಯೆಂದೆನಿಸೀತು ಎಂದು ಅವರು ಹೇಳಿದರು. 'ನಾವು ಸದಾ ಜಗಳಾಡುತ್ತ ಇರುವದು ಶಕ್ಯವಿಲ್ಲ' ಎಂದು ನಾನು ನುಡಿದುದರ ಅರ್ಥವನ್ನು ಹಲವರು ವಿಪರೀತ ಮಾಡಿಕೊಂಡಂತೆ ಕಾಣುತ್ತದೆ. ಜಿನ್ನಾರವರು ಹಾದಿಗೆ ಬಂದರೆಂದು ಅವರು ಕೂಗಾಟ ಎಬ್ಬಿಸಿದ್ದಾರೆ. ನಾವು ಸದಾ ಜಗಳಾಡುತ್ತ :ಕೂಡ್ರುವದು ಶಕ್ಯವಿಲ್ಲೆಂದು ಹೇಳಿದ್ದು ಕೇವಲ ನಮಗಷ್ಟೇ ಸಂಬಂಧಿಸದೆ ಎಲ್ಲ ಪಕ್ಷಗಳಿಗೂ ಅನ್ವಯಿಸುವದೆಂಬುದನ್ನು ಯಾರೂ ಮರೆಯಬಾರದು. ಮುಸಲ್ಮಾನರು ಈ ವರೆಗೆ ಸಹಿಸಿದ ಕಷ್ಟನಷ್ಟಗಳನ್ನು ಹೇಳಲಾಸಲ್ಲ. ೬ ವರ್ಷಗಳ ಹಿಂದೆ ಮುಸಲ್ಮಾನರು ಅಳಿದು ಹೋಗುವ ಸ್ಥಿತಿಯಲ್ಲಿದ್ದರು. ಜೀವನದ ಪ್ರತಿಯೊಂದು ಅಂಗದಲ್ಲಿ ಅವರು ಕಷ್ಟಕ್ಕೀಡಾಗಿರುವರು. ಈ ಕಷ್ಟನಷ್ಟ ಕೊನೆಗಾಣಬೇಕಾದರೆ ಪಾಕಿಸ್ತಾನದ ಹೊರತು ಅನ್ಯ ಮಾರ್ಗವಿಲ್ಲ. ನಮ್ಮ ಮಾರ್ಗದಲ್ಲಿ ವಿಘ್ನಗಳು ಬರಬಹುದು. ಆದರೆ ನಮ್ಮ ಗುರಿಯಿಂದ ನಾವು ಎಷ್ಟೂ ಕದಲುವದಿಲ್ಲ. ವಿಲಂಬವು ಬ್ರಿಟಿಶ್ ಸರಕಾರಕ್ಕಾಗಲಿ ಹಿಂದುಗಳಿಗಾಗಲಿ ಹಿತಕರದ್ದಾಗಿಲ್ಲೆಂದು ಪುನಃ ನಾನು ಹೇಳುತ್ತೇನೆ. ಸ್ವಾತಂತ್ರ್ಯ ಬೇಗನೆ ಬೇಕಾಗಿದ್ದರೆ ಪಾಕಿಸ್ತಾನವನ್ನು ಅವರು ಮಾನ್ಯ ಮಾಡಬೇಕು. ಒಪ್ಪಿದರೆ ಒಳಿತಾಯಿತು ಇಲ್ಲದಿದ್ದರೂ ನಾವು ಅದನ್ನು ಗಳಿಸಿಕೊಳ್ಳುವೆವು. ಈ ಬಗ್ಗೆ ಯಾವ ಸಾಧನ ಅವಲಂಬಿಸುವೆವೆಂಬುದು ಆಯಾ ಪ್ರಸಂಗಗಳಿಗನುಸಾರವಾಗಿ ನಿರ್ಣಯಿಸಲ್ಪಡುವದು ಎಂದು ಮುಂತಾಗಿ ಜಿನ್ನಾರವರು ಹೇಳಿದರು. ಜಿನ್ನಾರವರ ಈ ಭಾಷಣವನ್ನು ನೋಡಿದರೆ ಅವರ್ಮ ಬ್ರಿಟಿಶ್ ಸರಕಾರದ ಗೂಡ ಹೋರಾಡಬಯಸದೆ ಮುಂದೆ ಪಾಕಿಸ್ತಾನದಬಗ್ಗೆ ಕಾಂಗ್ರೆಸ್ಸಿನ ಗೂಡವೇ ಹೋರಾಟವನ್ನು ಹೂಡುವ ಧೋರಣ ತಳೆದಿರುವರೆಂಬುದು ಗೊತ್ತಾಗುವದು.

ಅಸ್ಪೃಶ್ಯರ ಬೇಡಿಕೆ

ಅಖಿಲ ಭಾರತ ಅಸ್ಪೃಶ್ಯ ಮಹಾಮಂಡಳದ ಕಾರ್ಯಕಾರೀ ಸಮಿತಿಯವರು ಬ್ರಿಟಿಶ್ ಮಂತ್ರಿತ್ರಯರ ಸೂಚನೆಗಳನ್ನು ಕುರಿತು ೨೦೦೦ ಶಬ್ದಗಳ ಗೊತ್ತುವಳಿಯೊಂದನ್ನು ಸ್ವೀಕರಿಸಿದ್ದಾರೆ ಮಂತ್ರಿತ್ರಯರು ತಮ್ಮ ಘೋಷಣೆಯಲ್ಲಿ ಅಸ್ಪೃಶ್ಯವರ್ಗದವರಿಗೆ ಮಾಡಿದ ಅನ್ಯಾಯವನ್ನು ಕೂಡಲೆ ಹೋಗಲಾಡಿಸಬೇಕೆಂದು ಬಿನ್ನವಿಸಿಕೊಂಡಿದ್ದಾರೆ. ಅದಕ್ಕೆ ತಪ್ಪಿದರೆ ಅಸ್ಪೃಶ್ಯ ವರ್ಗದವರಿಗೆ ಹೋರಾಟದ ಹೊರತು ಬೇರೆ ಮಾರ್ಗ ಉಳಿಯುವದಿಲ್ಲೆಂದೂ ಚಕ್ರವರ್ತಿ ಸರಕಾರಕ್ಕೂ ಇಂಗ್ಲಂಡದ ಕೂಲಿಕಾರ ಪಕ್ಷಕ್ಕೂ ಎಚ್ಚರಿಕೆ ಕೊಟ್ಟಿದ್ದಾರೆ. ಈ ಠರಾವಿನಲ್ಲಿ ಅಸ್ಪೃಶ್ಯರ ಕಾಯದೆಯೆಂದು ತಮಗೆ ಸಂರಕ್ಷಣೆ ಬೇಡಿರುವರು ಮುಂದಿನ ಹೋರಾಟದ ರೂಪರೇಷೆಯನ್ನು ನಿರ್ಧರಿಸಲು ಕ್ರಿಯಾ ಸಮಿತಿಯನ್ನು ರಚಿಸಲು ಹೋರಾಟ ಪ್ರಾರಂಭಿಸುವದು ಮುಂತಾದ್ದನ್ನು ನಿರ್ಧರಿಸಲ ಅಧ್ಯಕ್ಷರಿಗೆ ಅಧಿಕಾರ ಕೊಡಲಾಗಿದೆ. ಮಧ್ಯಕಾಲದ ಸರಕಾರದಲ್ಲಿ ತಾವು ಸಹಕರಿಸಲು ಅಸ್ಪೃಶ್ಯರು ಸಿದ್ಧರಿರುವರು. ಅಲ್ಪ ಸಂಖ್ಯಾಕರ ಹಕ್ಕುಬಾಧ್ಯತೆಗಳನ್ನು ರಕ್ಷಿಸಲಾಗುವದೆಂದು ಮಂತ್ರಿತ್ರಯರು ಎರಡನೆ ಪ್ರಕಟನೆಯಲ್ಲಿ ಆಶ್ವಾಸನ ಕೊಟ್ಟಿದ್ದಾರೆ ಈ ಆಶ್ವಾಸನದಂತೆ ಸೂಚನೆಗಳಲ್ಲಿ ತಿದ್ದುಪಡಿ ಮಾಡಬೇಕೆಂದು ಈ ಮಹಾಮಂಡಳದವರು ಸೂಚಿಸಿದ್ದಾರೆ.

ಮಹಾತ್ಮರ ಆಶಾವಾದ

ಮಹಾತ್ಮಾ ಗಾಂಧಿಯವರು ಮಂತ್ರಿತ್ರಯರ ಪ್ರಯತ್ನದ ಬಗ್ಗೆ ಆಶಾವಾದಿಗಳಾಗಿದ್ದಾರೆ. ಆಝಾದ ಹಿಂದ ಸೇನೆಯವರು ಅವರನ್ನು ಕಾಣಲು ಬಂದಾಗ ಪ್ರಶ್ನೆಗಳಿಗೆ ಉತ್ತರ ಕೊಡುತ್ತ ಗಾಂಧೀಜಿಯವರು ತಮ್ಮ ಆಶೆಯನ್ನು ವ್ಯಕ್ತಪಡಿಸಿದರು. "ನಮಗೆ ಸ್ವರಾಜ್ಯ ಸಿಕ್ಕುವದೆಂಬಲ್ಲಿ ಸಂದೇಹವಿಲ್ಲ. ಆದರೆ ಎಂದು ಸಿಕ್ಕುವದೆಂಬುದನ್ನು ಹೇಳುವದು ಕಠಿನವಿದೆ. ಏನಾದರೂ ಇನ್ನು ಬಹಳ ದಿನ ಹೋಗದು. ಅದಷ್ಟು ಬೇಗನೆ ಸ್ವರಾಜ್ಯ ಸ್ಥಾಪಿಸಲು ನಾವು ಆತುರರಿದ್ದು ಅದರ ಪ್ರಯತ್ನವನ್ನು ನಾವೀಗ ನಡೆಸಿರುವೆವು" ಮಂತ್ರಿತ್ರಯರ ಉದ್ದೇಶ ಒಳ್ಳೆಯದಿರುವದು. ಅವರು ಒಳ್ಳೆ ಕಳಕಳಿಯಿಂದ ಬಂದಿರುವರು, ಪ್ರಯತ್ನಿಸುತಿರುವರು. ಅವರ ಮುಖ್ಯ ಯೋಜನೆ ನನಗೆ ಸಂಬಂಧಿಸಿದೆ. ನಾವು ನಮ್ಮ ದೌರ್ಬಲ್ಯ ಹಾಗು ಚ್ಯುತಿಗಳನ್ನು ನೆನೆದುಕೊಂಡರೆ ಯೋಜನೆಯ ಗುಣಾಂಶ ನಮಗೆ ಕಂಡು ಬರದಿರಲಾರದು. ನಾವು ನಮ್ಮ ದೌರ್ಬಲ್ಯ ಹಾಗು ಅಸಾಮರ್ಥ್ಯಗಳನ್ನು ದಿಟ್ಟತನದಿಂದ ಒಪ್ಪಿಕೊಳ್ಳಬೇಕು" ಎಂದು ಮಹಾತ್ಮರು ಮತ್ತೊಂದು ಪ್ರಶ್ನೆಗೆ ಉತ್ತರಿಸಿದರು. "ನಮ್ಮ ದೌರ್ಬಲ್ಯದ ಮೂಲಕ ನಾವು ಇನ್ನೂ ಸ್ವರಾಜ್ಯಕ್ಕೆ ಅಸಮರ್ಥರಾಗಿರುವೆವೆಂದು ನಿಮ್ಮ ವಿಚಾರವಿದ್ದರೆ ಬ್ರಿಟಿಶ ಜನರು ಅದನ್ನು ಎಂದೂ ಕೊಡುವದಿಲ್ಲ. ಮತ್ತು ಅದು ನಮಗೆ ಎಂದೂ ದೊರೆಯದು. ಏಕೆಂದರೆ ಅವರು ಬಹಳ ಜಾಣ ಹಾಗು ಮುತ್ಸದಿಗಳಿರುವರೆಂಬ ಪ್ರಶ್ನೆಗೆ ಉತ್ತರ ಕೊಡುತ್ತ ಮಹಾತ್ಮರು "ನಾವು ಸ್ವಾತಂತ್ರ್ಯಕ್ಕೆ ಅಸಮರ್ಥರಿರುವೆವೆಂದು ನಾವೆನ್ನುವದಿಲ್ಲ. ನಮ್ಮ ದೌರ್ಬಲ್ಯದ ಬಗ್ಗೆ ನಾನು ಹೇಳಿದ್ದೇನೆ. ನಮ್ಮ ಕೆಲವು ಜನರ ನಡತೆ ಮತ್ತು ಮಾನಸಿಕ ವೃತ್ತಿಯ ಮೇಲಿಂದ ನನಗೆ ಅದು ಕಂಡು ಬಂದಿದೆ. ನಮ್ಮ ಕೋಟಿಗಟ್ಲೆ ಜನರ ಸಂಬಂಧದಲ್ಲಿ ನನಗೆ ಏನೂ ಗೊತ್ತಿಲ್ಲ. ರಾಯಭಾರದವರು ನಮ್ಮಲ್ಲಿಯ ಒಡಕು ಹಾಗು ಮತಭೇದ ಹೋಗಲಾಡಿಸಿ ನಾವೇ ನಮ್ಮ ಸ್ವಾತಂತ್ರ್ಯ ಕಂಡುಕೊಳ್ಳುವಂತೆ ಪ್ರಯತ್ನಿಸಲು ಬಂದಿದ್ದಾರೆ. ಅವರು ಈ ಸಲ ನಮ್ಮನ್ನು ಮೋಸಗೊಳಿಸಲು ಬಂದಿಲ್ಲ. ಈ ರೀತಿ ನನ್ನ ಅಭಿಪ್ರಾಯವಾಗಿದೆಂದು ಗಾಂಧೀಜಿಯವರು ಹೇಳಿದರು. ನಾವು ಸ್ವರಾಜ್ಯಕ್ಕಾಗಿ ಕೆಲಸ ಮಾಡಿ ಅದರ ಪ್ರಯತ್ನದಲ್ಲಿ ಮಡಿಯಬೇಕೆಂಬುದೇ ೧೯೪೨ ರಲ್ಲಿ ನಾನು ಮಾಡಿರಿ ಇಲ್ಲವೆ ಮಡಿಯರಿ ಎಂದು ಹೇಳಿದ್ದರ ಅರ್ಥವೆಂದು ಗಾಂಧೀಜಿ ಹೇಳಿದರು.

ಮಧ್ಯಕಾಲದ ಸರಕಾರ

ಮಧ್ಯಕಾಲದ ಸರಕಾರ ರಚನೆಯ ಏರ್ಪಾಡು ನಡೆದಿದೆಂಬುದು ಕಂಡುಬರುತ್ತದೆ. ವಾಯಿಸರಾಯರು ಈ ಸಂಬಂಧದಲ್ಲಿ ಕಾಂಗ್ರೆಸ ಲೀಗ ಮುಖಂಡರೊಡನೆ ಚರ್ಚೆ ಮಾಡಿರುವರು. ಹಿಂದುಸ್ತಾನ ಸರಕಾರದ ಗೃಹಮಂತ್ರಿ ಸರ್ ಜಾನ್ ಥಾರ್ನ ಮತ್ತು ಅರ್ಥಸಚಿವ ಸರ್ ಆರ್ಚಿಬಾಲ್ಡ ರೋಲಂಡ್ಸರು ಈಗಾಗಲೆ ತಮ್ಮ ಸ್ಥಳಗಳಿಗೆ ರಾಜೀನಾಮೆ ಕೊಟ್ಟು ಸ್ವದೇಶಕ್ಕೆ ಮರಳಿದ್ದಾರೆ. ವಾಯಿಸರಾಯರೆ ಈಗ ಆ ಖಾತೆಗಳನ್ನು ನೋಡುತಿರುವರು. ಬೇಗನೆ ಹೊಸ ವ್ಯವಸ್ಥೆಯಾಗುವುದೆಂಬುದು ಇದರಿಂದ ಸ್ಪಷ್ಟವಾಗುವದು. ಮುಸಲ್ಮಾನ ಮತ್ತು ಹಿಂದುಗಳಿಗೆ ಸಮಪ್ರಾತಿನಿಧ್ಯ ಶೀಖ, ಕ್ರಿಶ್ಚನ್, ಅಸ್ಪೃಶ್ಯರಿಗೆ ಒಂದೊಂದು ಸ್ಥಳ ಹೀಗೆ ಕೊಟ್ಟು ತಾತ್ಪೂರ್ತಿಕ ಸರಕಾರ ಸ್ಥಾಪಿಸಬೇಕೆಂದು ಯೋಜಿಸಲಾಗಿದೆಂದು ತಿಳಿಯುತ್ತದೆ. ಬ್ಯಾ. ಜಿನ್ನಾರವರು ಇದಕ್ಕೆ ಒಪ್ಪಿರುವರಂತೆ ಆದರೆ ಕಾಂಗ್ರೆಸ್ಸಿನವರು ಮಾತ್ರ ಈ ಹಿಂದೂ ಮುಸಲ್ಮಾನ ಇಲ್ಲವೆ ಕಾಂಗ್ರೆಸ ಲೀಗ ಸಮಪ್ರಾತಿನಿಧ್ಯಕ್ಕೆ ಒಪ್ಪಲ್ಲೆಂದು ಖಂಡಿತ ಗೊತ್ತಾಗುತ್ತದೆ. ಇದೆ ೭ ನೆಯ ತಾರೀಖಿನ ದಿವಸ ವಾಯಿಸರಾಯರು ಕಾಂಗ್ರೆಸ ಮತ್ತು ಲೀಗ ಧುರೀಣರನ್ನು ಈ ಸಂಬಂಧದಲ್ಲಿಯೇ ಭೆಟ್ಟಿಗೆ ಕರೆದಿರುವರು. ಈ ಸಂಚಿಕೆ ವಾಚಕರ ಕೈ ಸೇರುವಷ್ಟರಲ್ಲಿ ಈ ಬಗ್ಗೆಯೂ ನಿರ್ಣಯವಾಗಬಹುದೆಂದು ತೋರುತ್ತದೆ.

ರಶಿಯದ ಧೋರಣದ ಖಂಡನೆ

ಹಿಂದೀ ಸಮಸ್ಯೆಯ ಬಗ್ಗೆ ರಶಿಯ ತಳೆದ ಧೋರಣವನ್ನು ರಾಜಾಜಿಯವರು ಖಂಡಿಸಿರುವರು. ಹಿಂದುಸ್ತಾನದ ನೈತಿಕ ಅತ್ಯಗತ್ಯ ಅವಶ್ಯಕತೆಯೆಂದರೆ ಸ್ವಾತಂತ್ರ್ಯ. ಈಗ ಮಾಡಿಕೊಳ್ಳುವ ಒಡಂಬಡಿಕೆಯ ಸಂಪೂರ್ಣ ಸ್ವಾತಂತ್ರ್ಯಕ್ಕೆ ಮುಂದಿನ 'ಮಾರ್ಗವಾಗಿದೆ. ಈಗ ಅದನ್ನು ಮುಂದೆ ಹಾಕಿದರೆ ನಮ್ಮ ಎಲ್ಲ ವಾದವಿವಾದಗಳಿಗೆ ಹೊಸ ಚಾಲನೆ ಕೊಟ್ಟಂತಾಗುವದೆಂದು ಅವರು ಹೇಳುತ್ತ ಬ್ರಿಟಿಶ್ ರಾಯಭಾರದ ವಿರುದ್ಧ ರಶಿಯದವರು ನಡೆಸಿದ ಪ್ರಚಾರವನ್ನು ಈ ರೀತಿ ಟೀಕಿಸಿರುವರು. ರಶಿಯದ ಈ ಪ್ರಚಾರದಿಂದ ಯಾರೂ ತಪ್ಪುದಾರಿ ಹಿಡಿಯುವುದಿಲ್ಲೆಂದು ನಾನು ಆಶಿಸಿದ್ದೇನೆ. ಸಂಯೋಜಿತ ಸಾಮೂಹಿಕ ಜೀವನಕ್ಕೆ ನಾನೂ ಅನುಕೂಲನಿರುವೆನು. ಆ ದಿಸೆಯಲ್ಲಿ ರಶಿಯ ಸಾಧಿಸಿದ್ದನ್ನು ಕೂಲಂಕಷವಾಗಿ ಹಾಗೂ ಪೂರ್ವಗ್ರಹವಿಲ್ಲದೆ ಅಭ್ಯಸಿಸುವದು ಅ[illegible]ತ್ಯವಿರುವದು. ರಶಿಯದ ಪತ್ರಿಕೆಗಳಲ್ಲಿ ಹಿಂದುಸ್ತಾನದ ವಿಷಯವಾಗಿ ಬರುತಿರುವ ಬರೆಹಗಳಿಂದ ಹಿಂದುಸ್ತಾನದ ಸಮಸ್ಯೆಯ ಬಗ್ಗೆ ಅವರಲ್ಲಿ ಕಳಕಳಿಯಿದೆಂದು ನಮ್ಮ ತರುಣರು ಭಾವಿಸಬಾರದು. ಹಿಂದುಸ್ತಾನದ ಪ್ರಶ್ನೆ ಈಗ ಬಗೆಹರಿಯುವದು ಅವರಿಗೆ ಬೇಕಾಗಿಲ್ಲ. ಏಕೆಂದರೆ ಅದರಿಂದ ಬ್ರಿಟನನ ಶಕ್ತಿ ಮತ್ತಷ್ಟು ಬೆಳೆಯುವದು. ದಾಸ್ಯದಲ್ಲಿಯ ಹಿಂದುಸ್ತಾನಕ್ಕಿಂತ ಸ್ವತಂತ್ರ ಮಿತ್ರ ಹಿಂದುಸ್ತಾನವು ಬಲಿಷ್ಠ ಹಾಗು ಶಕ್ತಿಯುಕ್ತ ಘಟಕವಾಗುವದೆಂದು ಈಗ ಮಿತ್ರರಿಗೆ ಹಾಗು ವೈರಿಗಳಿಗೆ ಮನವರಿಕೆಯಾಗಿರುವದು. ಹಿಂದುಸ್ತಾನವನ್ನು ದಾಸ್ಯದಲ್ಲಿಟ್ಟುಕೊಂಡದ್ದರಿಂದ ಬ್ರಿಟಿಶರ ಶಕ್ತಿ ಹೆಚ್ಚಾಗಿರುವದೆಂಬ ಹಳೆಯ ವಿಚಾರವು ಈಗ ಹೋಗಿ ಸ್ವತಂತ್ರ ಹಾಗು ಮಿತ್ರ ಹಿಂದುಸ್ತಾನವು ಬ್ರಿಟನ್‌ದ ಶಕ್ತಿ ಹಾಗು ಪ್ರತಿಷ್ಠೆ ಬೆಳೆಸುವದೆಂಬುದರ ಮನವರಿಕೆಯಾಗಿರುವದು. ತನ್ನ ಭದ್ರತೆಯ ಯೋಜನೆ ಮುಗಿಯುವ ವರೆಗೆ ಹಿಂದೀ ಚಳವಳಿ ಹಾಗೆಯೆ ಸಾಗಬೇಕೆಂದು ರಶಿಯ ಬಯಸುತ್ತಿರುವದು. ರಶಿಯದ ಸಲುವಾಗಿ ನಾವು ನಮ್ಮ ವಿನೋಚನೆಯನ್ನು ಮುಂದುವರಿಸತಕ್ಕದ್ದಲ್ಲೆಂದು ಮುಂತಾಗಿ ರಾಜಾಜಿಯವರು ಸ್ಪಷ್ಟವಾಗಿ ಸಾರಿದ್ದಾರೆ. ಅವರು ಕೊಟ್ಟ ಈ ಎಚ್ಚರಿಕೆ ಸಕಾಲಿಕವಾಗಿದ್ದು ಭಾರತೀಯರು ಇತ್ತ ಗಮನಿಸುವದು ಅತ್ಯವಶ್ಯವಾಗಿದೆ.

ಬೆಂಗಳೂರು-

ಧರ್ಮಪ್ರಕಾಶ ಶ್ರೀ ಬಿ. ಎಂ. ಶ್ರೀನಿವಾಸನ್‌ರು ಬಸವನಗುಡಿ ಬಡಾವಣೆಯಲ್ಲಿರುವ ಹೆಣ್ಣುಮಕ್ಕಳ ವಿದ್ಯಾಸೌಕರ್ಯಕ್ಕಾಗಿ ಐವತ್ತು ಸಹಸ್ರ ರೂಪಾಯಿಗಳನ್ನು ದಾನವಾಗಿ ಕೊಟ್ಟು ತಮ್ಮ ತಾಯಿಯವರ ಹೆಸರಿನಲ್ಲಿ ಹಾಯಸ್ಕೂಲು ಸ್ಥಾಪಿಸಲು ಏರ್ಪಾಡು ಮಾಡಿದ್ದಾರೆ.

ಘಟನಾಸಮಿತಿಗೆ ಕಳಿಸಲಾಗುವ ಮೈಸೂರು ಸಂಸ್ಥಾನದ ಪ್ರತಿನಿಧಿಗಳ ಚುನಾವಣೆಯ ದಿನವನ್ನು ಗೊತ್ತುಪಡಿಸಲು ಮೈಸೂರ ಸರಕಾರ[illegible] ಅಸಮರ್ಥವಾಗಿದ್ದನ್ನು ಚರ್ಚಿಸುವ ನಿಲುವ[illegible] ಸೂಚನೆಯೊಂದಕ್ಕೆ ದಿವಾನ ಅಧ್ಯಕ್ಷರು ಅಪ್ಪ[illegible] ಕೊಡಲಿಲ್ಲ.

ಟೀಪು ಸುಲ್ತಾನರ ವಂಶಜರೆ ಮೈಸೂರ ಸಿಂಹಾಸನದ ನಿಜವಾದ ಉತ್ತರಾಧಿಕಾರಿಗಳಾಗಿರುವದರಿಂದ ಅವರಿಗೆ ಈ ಸಂಸ್ಥಾನ ಒಪ್ಪಿಸಲ್ಪಡಬೇಕೆಂದು ಸಂಸ್ಥಾನದ ಕೆಲ ಮುಸಲ್ಮಾನರು ಭಾರತ ಮಂತ್ರಿ ಲಾರ್ಡ ಪೆಥಿಕ್ ಲಾರೆನ್ಸರಿಗೆ ಮನವಿ ಮಾಡಿಕೊಂಡದ್ದರ ಸಂಬಂಧದಲ್ಲಿಯೂ ಒಂದು ನಿಲುವಳಿ ಸೂಚನೆ ಮಂಡಿಸಲಾಗಿತ್ತು. ಆದರೆ ಈ ವಿಷಯವಾಗಿ ನ್ಯಾಯಾಸ್ಥಾನದಲ್ಲಿ ವ್ಯಾಜ್ಯ ಪ್ರಾರಂಭವಾಗಿರುವದರಿಂದ ಇದನ್ನು ಚರ್ಚಿಸಲು ಬರುವಂತಿಲ್ಲೆಂದು ದಿವಾಣರು ನುಡಿದರು.

ಬ್ರಿಟಿಶ ಮಂತ್ರಿತ್ರಯರ ಸೂಚನೆಗಳಿಂದ ಉದ್ಭವಿಸಿದ ಪರಿಸ್ಥಿತಿಯನ್ನು ಚರ್ಚಿಸುವ ಬಗ್ಗೆ ಮಂಡಿಸಲಾದ ನಿಲುವಳಿ ಸೂಚನೆಯನ್ನು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾಣ ಅಧ್ಯಕ್ಷರು ನಿಯಮ ಬಾಹ್ಯ ಮಾಡಿದರು. ಈ ವಿಷಯ ರಾಜಪ್ರತಿನಿಧಿ[illegible] ಮಹಾರಾಜರಿಗೂ ಇರುವ ಸಂಬಂಧಕ್ಕೆ ಬಾಧೆ ತರುವಂತಿದ್ದುದರಿಂದ ಅದನ್ನು ಚರ್ಚಿಸಲು ಬರುವದಿಲ್ಲೆಂದು ಅಧ್ಯಕ್ಷರು ಹೇಳಿದರು.

ಈಸೂರ ಮತ್ತು ಶ್ರವಣ ಬೆಳಗೊಳ ಖಟ್ಲೆಗಳಲ್ಲಿ ಶಿಕ್ಷೆಗೊಳಗಾದವರ ಬಿಡುಗಡೆ ಮಾಡಬೇಕೆಂ[illegible] ಬಗ್ಗೆ ಮಂಡಿಸಿದ ನಿಲುವಳಿ ಸೂಚನೆಯನ್ನು ಅಧ್ಯಕ್ಷರು ನಿರಾಕರಿಸಿದರು. ಇದು ಇತ್ತೀಚೆಗೆ ನಡೆದ ಘಟನೆಗಳಲ್ಲ ಅವಶ್ಯಕ ಪ್ರಶ್ನೆಯೂ ಅಲ್ಲೆಂದು ಅಧ್ಯಕ್ಷರು ಹೇಳಿದರು.

ಕರ್ನಾಟಕದಲ್ಲಿ ವಿಧಾಯಕ ಕಾರ್ಯದ ಮುನ್ನಡೆ

ಹೊನ್ನಾವರದಲ್ಲಿ ಕಾರ್ಯಕರ್ತರ ನಿರ್ಧಾರ

ಶ್ರೀ ಧೋತ್ರೇಜಿಯುವರ ಮನನೀಯ ವಿಚಾರಗಳು

೩೧ ನೇ ತಾರೀಕ ಮುಂಜಾನೆ ೯ ಗಂಟೆಗೆ ಹೊನ್ನಾವರದ ಟಿಪ್ಪರ ಹಾಲದಲ್ಲಿ ಕರ್ನಾಟಕ ವಿಧಾಯಕ ಕಾರ್ಯಕರ್ತರ ಸಮ್ಮೇಳನವು ನೆರೆಯಿತು. ಕರ್ನಾಟಕದಲ್ಲಿ ವಿಧಾಯಕ ಕಾರ್ಯ ಮಾಡುತ್ತಿರುವ ಸಂಘ ಸಂಸ್ಥೆಗಳ ಪರವಾಗಿ ಸುಮಾರು ಎಂಭತ್ತು ಕಾರ್ಯಕರ್ತರು ಸಮ್ಮೇಳನಕ್ಕೆ ಆಗಮಿಸಿದ್ದರು. ಅದರಲ್ಲಿ ಹತ್ತಕ್ಕೆ ಮೇಲ್ಪಟ್ಟು ಮಹಿಳೆಯರು ಇದ್ದರು.

ಧ್ವಜ ವಂದನೆ ಪ್ರಾರ್ಥನೆಗಳೊಂದಿಗೆ ಸಮ್ಮೇಳನದ ಕಾರ್ಯ ಪ್ರಾರಂಭವಾಯಿತು. ಮೊದಲು ಸ್ವಾಗತ ಸಮಿತಿ ಪರವಾಗಿ ಹೊನ್ನಾವರ ಗ್ರಾಮೋದ್ಯೋಗ ಕೇಂದ್ರದ ಸಂಘಟಕರಾದ ಶ್ರೀ ಎಸ್ ಕೆ ಕಲ್ಲಾಪುರರು ಕಾರ್ಯಕರ್ತರನ್ನೆಲ್ಲ ಸ್ವಾಗತಿಸಿದರು.

ನಂತರ ಸಮ್ಮೇಳನದ ಸಂಯೋಜಕರಾದ ಶ್ರೀ ದಿವಾಕರರು ಸಮ್ಮೇಳನದ ಪೂರ್ವಪೀಠಿಕೆಯೆಂದು ಇದರ ಇತಿಹಾಸ ವಿವರಿಸಿದರು. ಗಾಂಧೀ ಸೇವಾ ಸಂಘದ ವಾರ್ಷಿಕ ಸಮ್ಮೇಳನಗಳು ನಿಂತು ಹೋದ ಮೇಲೆ ಅಂತಹ ಸಮ್ಮೇಳನಗಳ ಅವಶ್ಯಕತೆ ಕಾರ್ಯಕರ್ತರಲ್ಲಿ ಉಂಟಾಗಿ ಮದ್ರಾಸಕ್ಕೆ ಗಾಂಧೀಜಿಯವರು ಬಂದ ಸುಪ್ರಸಂಗದಲ್ಲಿ ದಕ್ಷಿಣ ಹಿಂದುಸ್ತಾನದ ವಿಧಾಯಕ ಕಾರ್ಯಕರ್ತರ ಸಮ್ಮೇಳನವು ನೆರೆಯಿತು. ಅಲ್ಲಿ ನಿಶ್ಚಯಿಸಿದ ಪ್ರಕಾರ ಈ ಸಮ್ಮೇಳನ ನಡೆಯುತಿರುವದು. ಮುಂದೆ ವಿಧಾಯಕ ಕಾರ್ಯಕ್ರಮದ ಉದ್ದೇಶ, ಗುರಿ, ದೃಷ್ಟಿಗಳ ವಿಷಯವಾಗಿ ಮಾತನಾಡುತ್ತ ಶ್ರೀ ದಿವಾಕರರು ಸ್ವರಾಜ್ಯ ಬಂದ ಮೇಲೂ ವಿಧಾಯಕ ಕಾರ್ಯಕ್ರಮ ಅವ್ಯಾಹತವಾಗಿ ನಡೆಯಲಿಕ್ಕೆ ಬೇಕು. ಅನೇಕ ವರುಷಗಳಿಂದ ವಿಧಾಯಕ ಕಾರ್ಯಕ್ರಮದ ಕೆಲವು ಅಂಗಗಳಿಗೆ ಕಾಂಗ್ರೆಸ್ಸು ಪ್ರೋತ್ಸಾಹ ಕೊಡುತಿದ್ದರೂ ಗಾಂಧೀಜಿಯವರು ಅದಕ್ಕೆ ತಮ್ಮ ವಿಶಿಷ್ಟ ದೃಷ್ಟಿಕೋನವನ್ನು ಕೊಟ್ಟು ಸಂಘಟಿಸಿದ ಮೇಲೆಯೇ ಈ ಮಟ್ಟಕ್ಕೆ ವಿಧಾಯಕ ಕಾರ್ಯಕ್ರಮ ಮುಟ್ಟಿದೆ, ಸ್ವರಾಜ್ಯ ದೊರೆತ ಮೇಲೆಯೂ ಗಾಂಧೀಜಿಯವರ ರಾಮರಾಜ್ಯಕ್ಕೆ ವಿಧಾಯಕ ಕಾರ್ಯಕ್ರಮವೇ ಹೆದ್ದಾರಿ. ಅದನ್ನು ಜೀವನ ವ್ಯಾಪಿ ದೃಷ್ಟಿಯಿಂದ ಗಾಂಧೀಜಿಯವರು ನೋಡುತ್ತಾರೆ. ಸಾಂಘಿಕವಾಗಿ ಅಹಿಂಸಾ ತತ್ವದಿಂದ ವಿಧಾಯಕ ಕಾರ್ಯಕ್ರಮವನ್ನು ಸ್ಥಿರಗೊಳಿಸಲು ಅವರು ಯತ್ನಿಸುತ್ತಾರೆ. ಸ್ವಾತಂತ್ರ್ಯ ಸಂಪಾದಿಸಲು ಜನತೆಯಲ್ಲಿ ಸಂದೇಶ ಬೀರಲು ಕಾಂಗ್ರೆಸ್ಸಿನ ದೃಷ್ಟಿಯಿಂದಲೂ ವಿಧಾಯಕ ಕಾರ್ಯಕ್ರಮವು ಒಂದು ಮುಖ್ಯ ಸಾಧನವಿರುವದು. ಕಾರಣ ಇಂತಹ ಕಾರ್ಯದಲ್ಲಿ ತೊಡಗಿರುವವರ ಮತ್ತು ಕಾರ್ಯದ ಸಮನ್ವಯವಾಗುವದು ಅತ್ಯವಶ್ಯ. ಈ ಸಂದರ್ಭದಲ್ಲಿ ಕರ್ನಾಟಕದ ಕಳೆದ ೨೫ ವರ್ಷಗಳಿಂದ ವಿಧಾಯಕ ಕಾರ್ಯದ ಇತಿಹಾಸ ಪ್ರಕಟನೆಯಾಗಬೇಕು ಎಂದು ಹೇಳಿದರು.

ನಂತರ ಗಾಂಧಿ ಸೇವಾ ಸಂಘದ ಕಾರ್ಯದರ್ಶಿಗಳಾದ ಶ್ರೀ ಧೋತ್ರೇಜೀಯವರು ಸಮ್ಮೇಳನದ ಉದ್ಘಾಟನೆ ಮಾಡಿದರು. ಅವರು ಮಾತನಾಡಿದ ಒಂದು ತಾಸಿನ ಭಾಷಣ ಬಹಳ ಉದ್ಬೋಧಕವಿದ್ದಿತು. ಜನತೆಯಲ್ಲಿ ಅಸೀಮ ಪ್ರೇಮ ಮತ್ತು ಸೇವೆ ಮಾಡುವ ಉತ್ಕಟ ಇಚ್ಛೆ. ಇವೇ ವಿಧಾಯಕ ಕಾರ್ಯಕ್ರಮದ ಅಡಿಗಲ್ಲೆಂದು ಅವರು ತಿಳಿಸಿದರು.

ಗಾಂಧೀಜಿ ಕಾಂಗ್ರೆಸ ಘಟನೆಯಲ್ಲಿ ಖಾದಿಯ ಬಗ್ಗೆ ನಿಯಮ ಮತ್ತು ಕಾಂಗ್ರೆಸ ಧ್ಯೇಯದಲ್ಲಿ "ಶಾಂತ ಮತ್ತು ನ್ಯಾಯ ಮಾರ್ಗದಿಂದ" ಎಂಬ ಶಬ್ದಗಳನ್ನು ಕಿತ್ತುಹಾಕಲು ಸೂಚನೆ ಮಾಡುತ್ತಿರುವರು. ಇದರ ಕಾರಣವೇನೆಂಬುದನ್ನು ನಾವು ಅತ್ಯಂತ ಆಳವಾಗಿ ವಿಚಾರಿಸುವದು ಅತ್ಯವಶ್ಯ. ಅದರ ಮೇಲೆಯೇ ವಿಧಾಯಕ ಕಾರ್ಯಕ್ರಮದ ಭವಿತವ್ಯವಿದೆ. ಈ ಸಂಬಂಧದಲ್ಲಿ ಪ್ರತಿಯೊಬ್ಬ ಕಾರ್ಯಕರ್ತನೂ ಜ್ಞಾನಪೂರ್ವಕ ಶ್ರದ್ಧೆಯಿಂದ ಕಾರ್ಯ ಕೈಕೊಂಡರೆ ಮಾತ್ರ ಯಶ ಸಾಧ್ಯ. ಇಲ್ಲದಿದ್ದರೆ ನಾವೇ ಆತ್ಮವಂಚನೆ ಮಾಡಿಕೊಂಡಂತಾಗುವದು. ಒಂದಿಲ್ಲೊಂದು ರೀತಿಯಿಂದ ಪೂರ್ಣ ತಿಳಿವಳಿಕೆಯಿಲ್ಲದೆ ಮುಗ್ಗರಿಸುತ್ತ ಈಗ ಮುಂದರಿಯುತಿರುವಂತೆಯೇ ಮುಂದೆಯೂ ಸಾಧ್ಯವಿಲ್ಲ.

ಜನತೆಯ ಮೇಲೆ ಇರುವ ಗಾಂಧೀಜಿಯವರ ಪ್ರಭಾವದ ಕಾರಣ ಸಂಖ್ಯಾ ಅಥವಾ ಯಾವದೇ ಶಕ್ತಿಯ ಬಲದಿಂದಲ್ಲ. ಅವರಿಗೆ ಜನತೆಯ ಮೇಲಿರುವ ಅಪಾರ ಪ್ರೇಮ ಉತ್ಕಟ ಸೇವಾಬುದ್ಧಿ ಇವೇ ಅವರನ್ನು ಮಹಾತ್ಮರನ್ನಾಗಿ ಮಾಡಿವೆ. ಗಾಂಧೀಜಿಯವರ ಈ ದೃಷ್ಟಿಯಿಂದಲೇ ಪ್ರೇರಿತರಾಗಿ ಕಾರ್ಯ ಮಾಡಿದರೆ ಮಾತ್ರ ವಿಧಾಯಕ ಕಾರ್ಯಕ್ರಮದಲ್ಲಿ ಯಶ ಸಿಗುವದು. ಕಾರಣ ಪ್ರತಿಯೊಬ್ಬರೂ ಆ ದೃಷ್ಟಿಯಿಂದಲೇ ಹೆಜ್ಜೆಯಿಡಬೇಕು ಎಂದು ಬಿನ್ನವಿಸಿದರು.

ನಂತರ ಬಂದ ಕಾರ್ಯಕರ್ತರ ಪರಿಚಯವಾದ ಮೇಲೆ ಶ್ರೀ ತಿ. ಶ್ರೀ ನಾಯಕರು ಸಮ್ಮೇಳನದ ಅಧ್ಯಕ್ಷರಾಗಿ ನಿಯೋಜಿಸಲ್ಪಟ್ಟರು.

ಆ ಮೇಲೆ ಮುಖ್ಯ ಮುಖ್ಯ ಕಾರ್ಯಕರ್ತರ ಅನುಭವಗಳ ಬಗ್ಗೆ ಭಾಷಣಗಳಾದವು.

ನಂತರ ದಿವಂಗತರಾದ ಶ್ರೀ ಹಣಮಂತರಾವ ಕೌಜಲಗಿ, ಎಂ. ಪಿ. ನಾಡಕರ್ಣಿ, ಸುಬ್ಬರಾವ ಹಳದೀಪುರ, ಡಾ. ಪೈ, ಮಹದೇವ ಮೈಲಾರ, ಮತ್ತು ವಾಮನರಾವ ದೇಸಾಯಿ ಬಿದ್ರಿ ಇವರ ಬಗ್ಗೆ ಶೋಕಸೂಚಕ ನಿರ್ಣಯಗಳು ಸ್ವೀಕೃತವಾಗಿ ಸಭೆ ಮರುದಿನಕ್ಕೆ ಮುಂದರಿಯಿತು.

ಇಂದು ರಾತ್ರಿ ಕಾರ್ಯಕರ್ತರ ನಿವಾಸದಲ್ಲಿ ಕಾರ್ಯವಾರದ ಕುಮಾರಿ ಲಲಿತಾ ರಾಯನ ಭಟ್ಟ ಎಂಬ ಬಾಲಿಕೆ ಕ್ಯಾಪ್ಟನ್ ಲಕ್ಷ್ಮಿಯ ರಾಷ್ಟ್ರೀಯ ಕೀರ್ತನೆ ಹಿಂದಿಯಲ್ಲಿ ಮಾಡಿದರು.

ತಾ. ೩೧ ಕ್ಕೆ ಸಮ್ಮೇಲನದ ಕಾರ್ಯಕ್ರಮವು ಬೆಳಿಗ್ಗೆ ೯ ಗಂಟೆಗೆ ಶ್ರೀ ನಾಯಕ ಮಾಸ್ತರರ ಹಸ್ತದಿಂದ ಧ್ವಜವಂದನೆಯಾಗಿ ಪ್ರಾರಂಭವಾಯಿತು.

ಸಮ್ಮೇಲನದಲ್ಲಿ ಸುಮಾರು ೩೦ ಗೊತ್ತುವಳಿಗಳು ಪಾಸಾದವು. ವಿಧಾಯಕ ಕಾರ್ಯಕ್ರಮಗಳನ್ನು ಸಮನ್ವಯ ಮಾಡಿ ಆಚರಣೆಯಲ್ಲಿ ತರುವ ಖಾದಿ ನವಸಂಸ್ಕರಣ ಅಂದರೆ ವಿಕೇಂದ್ರೀಕರಣ ಸಮಗ್ರ ಗ್ರಾಮಸೇವಾ ಇದಕ್ಕೆ ಸ್ವಾಗತ ಮಾಡುವದು ನೇಕಾರರಿಗೆ ನೇಯಲಿಕ್ಕೆ ಕೈನೂಲನ್ನೇ ಕೊಡಬೇಕೆಂದು ಸರಕಾರಕ್ಕೆ ಬಿನ್ನವಿಸುವದು, ಆರ್ಥಿಕ ಸಮಾನತೆಯ ಬಗ್ಗೆ ಕಾರ್ಯಕರ್ತರು ಕೆಲಸ ಮಾಡುವದು, ಎಲ್ಲ ಕಾರ್ಯಕರ್ತರು ಹಿಂದೀ ಕಲಿಯಬೇಕು ಹಾಗು ಪ್ರತಿನಿತ್ಯ ತಪ್ಪದೇ ನೂಲಬೇಕೆಂದು ಬಿನ್ನವಿಸುವದು, ಹೆಣ್ಣುಮಕ್ಕಳಿಗೆ ಕಾರ್ಯಮಾಡಲು ಅಸ್ಪದ ಕೊಡಲಿಕ್ಕೆ ಪುರುಷರಿಗೆ ಬಿನ್ನವಿಸುವದು, ಸ್ತ್ರೀಯರಲ್ಲಿ ಸಾಕ್ಷರತಾ ಪ್ರಸಾರ ಮಾಡುವದು ಮತ್ತು ಅಖಿಲ ಭಾರತ ಗ್ರಾಮೋದ್ಯೋಗ ಸಂಸ್ಥೆಯವರಿಂದ ನಿರ್ಮಿತವಾದ ವಸ್ತುಗಳನ್ನೇ ಕೊಳ್ಳಬೇಕೆಂದು ಸರಕಾರಕ್ಕೆ ಬಿನ್ನವಿಸುವದು ಇವೇ ಮುಂತಾದ ಗೊತ್ತುವಳಿಗಳು ಪಾಸಾದವು. ಈ ಕಾರ್ಯಗಳು ಯಶಸ್ವಿಯಾಗಬೇಕಾದರೆ ಕರ್ನಾಟಕ ಏಕೀಕರಣವು ಅಗತ್ಯವೆಂಬ ಗೊತ್ತುವಳಿಯು ಸ್ವೀಕೃತವಾಯಿತು.

ಕೊನೆಗೆ-ಈ ಎಲ್ಲ ಗೊತ್ತುವಳಿಗಳನ್ನು ಕಾರ್ಯರೂಪದಲ್ಲಿ ತರಲು ಮತ್ತು ಕಾರ್ಯವನ್ನು ಸುವ್ಯವಸ್ಥೆಯಿಂದ ಸಾಗಿಸಲು—ಒಂದು ಕೇಂದ್ರ ಸಮಿತಿಯನ್ನು ನಿರ್ಮಿಸಲು ಅಧ್ಯಕ್ಷರಿಗೆ ಅಧಿಕಾರ ಕೊಡಲಾಯಿತು.

ಅಧ್ಯಕ್ಷರು ಕೇವಲ ೧೫ ನಿಮಿಷಗಳ ವರೆಗೆ ಒಳ್ಳೆ ಬೋಧಪ್ರದವಾದ ಭಾಷಣ ಮಾಡಿದರು. "ಗಾಂಧೀಜಿಯವರ ಅಹಿಂಸಾತತ್ವವು ವಿಶ್ವಪ್ರೇಮದ ತತ್ವವನ್ನು ಅವಲಂಬಿಸಿದೆ. ಹಿಂದುಸ್ತಾನದ ಧ್ಯೇಯವು ಅಹಿಂಸಾ ತತ್ವದ ತಳಹದಿಯ ಮೇಲೆ ಸಮಾಜದ ರಚನೆ ಮಾಡುವದಿದೆ. ನಾವು ಕೇವಲ ಸೇವಾ ಬುದ್ಧಿಯಿಂದಲೇ ಕಾರ್ಯ ಮಾಡಬೇಕು.

ಮಹಾತ್ಮರ ತತ್ವಜ್ಞಾನವನ್ನು ಆಳವಾಗಿ ಅಭ್ಯಾಸ ಮಾಡಬೇಕು. ಕೇವಲ ಅಂಧಶ್ರದ್ಧೆಯಿಂದ ಮಾಡಬೇಕೆಂದು ನಾನು ಹೇಳುವದಿಲ್ಲ. ಈ ಕಳೆದ ೨೫ ವರುಷಗಳಲ್ಲಿ ವಿಧಾಯಕ ಕಾರ್ಯಕ್ರಮವು ವಿರಾಟಸ್ವರೂಪವನ್ನು ಹೊಂದಿ ಇಂದು ಹದಿನೆಂಟು ಮುಖವಾಗಿ ನಮ್ಮೆದುರು ನಿಂತಿದೆ. ಅದನ್ನೆಲ್ಲ ತಿಳಿದುಕೊಂಡು ಕಾರ್ಯ ಮಾಡಬೇಕೆಂದು ಮುಂತಾಗಿ ಹೇಳಿದರು. ಆಭಾರಮನ್ನಣೆಯೊಂದಿಗೆ ಸಮ್ಮೇಲನ ಕೊನೆಗಂಡಿತು.

ನಿರಕ್ಷರತೆಯನ್ನು ನಿರ್ಮೂಲಗೊಳಿಸುವದು

ಮುಂಬೈ ಸರಕಾರದ ಯೋಜನೆ

ಪ್ರಾಂತದ ಸಾಮಾನ್ಯ ಜನರಲ್ಲಿದ್ದ ನಿರಕ್ಷರತೆಯನ್ನು ಹೋಗಲಾಡಿಸುವದು ಮುಂಬೈ ಸರಕಾರದವರು ಕೈಕೊಂಡ ಅತ್ಯಂತ ಮಹತ್ವದ ಕಾರ್ಯಗಳಲ್ಲಿ ಒಂದಾಗಿದೆ. ಅಂತೆಯೆ ೧೯೩೮ ರಲ್ಲಿ ಶಾಲೆಗಳ ಅಭಾವಕ್ಕಾಗಿ ಶೈಕ್ಷಣಿಕ ದೃಷ್ಟಿಯಿಂದ ಪ್ರಾಂತದ ಹಿಂದುಳಿದ ಅನೇಕ ಹಳ್ಳಿಗಳಲ್ಲಿ ಮ್ಯಾಟ್ರಿಕ್ಯುಲೇಶನ್ ಇಲ್ಲವೆ ಪಿ ಎಲ್ ಸಿ ಪರೀಕ್ಷೆ ಪಾಸಾದಂಥ ಒಬ್ಬ ಶಿಕ್ಷಕನ ನೇತೃತ್ವದಲ್ಲಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿ ಸಾಕ್ಷರತಾ ಪ್ರಸಾರ ಮಾಡಬೇಕೆಂದು ಗ್ರಾಮಿಕ ಶಿಕ್ಷಣದಲ್ಲಿ ಆಸಕ್ತಿಯುಳ್ಳಂಥ ಖಾಸಗಿ ಸಂಘಗಳನ್ನೂ ವ್ಯಕ್ತಿಗಳನ್ನೂ ಕಾಂಗ್ರೆಸ ಮಂತ್ರಿ ಮಂಡಳದವರು ಬಿನ್ನವಿಸಿಕೊಂಡರು. ಇಂಥ ಶಾಲೆಗಳಿಗೆ ಪರಮಾವಧಿಯ ಗ್ರ್ಯಾಂಟು ೨೦೦ ರೂ. ಗಳೆಂದು ಗೊತ್ತುಪಡಿಸಿ ವರುಷಕ್ಕೆ ತಲಾ ೪ ರೂಪಾಯಿಗಳಂತೆ ಗ್ರ್ಯಾಂಟು ಕೊಡುವದಾಗಿ ಪ್ರಕಟಿಸಿದರು. ೧೯೩೯ ರಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಯರ ವಿಷಯದಲ್ಲಿ ಗ್ರ್ಯಾಂಟನ್ನು ೬ ರೂಪಾಯಿಗಳಿಗೇರಿಸಿ ಶಾಲೆಯಲ್ಲಿ ಟ್ರೇಂಡ್ ಶಿಕ್ಷಕನಿದ್ದಲ್ಲಿ ೨೫ ರೂಪಾಯಿಗಳ ಹೆಚ್ಚಿನ ಗ್ರ್ಯಾಂಟನ್ನೂ ಕನಿಷ್ಠ ಪಕ್ಷಕ್ಕೆ ೨೦ ವಿದ್ಯಾರ್ಥಿಗಳಿದ್ದಲ್ಲಿ ೩೫ ರೂಪಾಯಿಗಳ ಎಕ್ವಿಪ್‌ಮೆಂಟ ಗ್ರ್ಯಾಂಟನ್ನೂ ಕೊಡುವದಾಗಿ ಪ್ರಸಿದ್ಧಿಸಿದರು. ಮುಂದೆ ೧೯೪೧ ರಲ್ಲಿ ಉಳಿದ ಶಾಲೆಗಳಿಗೆ ಅನೇಕ ವಿಷಯಗಳಿಗಾದ ವೆಚ್ಚದ ಮೇಲೆ ಗ್ರ್ಯಾಂಟನ್ನು ಕೊಡುವಂತೆ ಇಂಥ ಶಾಲೆಗಳಿಗೂ ಸಾಕಷ್ಟು ಗ್ರ್ಯಾಂಟನ್ನು ಕೊಟ್ಟರು. ಈ ಸವಲತ್ತುಗಳ ಪರಿಣಾಮವಾಗಿ ೧೯೩೮ ರಲ್ಲಿ ೨೩೮೯ ಕ್ಕೆ ನಿಂತಿದ್ದ ಶಾಲೆಗಳ ಸಂಖ್ಯೆಯು ೧೯೪೨ ರಲ್ಲಿ ೮೦೪೯ ಕ್ಕೆ ಏರಿತು. ಅದರೆ ಮುಂದೆ ೧೯೪೩ ರಲ್ಲಿ ದುರ್ದೈವದಿಂದ ೭೭೬೦ ಕ್ಕೆ ಇಳಿದು, ೪೪ ರಲ್ಲಿ ೭೩೬೩ಕ್ಕೆ ಬಂದಿತು.

ಈ ಸಂಖ್ಯೆ ಇನ್ನೂ ಇಳಿಯಹತ್ತಿದೆ. ಶಾಲೆಗಳ ಸಂಖ್ಯೆ ಇಳಿದರೂ ಈ ವಿಷಯದಲ್ಲಿ ಸರಕಾರದವರ ವೆಚ್ಚವು ೪ ಲಕ್ಷ ರೂಪಾಯಿಗಳಿಂದ ೧೩ ಲಕ್ಷ ರೂಪಾಯಿಗಳಿಗೆ ಏರಿಹೋಗಿದೆ. ಯುದ್ಧನಿರ್ಮಿತ ಆರ್ಥಿಕ ಪರಿಸ್ಥಿತಿಯ ಒತ್ತಡವೇ ಇದಕ್ಕೆಲ್ಲ ಮುಖ್ಯ ಕಾರಣವೆಂಬುದು ನಿಃಸಂಶಯವಾಗಿದೆ. ಶಿಕ್ಷಣದ ವಿಷಯದಲ್ಲಿ ಜನತೆಯ ಆಸಕ್ತಿಯು ಎಷ್ಟಾದರೂ ಕಡಿಮೆಯಾಗಿಲ್ಲವೆಂಬುದು ಸರಕಾರಕ್ಕೆ ಗೊತ್ತಿದೆ. ಅದ್ದರಿಂದ ಈಗ ಪರಿಸ್ಥಿತಿಯು ಮಾರ್ಪಟ್ಟಿದ್ದರಿಂದ ಮುಂಬಯಿ ಸರಕಾರದವರು ಸಾಕ್ಷರತಾ ಪ್ರಸಾರಕ್ಕೆ ಹೆಚ್ಚು ಲಕ್ಷ್ಯ ಪೂರೈಸಿ ೫೦೦ ಕ್ಕಿಂತ ಕಡಿಮೆ ಜನಸಂಖ್ಯೆಯಿಲ್ಲದ ಪ್ರತಿಯೊಂದು ಹಳ್ಳಿಯಲ್ಲಿ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಲು ಸಾಮಾಜಿಕ ಕಾರ್ಯಕರ್ತರನ್ನು ಮತ್ತು ಸಂಸ್ಥೆಗಳನ್ನು ಬಿನ್ನವಿಸಿದ್ದಾರೆ. ರಾಷ್ಟ್ರವು ಉಳಿದ ಶಾಖೆಗಳಲ್ಲಿ ಪ್ರಗತಿ ಹೊಂದಬೇಕಾದರೆ ಶೈಕ್ಷಣಿಕ ಪ್ರಗತಿಯು ಅಗತ್ಯವಾದದ್ದೆಂದು ಹೇಳಿ, ಹಿಂದುಳಿದ ವರ್ಗದವರಿಗೆ ವರ್ಷಕ್ಕೆ ತಲಾ ೮ ರೂಪಾಯಿ ಉಳಿದವರಿಗೆ ತಲಾ ೬ ರೂಪಾಯಿ, ಒಬ್ಬ ಶಿಕ್ಷಕನಿಗೆ ಹೆಚ್ಚೆಂದರೆ ವರ್ಷಕ್ಕೆ ೩೦೦ ರೂಪಾಯಿ ಗ್ರ್ಯಾಂಟನ್ನು ಮತ್ತು ಪ್ರತಿ ತಿಂಗಳು ೪ ರೂಪಾಯಿಗಳ ಬೋನಸ್ಸನ್ನು ಕೊಡುವದಲ್ಲದೆ ಸೌಕರ್ಯಗಳಿಲ್ಲದ ಹಿಂದುಳಿದ ಭಾಗಗಳಲ್ಲಿ ದುಡಿಯುವಂಥ ಸುಮಾರು ೫೦೦ ಶಿಕ್ಷಕರಿಗೆ ಕೆಟ್ಟ ಹವೆಯ ಭತ್ತೆಯನ್ನು ಕೊಡುವದಾಗಿ ಜಾಹೀರ ಮಾಡಿದ್ದಾರೆ. ಕೊನೆಗೆ ಈ ಯೋಜನೆಯನ್ನು ಯಶಸ್ವಿಯಾಗಿ ಮಾಡಲು ಸಾರ್ವಜನಿಕರು ತಮಗೆ ರಚನಾತ್ಮಕ ಸೂಚನೆಗಳನ್ನು ಕೊಟ್ಟು ಸಹಾಯವನ್ನೀಯಬೇಕೆಂದು ಸರಕಾರದವರು ಆಗ್ರಹಪೂರ್ವಕವಾಗಿ ಕೇಳಿಕೊಂಡಿದ್ದಾರೆ.

ಪ್ರಾಂತದ ಆರ್ಥಿಕ ಅಭಿವೃದ್ಧಿ

ಮುಂಬಯಿ ಸರಕಾರದ ಯೋಜನೆ

ನಾವೀಗ ಮಹತ್ವದ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ನಾನೂ ನನ್ನ ಸಹಮಂತ್ರಿಗಳೂ ಅವುಗಳ ನಿವಾರಣೆಗಾಗಿ ಮಿತಿಮೀರಿ ಪ್ರಯತ್ನಿಸುವೆವು. ಎಂದು ಮುಂಬಯಿ ಪ್ರಾಂತದ ಮುಖ್ಯ ಮಂತ್ರಿ ಶ್ರೀ ಬಿ. ಜಿ. ಖೇರರು ಸುದ್ದಿಗಾರರ ಸಭೆಯಲ್ಲಿ ಹೇಳಿದರು.

ಹಳ್ಳಿಗಳಿಗೆ ಆಹಾರ, ನೀರು ಪೂರೈಸುವ ಪ್ರಶ್ನೆ ಅತ್ಯಗತ್ಯವಾಗಿದೆ. ಆಹಾರ ಧಾನ್ಯ ಆಯಾತ ಪ್ರಶ್ನೆಯನ್ನು ನಮ್ಮ ಆಹಾರ ಮಂತ್ರಿ ಶ್ರೀ ದಿನಕರರಾವ ದೇಸಾಯರು ಅಭ್ಯಸಿಸುತ್ತಿದ್ದಾರೆ. ಧಾನ್ಯದ ಆಮದು ಮತ್ತು ಧಾನ್ಯದ ಉತ್ಪಾದನೆಯಲ್ಲಿ ನಿಕಟ ಸಂಬಂಧವಿದೆ. ರೈತರಿಗೆ ಯೋಗ್ಯ ಗೊಬ್ಬರ ಕೊಟ್ಟು ಧಾನ್ಯದ ಉತ್ಪಾದನೆಯನ್ನು ಹೇಗೆ ಹೆಚ್ಚಿಸಬೇಕೆಂಬ ವಿಚಾರದಲ್ಲಿ ನಮ್ಮ ಪ್ರಾಂತದ ಒಕ್ಕಲತನದ ಮಂತ್ರಿ ಶ್ರೀ ಎಂ. ಪಿ. ಪಾಟೀಲರು ತೊಡಗಿದ್ದಾರೆ. ಹೇಸಿಕೆಯನ್ನು ಗೊಬ್ಬರವನ್ನಾಗಿಸುವ ಪ್ರಯೋಗವು ಈಗ ನಡೆದಿದೆ. ಅದನ್ನೇ ದೊಡ್ಡ ಪ್ರಮಾಣದಲ್ಲಿ ಸಾಗಿಸಬೇಕೆಂದು ನನ್ನ ಇಚ್ಛೆ. ಗೊಬ್ಬರವನ್ನು ತಯಾರಿಸುವದಕ್ಕಾಗಿ ಮುನಸಿಪಾಲ್ಟಿಗಳು ಕಸವನ್ನು ಸಂಗ್ರಹಿಸ ತೊಡಗಿವೆ. ಹಳ್ಳಿಗಳೂ ಈ ಕೆಲಸದಲ್ಲಿ ನೆರವಾಗಬೇಕು ಅಂದರೆ ಈ ಪ್ರಯೋಗದಲ್ಲಿ ರೈತರಿಗೆ ಅಗ್ಗದರದಲ್ಲಿ ಗೊಬ್ಬರ ಪೂರೈಸಲು ಸಾಧ್ಯವಾಗುವದು. ಈ ಯೋಜನೆಗೆ ಧನಸಹಾಯ ನೀಡಬೇಕೆಂಬ ವಿಚಾರವಿದೆ.

ಹಳ್ಳಿಗಳಲ್ಲಿ ನೀರಾವರಿಗಾಗಿ ಅನುಕೂಲವಾಗಲೆಂದು ಈ ಮೂರು ವರ್ಷಗಳಲ್ಲಿ ೫೦೦೦೦ ಬಾವಿಗಳನ್ನು ತೋಡುವ ವಿಚಾರವಿಟ್ಟುಕೊಂಡಿದೆ.

ಭೂಮಿಯ ಮಣ್ಣು ಹರಿದು ಹೋಗಿ ಹಾಳಾಗುವದನ್ನು ತಡೆಯುವದಕ್ಕಾಗಿ ಒಕ್ಕಲತನದ ಖಾತೆಯವರು ವಿಜಾಪೂರ ಮುಂತಾದ ಜಿಲ್ಹೆಗಳಲ್ಲಿ ಒಡ್ಡು ಹಾಕುವ ಯೋಜನೆಯನ್ನು ಕೈಕೊಂಡಿದ್ದು ಇದು ಇನ್ನೂ ಎಲ್ಲರಿಗೆ ಸಮಾಧಾನಕರವಾಗಿಲ್ಲವಾದರೂ ಅಂಥದೊಂದು ಉಪಾಯ ಕಂಡು ಹಿಡಿಯಲು ನಮ್ಮ ಖಾತೆಯು ಪ್ರಯತ್ನಿಸುತ್ತಿರುವದು. ಸರಕಾರಿ ಮತ್ತು ಸರಕಾರೇತರ ಕಾರ್ಯಕರ್ತರೆಲ್ಲ ಸಹಕರಿಸುವರೆಂದು ನಂಬಿದ್ದೇನೆ ಎಂದು ಹೇಳಿದರು.

ಗ್ರಾಮೋದ್ಯೋಗದ ವಿವಿಧ ಯೋಜನೆಗಳನ್ನು ಹೇಗೆ ಒಂದುಗೂಡಿಸಬೇಕೆಂಬ ಬಗ್ಗೆ ಪುನರ್ರಚನೆಯ ಮಂತ್ರಿ ಶ್ರೀ ಎಲ್ ಎಂ ಪಾಟೀಲರು ವಿಚಾರ ನಡೆಸಿದ್ದಾರೆ. ಅವರು ಈಗಿದ್ದ ಯೋಜನೆಗಳನ್ನು ಪುನರ್ವಿಮರ್ಶಿಸಿ ಯುದ್ಧೋತ್ತರ ಕಾಲಕ್ಕಾಗಿ ಹೊಸ ಯೋಜನೆಗಳನ್ನು ರಚಿಸಲಿರುವರು.

ಕಾಂಗ್ರೆಸದ ಘೋಷಣಾ ಪತ್ರಿಕೆಯಲ್ಲಿ ಹೇಳಿರುವ ತತ್ವಗಳ ಆಧಾರದಿಂದಲೆ ಹೊಸ ಯೋಜನೆಗಳನು [illegible]ವದು. ಗ್ರಾಮ ಪುನರಚನೆಯ ಬಗ್ಗೆ ಕೂಡ ಇದೇ ದೃಷ್ಟಿಯಿಂದ ಹೊಸ ಧೋರಣ ಸ್ವೀಕರಿಸಲಾಗುವದು. ನಿಶ್ಚಿತವಾದ ಧ್ಯೇಯ ಸಾಧನೆಗಾಗಿ ಯೋಜನೆಗಳನ್ನು ತಯಾರಿಸಲಾಗುವದು ಎಂದು ಶ್ರೀ ಎಲ್. ಎಂ. ಪಾಟೀಲರು ಹೇಳಿದರು.

ನಾವು ಆಸಕ್ತಿಯಿಂದ ಕೆಲಸ ಪ್ರಾರಂಭಿಸಿದ್ದು ನಮಗೆ ಸಾಧ್ಯವಿದ್ದ ಮಟ್ಟಿಗೆ ಹೆಣಗುವೆವು ಎಂದರು ಇನ್ನೊಬ್ಬ ಮಂತ್ರಿಗಳು.

ಕರಾಚಿಯ ಮಹಮ್ಮದ ಶರೀಫನೆಂಬ ನಗರ ರಕ್ಷನು ಅಲ್ಲಿಯ ದಂಡಿನ ಪ್ರದೇಶದಲ್ಲಿ ಕೊಲೆಮಾಡ ಲ್ಪಟ್ಟಿದ್ದಾನೆ. ಸಶಸ್ತ್ರ ಪೋಲೀಸನೊಬ್ಬನು ಅವ ನಿಗೆ ಗುಂಡು ಹಾಕಿದ್ದನೆಂದು ಹೇಳಲಾಗುತ್ತದೆ.

ಆಸ್ಟ್ರೇಲಿಯಾದಿಂದ ಫೋರ್ಟ ಆಲೆಕ್ಸಾಂಡ್ರಿಯ ಹಡಗವು ೮೮೦೦ ಟನ್ ಗೋದಿ ಹೇರಿಕೊಂಡು ಹಿಂದುಸ್ತಾನಕ್ಕೆ ಬಂದಿದೆ. ಈ ಗೋದಿಯನ್ನು ಕೊರತೆ ಪ್ರಾಂತಗಳಿಗೆ ಕಳಿಸಲಾಗುವದು. ಜೂನ ೧ ರಿಂದ ಈ ವರೆಗೆ ಆಸ್ಟ್ರೇಲಿಯದಿಂದ ೧೮೦೦೦ ಟನ್ ಗೋದಿ ಬಂದಂತಾಯಿತು.

ಪಂಜಾಬ ಸರಕಾರದ ಅರ್ಥ ಸಚಿವ ಲಾಲಾ ಭೀಮಸೇನ ಸಾಚಾರ ಇವರ ಮನೆಯಲ್ಲಿ ಇಬ್ಬರು ಸಶಸ್ತ್ರ ಆಗಂತುಕರು ಹೊಕ್ಕದ್ದರಿಂದ ಹೆಚ್ಚು ದಕ್ಷತೆ ತೆಗೆದುಕೊಳ್ಳಬೇಕೆಂದು ಅವರ ಮನೆಯ ಮುಂದೆ ಪೋಲೀಸ ಕಾವಲಿಡಲಾಗಿದೆ.

ಮುಂಬಯಿ ಗವರ್ನರರ ಸಲಹೆಗಾರರಾಗಿದ್ದ ಸರ್ ಹೆನ್ರಿನಾಯಿಟರು ಬ್ರಹ್ಮದೇಶದ ಗವರ್ನರರಾಗಿ ನೇಮಿಸಲ್ಪಟ್ಟಿರುವರು. ಇತ್ತೀಚೆಗೆ ಇವರು ಮದ್ರಾಸದ ಗವರ್ನರರಾಗಿದ್ದರು.

AC. 51. —K

"ನಾವು ಕೈಲಾದಷ್ಟು ಪ್ರಯತ್ನಿಸೋಣ"

—ಶ್ರೀ. ಜಿನ್ನಾ

"ಸರ್ವರಿಗೆ ಈಗ ಒದಗಿದ ದುರ್ಧರ ಪ್ರಸಂಗದಿಂದ ಯಾರೂ ರಾಜಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ಯಾವದೇ ಲಾಭವನ್ನು ಪಡೆಯತಕ್ಕದ್ದಲ್ಲವೆಂಬ ವ್ಹಾಯಿಸರಾಯರ ಹೇಳಿಕೆಯನ್ನು ನಾನು ಪುನಃ ಉಚ್ಚರಿಸುತ್ತೇನೆ. ಭಿನ್ನ ಪಕ್ಷಗಳ ಬಡಿದಾಟಕ್ಕಿಂತ ಆಹಾರದ ಪ್ರಶ್ನೆಯು ಮಿಗಿಲಾಗಿದೆ. ನಾವು ಸಹಾಯ ಮಾಡತಕ್ಕದ್ದು. ಸದ್ಯಕ್ಕೆ ನಮ್ಮನ್ನು ಎದುರಿಸಿದ ಈ ಕಠಿಣ ಪ್ರಸಂಗದಲ್ಲಿ ನಾವು ಸಹಕರಿಸಲು ಕೈಲಾದಷ್ಟು ಪ್ರಯತ್ನ ಮಾಡೋಣ."

—ಫೆಬ್ರುವರಿ ೧೭ಕ್ಕೆ ಕೊಟ್ಟ ಹೇಳಿಕೆ.

ನಮ್ಮ ಪ್ರತಿಜ್ಞೆ ಮತ್ತು ಬಿನ್ನಹ

ಕೊರತೆಯ ಭಾಗಗಳಲ್ಲಿರುವವರಿಗೆ ನಾವು ಸಂಪೂರ್ಣ ಬೆಂಬಲ ನೀಯುವ ಬಗ್ಗೆ ಪ್ರತಿಜ್ಞೆ ಮಾಡುತ್ತೇವೆ. ದೇಶದ ಯಾವತ್ತೂ ಸಾಧನ ಸಾಮಗ್ರಿಯನ್ನು ಒಂದುಗೂಡಿಸಿ ಅವರಿಗೆ ತ್ವರಿತವಾಗಿ ನೆರವನ್ನು ನೀಡಲಾಗುತ್ತಿದೆ. ಅವರಿಗಿರುವ ಆಹಾರದ ಕೊರತೆಯಲ್ಲಿ ದೇಶದ ಉಳಿದ ಭಾಗವು ಪಾಲು ವಹಿಸುವದಲ್ಲದೆ ಸಮಪಾಲು ವಹಿಸುವದು. ಪ್ರತಿಯೊಬ್ಬನಿಗೆ ಯೋಗ್ಯ ಪ್ರಮಾಣದಲ್ಲಿ ಆಹಾರವು ದೊರೆಯುವಂತೆ ಮಾಡುವದಕ್ಕಾಗಿ ಶೀದಾ ಪದ್ಧತಿಯನ್ನು ವಿಸ್ತರಿಸಲಾಗುತ್ತಿದೆ. ಬೆಲೆ ನಿಯಂತ್ರಣವನ್ನು ತಪ್ಪದೆ ಸಾಗಿಸಲಾಗುವುದು. ಶಾಂತತೆ ಮತ್ತು ಆತ್ಮ ವಿಶ್ವಾಸದಿಂದ ವಡೆದುಕೊಳ್ಳಿರಿ. ನಿಮಗೆ ಅವಶ್ಯವಿರುವದಕ್ಕಿಂತ ಹೆಚ್ಚಿಗೆ ಕೊಂಡುಕೊಳ್ಳಬೇಡಿರಿ. ಲಾಭಬಡಕರೊಡನೆ ಯಾವದೇ ತರದ ಸಂಬಂಧವನ್ನಿಟ್ಟುಕೊಳ್ಳಬೇಡಿರಿ.

ಹೆಚ್ಚುಳಿದ ಭಾಗಗಳಲ್ಲಿರುವವರಿಗೆ ಸಂಪೂರ್ಣ ಸಹಾಯವನ್ನು ಒದಗಿಸಬೇಕೆಂದು ನಾವು ಅವರಿಗೆ ಬಿನ್ನವಿಸಿಕೊಳ್ಳುತ್ತೇವೆ. ನಿಮ್ಮಲ್ಲಿ ಹೆಚ್ಚಾಗಿ ಇರುವ ಕಾಳನ್ನು ನೀವು ಕೊಟ್ಟುಬಿಡಬೇಕಾಗಿದ್ದರೂ ನಿಮಗೆ ಸಾಕಷ್ಟು ಕಾಳು ಉಳಿಯುವುದು. ನಿಮ್ಮ ಪಟ್ಟಣದಲ್ಲಿ ಶೀದಾ ಕ್ರಮವನ್ನು ಬಳಿಕೆಯಲ್ಲಿ ತಂದರೆ ನಿಮ್ಮ ದೇಶಬಾಂಧವರಿಗೆ ನೆರವಾಗುವುದಕ್ಕಾಗಿ ಹೀಗೆ ಮಾಡಲಾಗಿದೆಯೆಂದು ನೆನಪಿನಲ್ಲಿಡಿರಿ. ಇಷ್ಟೆಲ್ಲ ಆಗಿಯೂ ನಿಮ್ಮ ಹತ್ತಿರ ಸಾಕಷ್ಟು ಉಳಿಯುವುದು. ಸ್ವಲ್ಪಾದರೂ ಕೂಡಿಹಾಕಿ ಇಡಬೇಡಿರಿ. ಅಧಿಕಾರಿಗಳೊಡನೆ ಸಹಕರಿಸಿರಿ.

ಆಹಾರದ ಕೊರತೆಯನ್ನು ಹೋಗಲಾಡಿಸಿರಿ

ಹಿಟ್ಟುಸ್ಸಿನಿಂದ ದುಡಿಯಿರಿ ಎಲ್ಲರೂ ಪಾಲುಗಾರರಾಗಿರಿ.

ವ್ಯಾಪಾರಿಗಳಿಗೆ ಮತ್ತು ಬೆಳೆಯುವವರಿಗೆ ಸಂದೇಶ

ನಿಮಗೆ ಶಕ್ಯವಿದ್ದಷ್ಟು ಕಾಳನ್ನೆಲ್ಲ ಹೊರಗೆಡವಿರಿ; ನೀವು ಕೂಡಿಡುವ ಪ್ರತಿಯೊಂದು ಮಣ ಕಾಳು ಒಬ್ಬ ದೇಶಬಾಂಧವನ ಮರಣಕ್ಕೆ ಕಾರಣವಾಗುವುದು. ನಿಯಂತ್ರಿತ ಬೆಲೆಗಳಿಗಷ್ಟೇ ಮಾರಿರಿ—ಅವು ನಿಮಗೆ ಹಾಗೂ ಗ್ರಾಹಕರಿಗೆ ಇಬ್ಬರಿಗೂ ಯೋಗ್ಯವಾಗಿವೆ. ಎರಡನೇಯವರಿಗೆ ದುಃಖ ಕೊಟ್ಟು ಹಣ ಗಳಿಸುವುದು ಪಾಪವೆಂದು ತಿಳಿಯತಕ್ಕದ್ದು.

ಲಾಭಬಡಕರನ್ನು ಮತ್ತು ಕಳ್ಳಪೇಟೆಗಾರರನ್ನು ತಮ್ಮ ಯಾವತ್ತೂ ಶಕ್ತಿಯನ್ನು ಉಪಯೋಗಿಸಿ ಹತ್ತಿಕ್ಕಬೇಕೆಂದು ಸರಕಾರ ಹಾಗೂ ಜನತೆಯು ನಿಶ್ಚಯಿಸಿರುತ್ತದೆ. ಕಳ್ಳಪೇಟೆಯನ್ನು ತಪ್ಪಿಸಿರಿ; ಅದು ಅಪರಾಧವಾಗಿದೆ.

ಹಿಂದುಸ್ಥಾನ ಸರಕಾರದ ಆಹಾರ ಖಾತೆ, ಹೊಸದಿಲ್ಲಿ, ಇವರ ಪ್ರಕಟನೆ

ಕರ್ಮವೀರ
ಹರಿಜನ ಪುರವಣಿ

ಧರ್ಮ — ಅಧರ್ಮ

ಸುದ್ದಿಗಾರನೊಬ್ಬನು ಬರೆಯುತ್ತಾನೆ.

“ಮಾನವರಿಗೆ ಘಾತಕವಾದ ಚಿರ್ಚು, ತೋಳ, ಹಾವು, ಚೇಳು ಮೊದಲಾದ ಪ್ರಾಣಿಗಳನ್ನು ಕೊಲ್ಲುವುದು ನಿಮ್ಮ ಅಹಿಂಸೆಯಲ್ಲಿ ಬರುವುದೆಂದು ೫ ನೇ ತಾರೀಖಿನ ‘ಹರಿಜನ ಬಂಧು’ವಿನಲ್ಲಿ ನೀವು ಬರೆದಿರುವಿರಿ.

“ನಾಯಿ ಮೊದಲಾದವುಗಳಿಗೆ ಅನ್ನ ಕೊಡುವುದರಲ್ಲಿ ನಿಮ್ಮ ನಂಬಿಕೆ ಇಲ್ಲ. ಗುಜರಾಥಿಗಳಲ್ಲದೆ ಇನ್ನೂ ಅನೇಕ ಜನರು ನಾಯಿಗೆ ಅನ್ನ ಹಾಕುವುದು ಪುಣ್ಯದ ಕೆಲಸವೆಂದು ಭಾವಿಸುತ್ತಾರೆ. ಸದ್ಯದ ಅನ್ನಾಭಾವದ ಪರಿಸ್ಥಿತಿಯಲ್ಲಿ ಇಂಥ ನಂಬಿಕೆ ನ್ಯಾಯ್ಯವಾಗಲಿಕ್ಕಿಲ್ಲ. ಆದರೂ ಈ ಪ್ರಾಣಿಗಳು ಮಾನವರಿಗೆ ಅತ್ಯಂತ ಉಪಯುಕ್ತವಾಗಿವೆಂಬುದನ್ನು ನಾವು ನೆನೆಯಲಿಕ್ಕೆ ಬೇಕು. ಅವುಗಳಿಗೆ ಅನ್ನ ಹಾಕಿ ಅವುಗಳಿಂದ ಕೆಲಸ ತೆಗೆದುಕೊಳ್ಳಬಹುದಾಗಿದೆ.

ಆದರ್ಶ್ಯಾನದಿಂದ ಶ್ರೀ ರಾಯಚಂದಭಾಯಿಯವರಿಗೆ ನೀವು ೨೭ ಪ್ರಶ್ನೆಗಳನ್ನು ಕೇಳಿದ್ದಿರಿ. ಹಾವು ಮೈಮೇಲೆ ಬಂದಾಗ ಸತ್ಯಶೋಧಕನು ಏನು ಮಾಡಬೇಕೆಂಬುದು ಆ ಪ್ರಶ್ನೆಗಳಲ್ಲಿ ಒಂದಾಗಿದ್ದಿತು. ‘ಆ ಹಾವನ್ನು ನಾವು ಕೊಲ್ಲಬಾರದು. ಮತ್ತು ಅದು ಕಚ್ಚಬಯಿಸಿದರೆ ಅದಕ್ಕವಕಾಶ ಕೊಡಬೇಕೆ’ಂದು ಅವರು ಉತ್ತರ ಕೊಟ್ಟಿದ್ದರು. ನೀವು ಈಗ ಬೇರೆ ವಿಧವಾಗಿ ಹೇಳುತಿರುವಿರಿ? ಹೀಗೇಕೆ?”

ಈ ಸಂಬಂಧದಲ್ಲಿ ಹಿಂದೆ ನಾನು ಬೇಕಾದಷ್ಟು ಬರೆದಿದ್ದೇನೆ. ಆ ಕಾಲಕ್ಕೆ ಹುಚ್ಚು ನಾಯಿಗಳನ್ನು ಕೊಲ್ಲುವ ವಿಷಯದ ವಿಚಾರವಿದ್ದಿತು. ಆ ವಿಷಯದಲ್ಲಿ ವಿಶೇಷ ಚರ್ಚೆ ನಡೆಯಿತು. ಆದರೆ ಅದೆಲ್ಲವನ್ನು ಮರೆತುಬಿಡಲಾಗಿದೆಂದು ತಿಳಿಯುತ್ತದೆ.

ಜೀವಂತ ಪ್ರಾಣಿಗಳಿಗೆಲ್ಲ ದಯೆ ತೋರುವುದೇ ನನ್ನ ಅಹಿಂಸೆಯ ಅರ್ಥವಲ್ಲ. ಜೈನಧರ್ಮದಲ್ಲಿ ಜನಾವರದ ಜೀವನದ ಪಾವಿತ್ರ್ಯದಗ್ಗೆ ಜೋರು ಕೊಟ್ಟಿದ್ದು ವಿಚಾರಾರ್ಹವಾಗಿದೆ. ಆದರೆ ಮಾನವರಿಗಿಂತ ಜನಾವರಗಳಿಗೆ ಹೆಚ್ಚು ದಯೆ ತೋರಿಸಬೇಕೆಂದು ಇದರ ಅರ್ಥವಲ್ಲ. ಇಂಥ ಪ್ರಾಣಿಗಳ ಪಾವಿತ್ರ್ಯದ ಬಗ್ಗೆ ಬರೆಯುವಾಗ ಮಾನವರನ್ನುದ್ದೇಶಿಸಿಯೆ ಬರೆಯಲಾಗಿದೆಯೆಂದು ನಾನು ಭಾವಿಸುತ್ತೇನೆ. ಆದರ ಮೇಲೆಯೇ ಹೆಚ್ಚು ಜೋರು ಕೊಡಲಾಗಿದೆ. ಅದನ್ನು ಆಚರಣೆಯಲ್ಲಿ ತರುವಾಗ ಆ ವಿಚಾರದ ಅಪಾರ್ಥ ಮಾಡಲಾಯಿತು ಉದಾಹರಣಾರ್ಥವಾಗಿ ಇರಿವೆಗಳಿಗೆ ಆಹಾರಹಾಕುವುದರಲ್ಲಿ ಪೂರ್ಣ ಸಂತೋಷಹೊಂದುವ ಜನರು ಅನೇಕರಿರುವರು. ತತ್ವವು ಕೇವಲ ನಿರ್ಜೀವವಾಗಿ ಪರಿಣಮಿಸಿದೆಂದು ತೋರುವುದು. ಧರ್ಮದ ಹೆಸರಿನಲ್ಲಿ ವಂಚನೆ ಮತ್ತು ಅಪಾರ್ಥ ಮಾಡುವದು ರೂಢವಾಗಿಬಿಟ್ಟಿದೆ.

ಅಹಿಂಸೆ ಅತ್ಯಂತ ಶ್ರೇಷ್ಠ ಧ್ಯೇಯ. ಶೂರರಿಗಾಗಿ ಮಾತ್ರ ಆ ಧ್ಯೇಯ ಸರಿಹೋಗುವುದು. ಹೇಡಿಗಳಿಗಾಗಿ ಅಲ್ಲ. ಎರಡನೆಯವರನ್ನು ಕೊಂದು ಲಾಭ ಹೊಂದಿ ತಾನು ಅತ್ಯಂತ ಧಾರ್ಮಿಕ ಮತ್ತು ಅಹಿಂಸಾನಿಷ್ಠನಿರುವುದಾಗಿ ಹೇಳಿಕೊಳ್ಳುವುದು ಆತ್ಮವಂಚನೆ.

ಅಹಿಂಸಾವಾದಿಯೆಂದು ಹೇಳಿಕೊಳ್ಳುವವನು, ಪ್ರತಿ ದಿನ ಚಿರ್ಚು ಬರುತಿರುವ ಹಳ್ಳಿಯಲ್ಲಿ ವಾಸ ಮಾಡುವುದಿಲ್ಲ. ಅವನು ಓಡಿ ಹೋಗುವನು. ಮತ್ತು ಯಾವನಾದರೊಬ್ಬ ಆ ಚಿರ್ಚನ್ನು ಕೊಂದರೆ ಬಳಿಕ ಅವನು ತನ್ನ ಮನೆಗೆ ಮರಳುವನು. ಇದು ಅಹಿಂಸೆಯಲ್ಲ ಆದರೆ ಹೇಡಿಗಳ ಹಿಂಸೆ. ಆ ಚಿರ್ಚನ್ನು ಕೊಂದ ಮನುಷ್ಯನು ಸ್ವಲ್ಪ ಶೌರ್ಯವನ್ನಾದರೂ ತೋರಿಸಿರುವನು. ಈ ಕೊಲೆಯಿಂದ ಲಾಭ ಪಡೆದುಕೊಳ್ಳಬಯಸುವವನು ಹೇಡಿಯು. ವಿಶುದ್ಧ ಅಹಿಂಸೆಯ ಜ್ಞಾನ ಅವನಿಗೆಂದಿಗೂ ಆಗದು.

ಜೀವನದಲ್ಲಿ ಹಿಂಸೆಯನ್ನು ಸಂಪೂರ್ಣ ಕಿತ್ತಿ ಹಾಕುವುದು ಸರ್ವಥಾ ಶಕ್ಯವಿಲ್ಲ. ಹೀಗೆ ಹೇಳಿದರೆ ಎಲ್ಲಿಯ ವರೆಗೆ ಆದರ ಮಿತಿಯನ್ನು ಗೊತ್ತುಪಡಿಸಬಹುದು ಎಂಬ ಪ್ರಶ್ನೆ ಉದ್ಭೂತವಾಗುತ್ತದೆ. ಪ್ರತಿಯೊಬ್ಬನಿಗೆ ಈ ಮಿತಿ ಅಷ್ಟೇ ಇರಲರಿಯದು. ಮುಖ್ಯವಾಗಿ ತತ್ವ ಒಂದೇ ಬಗೆಯದಾಗಿದ್ದರೂ ಪ್ರತಿಯೊಬ್ಬ ತನಗೆ ಸರಿಹೋಗುವಂತೆ ಅದನ್ನು ಅನ್ವಯಿಸಿಕೊಳ್ಳುವನು. ಒಬ್ಬನ ಆಹಾರ ಮತ್ತೊಬ್ಬನಿಗೆ ವಿಷವಾಗಿ ಪರಿಣಮಿಸಬಹುದು. ಮಾಂಸಾಹಾರ ಪಾಪವೆಂದು ನಾನು ತಿಳಿಯುವೆ. ಆದರೆ ಮಾಂಸಾಹಾರದಿಂದಲೆ ಜೀವಿಸುವ ಮತ್ತೊಬ್ಬ ಮನುಷ್ಯರಿಗೆ ಮಾಂಸ ತಿನ್ನುವುದರಲ್ಲಿ ಏನೂ ದೋಷ ತೋರುವುದಿಲ್ಲ; ಕೇವಲ ನನ್ನನ್ನನುಸರಿಸಬೇಕೆಂದು ಮಾಂಸ ತಿನ್ನುವದನ್ನು ಅವರು ಬಿಟ್ಟುಗೊಡುವುದು ಶುದ್ಧ ಪಾಪ. ನಾನು ಒಕ್ಕಲಿಗನಾಗಬಯಿಸಿ ಅರಣ್ಯದಲ್ಲಿ ವಾಸ ಮಾಡಿದರೆ ನನ್ನ ಹೊಲಗಳನ್ನು ರಕ್ಷಿಸಿಕೊಳ್ಳಲು ಅನಿವಾರ್ಯ. ಅತಿ ಕಡಮೆ ಹಿಂಸೆಯನ್ನೆ ಮಾಡಬೇಕಾಗುವದು. ಬೆಳೆಗಳನ್ನು ನಾಶಮಾಡುತಿರುವ ಮಂಗಗಳನ್ನು ಹಕ್ಕಿಗಳನ್ನು ಮತ್ತು ಹುಳಹುಪ್ಪಡಿಗಳನ್ನು ನಾನು ಕೊಲ್ಲಬೇಕಾಗುತ್ತದೆ. ನಾನೇ ಆ ಕೆಲಸವನ್ನು ಮಾಡಲು ಇಷ್ಟಪಡದಿದ್ದರೆ ನನ್ನ ಸಲುವಾಗಿ ಅದನ್ನು ಮಾಡಲು ಬೇರೆಯವನನ್ನು ನಾನು ನೇಮಿಸಿಕೊಳ್ಳಬೇಕಾಗುವದು. ಇವೆರಡರಲ್ಲಿ ವಿಶೇಷ ಭೇದವೇನೂ ಇರುವದಿಲ್ಲ. ಬರಬಿದ್ದ ಸಮಯದಲ್ಲಿ ಅಹಿಂಸೆಯ ಹೆಸರಿನಲ್ಲಿ ಪ್ರಾಣಿಗಳಿಗೆ ಬೆಳೆಗಳನ್ನು ನಾಶ ಮಾಡಲು ಅವಕಾಶಕೊಡುವುದೆಂದರೆ ನಿಜವಾಗಿಯೂ ಪಾಪ ಮಾಡಿದಂತೆ. ಪಾಪ-ಪುಣ್ಯ ಸಾಪೇಕ್ಷ ಶಬ್ದಗಳು. ಕೆಲ ಪರಿಸ್ಥಿತಿಯಲ್ಲಿ ಪುಣ್ಯಕರ್ಮವಾದುದು ಬೇರೆ ಪರಿಸ್ಥಿತಿಯಲ್ಲಿ ಪಾಪಾಚರಣೆಯಾಗುವುದು.

ಶಾಸ್ತ್ರಕೂಪದಲ್ಲಿ ಮಾನವನು ಮುಳುಗಬಾರದು. ಆದರೆ ಅವನು ವಿಶಾಲವಾದ ಸಮುದ್ರದಲ್ಲಿ ಮುಳುಗಿ ಮುತ್ತುಗಳನ್ನು ಹೊರದೆಗೆಯಬೇಕು. ಪ್ರತಿಯೊಂದು ಮೆಟ್ಟಲಕ್ಕೆ ಅಹಿಂಸೆ ಯಾವುದು ಹಿಂಸೆ ಯಾವುದೆಂಬುದನ್ನು ಅವನು ವಿಮರ್ಶಿಸಬೇಕು. ಹೀಗೆ ಮಾಡುವುದರಲ್ಲಿ ನಾಚಿಕೆ ಇಲ್ಲವೆ ಹೇಡಿತನ ಯಾವುದೂ ಇರುವುದಿಲ್ಲ. ಪರಮಾತ್ಮನ ಸಾಕ್ಷಾತ್ಕಾರದ ಮಾರ್ಗವು ಶೂರರಿಗೆ ಮಾತ್ರವೆ ಮುಕ್ತವಿದ್ದು ಹೇಡಿಗಳಿಗಲ್ಲೆಂಬುದಾಗಿ ಕವಿ ಹೇಳಿರುವನು. ನನ್ನಲ್ಲಿ ಧೈರ್ಯವಿದ್ದರೆ ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಳ್ಳುವ ಆಸೆ ನನಗಿದ್ದರೆ ಹಾವನ್ನು ಕೊಲ್ಲದೆ ಅದರಿಂದ ಕಚ್ಚಿಸಿಕೊಳ್ಳೆಂದು ರಾಯಚಂದಭಾಯಿಯವರು ನನಗೆ ಉಪದೇಶಿಸಿದ್ದರು. ಆ ಪತ್ರ ಮುಟ್ಟುವ ಮೊದಲು ಇಲ್ಲವೆ ಹಿಂದುಗಡೆ ನಾನೆಂದೂ ಹಾವನ್ನು ಕೊಂದಿಲ್ಲ. ಇದರಲ್ಲೇನು ನನ್ನ ದೊಡ್ಡಸ್ಥಿಕೆ ಇರುವುದಿಲ್ಲ. ಹಾವು ಚೇಳುಗಳೊಡನೆ ನಿರ್ಭೀತಿಯಿಂದ ಆಟವಾಡಲು ಸಮರ್ಥನಾಗಬೇಕೆಂಬುದೆ ನನ್ನ ಧ್ಯೇಯವಾಗಿದೆ. ಆದರೆ ಈ ವರೆಗೆ ಅದು ಕೇವಲ ಬಯಕೆ ಮಾತ್ರ ಆಗಿದೆ. ಅದು ಫಲಿಸುವದೆಂದೆಂಬುದನ್ನೂ ನಾನರಿಯೆ. ಪ್ರತಿಯೊಂದು ಕಡೆ ಹಾವು ಚೇಳುಗಳನ್ನು ನಾನು ನನ್ನ ಜನರಿಂದ ಕೊಲ್ಲಿಸಿದ್ದುಂಟು. ನಾನು ಬಯಸಿದ್ದರೆ ಆ ಕೊಲೆಯನ್ನು ನಾನು ನಿಲ್ಲಿಸಬಹುದಾಗಿತ್ತು. ಆದರೆ ನಾನು ಹಾಗೆಂತು ಮಾಡಲಿ? ನಾನು ನನ್ನ ಕೈಯಲ್ಲಿಯೇ ಹಾವು ಚೇಳುಗಳನ್ನು ಎತ್ತಿಕೊಂಡು ನನ್ನ ಸಹಕಾರಿಗಳಿಗೆ ನಿರ್ಭೀತಿಯ ಪಾಠನ್ನು ಕಲಿಸುವಷ್ಟು ಧೈರ್ಯ ನನ್ನಲ್ಲಿರಲಿಲ್ಲ. ನಾನು ಹಾಗೆ ಮಾಡದಿದ್ದುದಕ್ಕಾಗಿ ನನಗೆ ನಾಚಿಕೆಯೆನಿಸುತ್ತದೆ. ಆದರೆ ನನ್ನ ಆ ನಾಚಿಕೆಯಿಂದ ಅವರ ಇಲ್ಲವೆ ನನ್ನ ಕಲ್ಯಾಣವಾಗಲಿಲ್ಲ.

ರಾಮನಾಮದ ಫಲ ನನಗೆ ಸಿಕ್ಕದ್ದಾದರೆ ಈಗಲೂ ಎಂದಾದರೂ ನನ್ನಲ್ಲಿ ಆ ಧೈರ್ಯ ಬರಬಹುದು. ಆದರೆ ಅಲ್ಲಿಯ ವರೆಗೆ ಮೇಲೆ ಹೇಳಿದಂತೆ ನಡೆಯುವುದೆ ನನ್ನ ಕರ್ತವ್ಯವಾಗಿದೆಂದು ನಾನು ಭಾವಿಸುತ್ತೇನೆ. ಧರ್ಮವು ಆಚರಿಸತಕ್ಕ ವಿಷಯವಾಗಿದೆ. ಅದೇನು ಕೇವಲ ವಿತಂಡವಾದವಲ್ಲ.

ಮಸೂರಿ ಮೋ. ಕ. ಗಾಂಧಿ
೨೯—೫—೪೬

(ಹರಿಜನ ಬಂಧುವಿನಿಂದ)

ಟೀಕೆ — ಟಿಪ್ಪಣಿಗಳು

ಅತೀವ ಪ್ರಶಂಸೆ

ಸೈನ್ಯಾಧಿಕಾರಿಯೊಬ್ಬ ಗೆಳೆಯನಿಗೆ ಹೀಗೆ ಹೇಳುತ್ತಾನೆ.

“........ ಎಲ್ಲ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ರಾಜಕಾರಣಿಗಳು ಸೈನ್ಯದ ಸಂಬಂಧದಲ್ಲಿ ಇಷ್ಟೊಂದು ಅಜ್ಞಾನಿಗಳು ಉದಾಸೀನರಿದ್ದುದು ಎಷ್ಟೊಂದು ದುರ್ದೈವದ ಸಂಗತಿಯು. ಸೈನ್ಯದಿಂದ ಅವರು ಬಹಳಷ್ಟು ಕಲಿಯಬಹುದು ಬೇರೆ ಯಾವದೆ ಸರಕಾರಿ ನೌಕರಿಗಿಂತ ಸೈನ್ಯಖಾತೆಯಲ್ಲಿಯ ನೋಕರರು ಹೆಚ್ಚು ನಿಷ್ಠರು ಮತ್ತು ಪ್ರೇಮಳರಾಗಿರುವುದೇಕೆಂಬುದನ್ನು ಆಳವಾಗಿ ವಿಚಾರ ಮಾಡುವುದಾದರೂ ಅವಶ್ಯವಾಗಿಲ್ಲವೆ ? ಸೈನ್ಯಖಾತೆಯಲ್ಲಿ ಬೇರೆಕಡೆಯಲ್ಲಿಯಕ್ಕಿಂತ ಹೆಚ್ಚು ಗಂಡಾಂತರ ಅನನುಕೂಲತೆಗಳಿದ್ದರು ಅವರು ಇಷ್ಟೊಂದು ನಿಷ್ಠರಿರುವದೇಕೆ ? ನಿಮ್ಮದು ಅತ್ಯುತ್ತಮ ಸೈನ್ಯ ನಿಮ್ಮಲ್ಲಿಯ ಶ್ರೇಷ್ಠ ಜನರು ಅದರ ಅಧ್ವರ್ಯುಗಳಾಗಲು ಮುಂದೆ ಬಂದರೆ ಅದು ಮತ್ತಷ್ಟು ಉತ್ತಮಗೊಳ್ಳುವುದು. ಯೋಗ್ಯ ಅಧಿಕಾರಿಗಳನ್ನು ಹುಡುಕಿರಿ. ನಿಮಗೆ ಎಳ್ಳಷ್ಟೂ ಅಂಜಿಕೆಯುಳಿಯದು. ಆ ಸೈನ್ಯ ಅದ್ವಿತೀಯವಾಗಿ ಪರಿಣಮಿಸುವುದು. ಅಯೋಗ್ಯ ಅಧಿಕಾರಿಗಳ ಕಡೆಗೆ ಆ ಖಾತೆಯನ್ನು ಒಪ್ಪಿಸಿದರೆ ಇಲ್ಲವೆ ಅದರಲ್ಲಿ ರಾಜಕಾರಣವು ಮಿಶ್ರವಾದರೆ ಅದಕ್ಕಾಗಿ ಬಹಳ ಹಣವನ್ನು ತೆತ್ತಬೇಕಾಗುವದು ಹಾನಿಯನ್ನು ಸಹಿಸಬೇಕಾಗುವದು. ಭವಿಷ್ಯತ್ತಿನಲ್ಲಿ ಹಿಂದುಸ್ತಾನವು ಬಹಳ ಗಂಡಾಂತರದ ದಿನಗಳನ್ನು ಕಳೆಯಬೇಕಾಗಿದೆ. ಆದರೆ ಆವೆಲ್ಲ ಗಂಡಾಂತರಗಳಿಂದ ಮತ್ತು ಕಡಮೆ ರಕ್ತಪಾತದಿಂದ ಬೇಗನೆ ನೀವು ಪಾರಾಗಬೇಕಾದರೆ ಸದ್ಯದ ಸೈನ್ಯವೇ ತರಣೋಪಾಯವಾಗಿದೆಂದು ನನ್ನ ಮನವರಿಕೆಯಾಗಿದೆ. ಆದರೆ ಆ ಸೈನ್ಯಕ್ಕೆ ಯೋಗ್ಯ ಅಧಿಕಾರಿಗಳು ಬೇಕು ರಾಜಕೀಯ ಮತ್ತು ಧಾರ್ಮಿಕ ಭಾವನೆಗಳಿಗೆ ಅದರಲ್ಲಿ ಅವಕಾಶ ವಿರಬಾರದು. ”

ಎಲ್ಲ ಪ್ರಜಾಪ್ರಭುತ್ವರಾಷ್ಟ್ರಗಳಲ್ಲಿ ಸೈನ್ಯಖಾತೆಯಲ್ಲಿ ರಾಜಕಾರಣಿಗಳು ಉದಾಸೀನರಾಗಿದ್ದು ನಿಜವಿದ್ದರೆ ಅದೇನು ಕರುಣೆಯ ವಿಷಯವಾಗದು. ಆದರೆ ಅವರು ತಪ್ಪಾಗಿ ಅದರಲ್ಲಿ ಮನಸ್ಸು ಹಾಕಿದ್ದೆ ಕರುಣೆಯ ವಿಷಯವು. ಪ್ರಜಾಪ್ರಭುತ್ವ ರಾಷ್ಟ್ರಗಳು ಸೈನಿಕರೇ ತಮ್ಮ ರಕ್ಷಕರೆಂದು ಭಾವಿಸುತ್ತಾರೆ. ಸೈನಿಕರು ಸಂಪತ್ತಿಯನ್ನು ತರುತ್ತಾರೆ ಎರಡನೆ ರಾಷ್ಟ್ರಗಳನ್ನು ಗೆಲ್ಲುತ್ತಾರೆ ಮತ್ತು ನಾಗರಿಕ ಅಶಾಂತ ಪರಿಸ್ಥಿತಿಯಲ್ಲಿ ಅಧಿಕಾರವನ್ನು ಸ್ಥಿರಪಡಿಸುತ್ತಾರೆ. ಆದುದರಿಂದ ಪ್ರಜಾಪ್ರಭುತ್ವವು ನಿಜವಾದ ಪ್ರಜಾಪ್ರಭುತ್ವವಾಗಬೇಕಾದರೆ ಯಾವದೇ ಕೆಲಸಕ್ಕಾಗಿ ಸೈನ್ಯವನ್ನವಲಂಬಿಸದಿರುವುದು ಇಷ್ಟವಾಗಿದೆ.

ಹಿಂದುಸ್ತಾನಕ್ಕೆ ಸೈನ್ಯದಿಂದ ಏನು ಲಾಭವಾಗಿದೆ ? ಆ ಸೈನ್ಯದ ಬಗ್ಗೆಯೆ ಈ ಲೇಖಕನು ಇಷ್ಟೊಂದು ಪ್ರಶಂಸಾಪರ ಉದ್ಗಾರಗಳನ್ನು ತೆಗೆದದ್ದು ಯಾವ ಅರ್ಥದಲ್ಲಿಯೂ ಸೈನ್ಯವು ಹಿಂದುಸ್ತಾನದ ಹಿತವನ್ನು ಸಾಧಿಸಿಲ್ಲೆಂದು ನಾನು ಹೇಳಬೇಕಾಗಿದೆ. ಕೋಟ್ಯವಧಿ ನಿರುಪದ್ರವಿ ಮತ್ತು ನಿಃಶಸ್ತ್ರ ಪ್ರಜೆಗಳನ್ನು ಅದು ದಾಸ್ಯದಲ್ಲಿಟ್ಟಿದೆ. ಅವರನ್ನು ದರಿದ್ರರನ್ನಾಗಿ ಮಾಡಿದೆ. ಈ ಸೈನ್ಯದಲ್ಲಿಯ ಬ್ರಿಟಿಶ ಸೈನ್ಯವು ಎಷ್ಟು ಬೇಗ ಹೊರಟಿದ್ದು ಹೋಗಿ ಉತ್ತಮ ಸ್ಥಳದಲ್ಲಿ ನಿಯುಕ್ತರಾಗುವರೊ ಅಷ್ಟು ಹಿಂದುಸ್ತಾನ ಇಂಗ್ಲಂಡು ಮತ್ತು ಜಗತ್ತಿಗೆ ಹಿತಕಾರಕವಾದುದು. ಹಿಂದೀ ಸೈನ್ಯವು ವಿನಾಶಕ ಉದ್ದೇಶವನ್ನು ಬಿಟ್ಟುಗೊಟ್ಟು ಅವರ ಬುದ್ಧಿ ಮತ್ತೆ ವಿಧಾಯಕ ಕಾರ್ಯದಲ್ಲಿ ಎಷ್ಟು ಬೇಗ ವಿನಿಯೋಗಿಸಲ್ಪಡುವದೊ ಅಷ್ಟು ಹಿಂದುಸ್ತಾನದಲ್ಲಿ ಪ್ರಜಾಪ್ರಭುತ್ವಕ್ಕೆ ಹಿತಕರವಾಗುವದು. ಸೈನಿಕ ಸಹಾಯದಿಂದಲೆ ತನ್ನ ಅಸ್ತಿತ್ವವನ್ನು ರಕ್ಷಿಸ ಬಯಸುವ ಪ್ರಜಾಪ್ರಭುತ್ವವು ಅಶಕ್ತ ಪ್ರಜಾಪ್ರಭುತ್ವವಲ್ಲ. ಸೈನಿಕ ಶಕ್ತಿಯಿಂದ ಮಾನಸಿಕ ಅಭಿವೃದ್ಧಿಗೆ ಪ್ರತಿಬಂಧವುಂಟಾಗುತ್ತದೆ. ಮಾನವನ ಆತ್ಮವನ್ನೇ ಅದು ಹತ್ತಿಕ್ಕುತ್ತದೆ. ಹಿಂದುಸ್ತಾನದಲ್ಲಿ ಕಳೆದ ಅನೇಕ ವರ್ಷಗಳಿಂದ ಅತಿ ತರಬೇತುಹೊಂದಿದ ಸೈನ್ಯದ ಸಹಾಯದಿಂದ ಪರಕೀಯ ಪ್ರಭುತ್ವವು ನಡೆದಿದೆ. ರಾಯಭಾರವು ಎಷ್ಟೇ ಪ್ರಯತ್ನ ಮಾಡಿದರೂ ಹಿಂದುಸ್ತಾನವು ದೀರ್ಘ ಇಲ್ಲವೆ ಅಲ್ಪ ಕಾಲದ ಯಾದವಿಯನ್ನು ಅನುಭೋಗಿಸಲೇಬೇಕಾಗುವುದು. ಆ ಯುದ್ಧವು ಸಶಸ್ತ್ರ ಸೈನ್ಯದ ಬಗ್ಗೆ ಇದ್ದ ಇಷ್ಟೊಂದು ಮೋಹವನ್ನು ಕೊನೆಗಾಣಿಸುವದೆಂದು ನಾನು ಆಶಿಸುತ್ತೇನೆ. ಸಮಾಜಕ್ಕೆ ಸಾಮಾನ್ಯವಾದ ಶಿಸ್ತನ್ನು ನೀವು ಕಾಯ್ದುಕೊಂಡದ್ದಾದರೆ ಸೈನ್ಯದ ಪಾಶವೀ ಪದ್ಧತಿಯ ಅವಶ್ಯಕತೆಯೇನು ? ಸ್ವತಂತ್ರ ಹಿಂದುಸ್ತಾನವೂ ಸದ್ಯದ ಸೈನ್ಯ ಖಾತೆಯ ವೆಚ್ಚವನ್ನು ಇಟ್ಟುಕೊಂಡಿದ್ದಾದರೆ ಬಳಲುತಿರುವ ಕೋಟ್ಯವಧಿ ಜನರಿಗೆ ಯಾವದೇ ಬಗೆಯ ಪರಿಹಾರ ಅದು ಕೊಟ್ಟಂತಾಗಲಾರದು.

ಮಸೂರಿ ಮೋ. ಕ. ಗಾಂಧಿ
೩೦-೫-೪೬.

ಮಂತ್ರಿಗಳ ಸಂಬಳ

ಮಂತ್ರಿಗಳ ಸಂಬಳವನ್ನು ಹೆಚ್ಚಿಸಿದ್ದರ ಸಂಬಂಧದಲ್ಲಿ ನಾನು ಮೊನ್ನೆದಿನ ಒಳ್ಳೆ ಎಚ್ಚರಿಕೆಯಿಂದ ಟಿಪ್ಪಣಿಯನ್ನು ಬರೆದೆನು. ನಾನು ಕೊಟ್ಟ ಎಚ್ಚರಿಕೆಯ ಬಗ್ಗೆ ವಿಷಾದಿಸುವ ಮತ್ತು ನನ್ನ ಅಭಿಪ್ರಾಯವನ್ನು ಪುನರ್ವಿಮರ್ಶಿಸುವ ಅನೇಕ ಪತ್ರಗಳನ್ನು ನಾನು ಓದಬೇಕಾಯಿತು. ತಮ್ಮ ಬಡ ಚಪರಾಸಿಗಳು ಮತ್ತು ಕಾರಕೂನರಿಗೆ ಕೇವಲ ಉಪಜೀವನಕ್ಕೆ ಸಾಲುವಷ್ಟು ಸಂಬಳ ಹೆಚ್ಚಿಸಿರುವಾಗ ಮಂತ್ರಿಗಳು ತಮ್ಮ ಮೊದಲಿನ ಹೆಚ್ಚಿನ ಸಂಬಳ ಮತ್ತೆ ಬಹಳಷ್ಟು ಎಂತು ಹೆಚ್ಚಿಸಿಕೊಳ್ಳಬಲ್ಲರು ? ನಾನು ಬರೆದ ಟಿಪ್ಪಣಿಯನ್ನು ಮತ್ತೊಮ್ಮೆ ಓದಿದೆನು. ಬೇರೆ ಬೇರೆ ಸುದ್ದಿಗಾರರು ಬಯಸಿದ್ದೆಲ್ಲ ಆ ಸಣ್ಣ ಟಿಪ್ಪಣಿಯಲ್ಲಿ ಅಡಕವಾಗಿದೆಂದು ನನ್ನ ಎಣಿಕೆ. ಆದರೆ ತಪ್ಪು ತಿಳಿವಳಿಕೆಯೇನಾದರೂ ಆಗಿದ್ದರೆ ಅವನ್ನು ಹೋಗಲಾಡಿಸಲು ನನ್ನ ಅರ್ಥವನ್ನು ವಿಶದೀಕರಿಸುತ್ತೇನೆ.

೯ ನೇ ಪುಟ ನೋಡಿರಿ

ಹಿಂ. ರಾ. ಸೇನೆಯ ಜನರ ಉಭಯ ಸಂಕಟ

ಮೊನ್ನೆ ಮಹಾತ್ಮರು ದಿಲ್ಲಿಯಲ್ಲಿ ಭಂಗೀ ಜನರ ವಸತಿಯಲ್ಲಿದ್ದಾಗ ಹಿಂ. ರಾ. ಸೇನೆಯ ೫೦–೬೦ ಜನ ಹಿರಿಯ ಅಧಿಕಾರಿಗಳು ಗಾಂಧೀಜಿಯವರನ್ನು ಭೆಟ್ಟಿಯಾದರು. ಅವರ ಅದೃಷ್ಟವು ಇನ್ನೂ ಡಳಮಳಿಸುತ್ತಿದ್ದಾಗ ಕಾಬೂಲ ಲಾಯಿನ್ಸದಲ್ಲಿ ಬಂಧನದಲ್ಲಿದ್ದ ಕಾಲಕ್ಕೆ ಗಾಂಧಿಜಿಯವರು ಅವರನ್ನು ಕಂಡಾಗ ಹಾಡಿದಂತೆಯೇ ಗುರುದೇವರ "ಜನಗಣಮನ ಅಧಿನಾಯಕ ಜಯಹೇ" ಎಂಬ ಹಾಡಿನ ಹಿಂದುಸ್ತಾನಿ ಅನುವಾದವನ್ನು ಮೇಳಗೂಡಿಕೊಂಡು ಹಾಡಿದರು. ಗಾಂಧೀಜಿಯವರು ಆ ಮೇಲೆ ಅವರನ್ನು ಕುರಿತು ಹಿಂದುಸ್ತಾನಿಯಲ್ಲಿ ಕೆಲ ಮಾತುಗಳನ್ನು ಹೇಳಿದರು.

"ನಿಮ್ಮ ಮುಂದಿರುವ ಧರ್ಮ ಸಂಕಟದ ಪ್ರಶ್ನೆಯನ್ನು ಇತರ ಮಿತ್ರರು ನನ್ನ ಮುಂದೆ ಮಂಡಿಸಿರುವರು'' ಎಂದು ಗಾಂಧೀಜಿಯವರು ಆರಂಭಿಸಿದರು. ಅಹಿಂಸೆಯ ಮುಖಾಂತರ ಹಾಗೂ ಶಾಂತ ಉಪಾಯಗಳಿಂದ ಸ್ವರಾಜ್ಯವನ್ನು ಗಳಿಸಿಕೊಳ್ಳುವದೇ ಕಾಂಗ್ರೆಸಿನ ಗುರಿಯಾಗಿದೆಂಬುದು ನಿಜ ಆದರೆ ಕಾಂಗ್ರೆಸಿನ ಈ ಧೋರಣೆಯ ಉದ್ದೇಶವು ಪೂರ್ಣವಾಗಿಲ್ಲವೊ ಎಂಬ ಬಗೆಗೆ ಸಂಶಯವನ್ನು ವ್ಯಕ್ತಪಡಿಸುತ್ತಿರುವ ಹಾಗೂ ಮುಖ್ಯವಾಗಿ ಪಲ್ಲಟಿಸಿದ ಮತ್ತು ಪಲ್ಲಟಿಸುತ್ತಿರುವ ಕಾಲಮಾನ ಪರಿಸ್ಥಿತಿಯ ದೃಷ್ಟಿಯಿಂದ ಮತ್ತು ಮುಂದಿನ ನವ್ಯ ಕೆಲಸಗಳ ಸಲುವಾಗಿ ಅದು ನಿಷ್ಪ್ರಯೋಜಕವಾಗಿದೆಯೆಂಬ ಅಭಿಪ್ರಾಯವುಳ್ಳ ಜನರು ಕಾಂಗ್ರೆಸಿನ ಒಳಗೂ ಹೊರಗೂ ಅನೇಕರಿರುವರು.

"ಸುಭಾಸ ಬಾಬುಗಳ ಕೈಯಲ್ಲಿ ವೀರಯೋದ್ಧರೆಂದು ದುಡಿದ (ನೀವು ರಣಾಂಗಣದಲ್ಲಿ ನಿಮ್ಮ ಕೆಚ್ಚನ್ನು ತೋರಿಸಿರುವಿರಿ. ಸೋಲುಗೆಲವುಗಳಾದರೋ ನಮ್ಮ ಕೈಯಲ್ಲಿಲ್ಲ; ದೇವರ ಕೈಯಲ್ಲಿವೆ. ಕಾಂಗ್ರೆಸಿನ ಹಿರಣಕ್ಕೆ ಒಳಪಟ್ಟು ಅದರ ಧೋರಣೆಯಂತೆ ನಡೆಯಬೇಕೆಂದು ನೇತಾಜಿಯವರು ನಿಮ್ಮನ್ನು ಬೀಳ್ಕೊಳ್ಳುವಾಗ ನಿಮಗೆಹೇಳಿರುವರು. ನನಗೆ ತಿಳಿದ ಮಟ್ಟಿಗೆ ನಿಮ್ಮ ಉದ್ದೇಶವು ಹಿಂದುಸ್ತಾನವನ್ನು ಸ್ವತಂತ್ರಗೊಳಿಸುವದೇ ಆಗಿದ್ದಿತಲ್ಲದೆ ಜಪಾನರಿಗೆ ನೆರವಾಗಬೇಕೆಂದಿದ್ದಿಲ್ಲ. ಬ್ರಿಟಿಷರನ್ನು ಸೋಲಿಸಬೇಕೆಂಬ ನಿಮ್ಮ ಪ್ರತ್ಯಕ್ಷ ಗುರಿಯನ್ನು ಸಾಧಿಸುವ ನಿಮ್ಮ ಕೆಲಸದಲ್ಲಿ ನೀವು ಸೋತಿರಿ. ಆದರೆ ನಾಡಿಗೆ ನಾಡು ಎಚ್ಚತ್ತಿದೆ. ಮತ್ತು ನಿತ್ಯ ಸೈನ್ಯದಲ್ಲಿ ಕೂಡ ನೂತನ ರಾಜಕೀಯ ಪ್ರಜ್ಞೆಯುಂಟಾಗಿ ಸ್ವಾತಂತ್ರ್ಯವಾದ ಮಾತುಗಳನ್ನು ಆಡಹತ್ತಿದೆಯೆಂಬ ಸಮಾಧಾನವು, ನಿಮಗಿದೆ. ನಿಮ್ಮದಲದಲ್ಲಿ ಹಿಂದೂ, ಮುಸಲ್ಮಾನ, ಕ್ರಿಶ್ಚಿಯನ್ ಆಂಗ್ಲೊ ಇಂಡಿಯನ್ ಪಾರ್ಶಿ, ಶೀಖರೆಂಬ ಭೇದಭಾವವನ್ನಳಿದು ಒಕ್ಕಟ್ಟನ್ನು ಸಾಧಿಸಿರುವಿರಿ. ಇದೇನೂ ಸಾಮಾನ್ಯ ಸಿದ್ಧಿಯಲ್ಲ. ಹಿಂದುಸ್ತಾನದ ಹೊರಗೆ ಸ್ವಾತಂತ್ರ್ಯದ ನಿಲುಮೆಯಲ್ಲಿ ಕೈಗೂಡಿಸಿಕೊಂಡದ್ದನ್ನು ಹಿಂದೀ ಪರಿಸ್ಥಿತಿಯಲ್ಲಿ ಕಾದುಕೊಂಡು ಜೀವಂತವಾಗಿ ಉಳಿಸಿಕೊಳ್ಳಬೇಕಾಗಿದೆ. ಅದೇ ನಿಮ್ಮ ನಿಜವಾದ ಪರೀಕ್ಷೆ.

ಅಹಿಂಸೆಯ ತತ್ವವನ್ನು ನೀವು ಅರಗಿಸಿಕೊಂಡಿದ್ದರೆ ಇಲ್ಲಿಯೂ ನೀವು ಅಂತರಂಗದಲ್ಲಿ ಸ್ವತಂತ್ರ ಮನುಷ್ಯರಾಗಿ ಉಳಿಯುವಿರಿ. ಉದಾಹರಣಾರ್ಥ ಭೂಮಿಯ ಮೇಲಿನ ಯಾವ ಸರಕಾರವೂ ಹೃದಯದಲ್ಲಿ ಸ್ವಾತಂತ್ರ್ಯವನ್ನು ಸಾಧಿಸಿದ ಜನರನ್ನು ಅವರ ಮನಸಿನ ವಿರುದ್ಧ ಮಣಿಸಲಾರದು. ಅವರನ್ನು ಕೊಲ್ಲುವ ಹೆದರಿಕೆಯನ್ನು ಅದು ಹಾಕಿದರೆ ಅವರು ತಮ್ಮ ಕೊರಳುಗಳನ್ನು ಕತ್ತರಿಸಿ ಬಲಿಗೊಡುವರು; ಆದರೆ ಬಗ್ಗಲೊಪ್ಪರು. ಇಂತಹ ನಿರ್ಘೃಣವಾದ ಕೊಲೆಗಡಗತನವನ್ನು ಸೈನಿಕರಅಂತರಂಗವು ಸಿಡಿದೆದ್ದು ಪ್ರತಿಭಟಿಸುವ ಸಂಭವವಿದೆ. ಹೀಗೆ ಅವರು ಬದುಕಲಿ ಇಲ್ಲವೆ ಸಾಯಲಿ, ಅವರೇದೂ ಅಡಿಯಾಳುಗಳಾಗರು. ನೀವೆಲ್ಲರೂ ಹೃದಯದಲ್ಲಿ ಸ್ವತಂತ್ರ ಭಾವದವರಾದರೆ ಸಮಗ್ರ ಹಿಂದುಸ್ತಾನವೇ ಸ್ವತಂತ್ರವಾಗುವದು. ನಿಮ್ಮನ್ನವರು ಬಂಧಿಸಿ ಸೆರೆಯಲ್ಲಿಡಬಹುದು. ನೀವು ಅದನ್ನು ಸ್ವಾಗತಿಸುವಿರಿ ಇಲ್ಲವೆ ಕಾರಾಗ್ರಹದಲ್ಲಿ ನಿಮ್ಮನ್ನಿಡುವ ಮುಂಚೆಯೇ ನೀವು ಹೋರಾಡಿ ಮಡಿದು ಶವಗಳಾಗುವದಾಗಿಯೂ ಅವರಿಗೆ ಹೇಳಬಲ್ಲಿರಿ. ಅಹಿಂಸೆಯ ಮಾರ್ಗವನ್ನೊಪ್ಪಿಕೊಂಡ ಸೈನಿಕರಿಗೆ ಇವೆರಡೂ ದಾರಿಗಳು ತೆರವಾಗಿವೆ. ಮತ್ತು ಉಚ್ಚತರಗತಿಯ ಶೌರ್ಯಕ್ಕೆ ಎರಡರಲ್ಲಿಯೂ ಎಡೆಯಿದೆ. ಹಿಂದುಸ್ತಾನದ ೪೦ ಕೋಟಿ ಜನರಲ್ಲಿ ಜೀವ ಕಳೆಯನ್ನು ತುಂಬುವ ಕೆಲಸವೇ ಇಂದು ನಮ್ಮದಿದೆ. ಅವರ ಹೃದಯರೊಳಗಿನ ಅಂಜಿಕೆಯನ್ನು ಹೊಡೆದೊಡಿಸಬೇಕಾಗಿದೆ. ತಮ್ಮ ಅಂಜಿಕೆಯನ್ನೆಲ್ಲ ಅವರು ಕಳೆದು ಕೊಂಡ ದಿನವೇ ಹಿಂದಮಾತೆಯ ಸಂಕೋಲೆಗಳೆಲ್ಲ ಕಳಚಿ ಬೀಳುವವು ಮತ್ತು ಆಕೆಯು ಸ್ವತಂತ್ರಗಳಾಗುವಳು.

ಕೆಲ ವರ್ಷಗಳ ಹಿಂದೆ ನಂಕನಾಸಾಹೇಬದಲ್ಲಿ ಒಂದು ಮಾತನ್ನು ಹೇಳಿದೆ. "ಶೀಖರು ತಮ್ಮ ಬಾಹುಪರಾಕ್ರಮದ ದೃಕ್ಪ್ರತ್ಯಯವನ್ನು ಮಾಡಿಕೊಟ್ಟಿರುವರು. ಆದರೆ ತಮ್ಮ ಕೃಪಾಣದ ಬದಲು ಆತ್ಮಶಕ್ತಿಯ ಖಡ್ಗವನ್ನು ಅರ್ಥಾತ್ ಅಹಿಂಸೆಯನ್ನು ಅವರು ಅಂಗೀಕರಿಸಿದ ಬಳಿಕವೇ ಗುರುಗೋವಿಂದ ಸಿಂಹರ ಧ್ಯೇಯ:ಸಿದ್ಧಿಯಾಗುವದು. ಖಡ್ಗವನ್ನು ಹತ್ತಿರವಿಟ್ಟುಕೊಳ್ಳುವ ಬಯಕೆಯಿರುವ ವರೆಗೆ ಸಂಪೂರ್ಣ ನಿರ್ಭಯತೆಯನ್ನು ಸಾಧಿಸಿದಂತಾಗದು. ಅಹಿಂಸೆಯ ಖಡ್ಗಧಾರಿಗಳಾದ ಬಳಿಕ ಭೂಮಂಡಲದಲ್ಲಿಯ ಯಾವ ಶಕ್ತಿಯೂ ನಿಮ್ಮನ್ನು ಮಣಿಸದು. ಗೆದ್ದವರನ್ನೂ ಸೋತರನ್ನೂ ಕೂಡಿಯೇ ಅದು ಪವಿತ್ರೀಕರಿಸುತ್ತದೆ. ನೇತಾಜಿಯವರು ನಿಮ್ಮಲ್ಲಿ ನೂತನ ಅಂತಃಶಕ್ತಿಯನ್ನು ತುಂಬಿದ್ದಾರೆ. ಅಹಿಂಸೆಯ ಮೂಲಕವೇ ಆ ಅಂತಃಶಕ್ತಿಯು ಜೀವಂತವಾಗಿ ಉಳಿಯಬಲ್ಲದು.

ಭುಜಬಲಪರಾಕ್ರಮದ ಧೈರ್ಯದ ಮಾತುಗಳಲ್ಲಿ ಅಹಿಂಸೆಯ ಅರ್ಥವತ್ತತೆಯನ್ನು ಅವರಿಗೆ ಅರುಹಿದ ಬಳಿಕ ಆದರ್ಶ, ಸ್ವಾಭಿಮಾನಿ ನಾಗರಿಕನಾಗಲು ಸತ್ಯಾಗ್ರಹಿ ಸೈನಿಕನಿಗೆ ಬೇಕಾಗುವ ಧೈರ್ಯದ ಉದಾತ್ತ ಸ್ವರೂಪವನ್ನು ಗಾಂಧೀಜಿಯವರು ಅವರ ಮುಂದೆ ಇಡಲಾರಂಭಿಸಿದರು. "ಎಲ್ಲಕ್ಕೂ ಮಿಗಿಲಾಗಿ, ಇತರರ ದಾನವನ್ನಲಂಬಿಸಿ ನೀವೆಂದೂ ಇರಬಾರದು; ಅಥವಾ ಭಿಕ್ಷೆಯಿಂದ ಜೀವಿಸಬಾರದು. ಹಿಂದುಸ್ತಾನದ ಸಲುವಾಗಿ ಇಂಫಾಲದ ರಣಾಂಗಣದಲ್ಲಿ ನೀವು ಹೋರಾಡಿದ ನಿಮಿತ್ತದಿಂದ ಜನರೆಲ್ಲ ನಿಮ್ಮನ್ನು ಆವಾಗಲೂ ರಮಿಸಿ ಅನುರಂಜಿಸುತ್ತಿರಬೇಕೆಂದು ಬಯಸಕೂಡದು ಹಾಗೆ ನೀವು ಮಾಡಿದರೆ ರುಚಿಯನ್ನು ಕಳೆದುಕೊಂಡ ಉಪ್ಪಿನಂತೆ ನಿಮ್ಮ ಗುಣವನ್ನೆಲ್ಲ ನೀವು ಕಳೆದುಕೊಳ್ಳುವಿರಿ. ಮೈಮುರಿದು ದುಡಿದು ಬದುಕುವದು ಲೇಸಲ್ಲದೆ ಬಿಕ್ಕೆಬೇಡಿ ದಾನ ತೆಗೆದುಕೊಂಡು ಬದುಕಬಾರದು. ಸಾರಾಂಶ, ಇಲ್ಲಿಯವರೆಗೆ ಸಸ್ತ್ರಪಾಣಿಗಳಾಗಿ ತೋರಿದ ಶೌರ್ಯಧೈರ್ಯಗಳನ್ನೇ ನೀವು ಅಹಿಂಸಾವ್ರತಸ್ಥರಾಗಿಯೂ ತೋರಬೇಕು.

"ನಿಮಗೆ ಭೂಮಿ ಬೇಕಾದರೆ ನಿಮಗೆ ದೊರೆಯುವದು. ಅದನ್ನು ಹಸನಗೊಳಿಸಿ ಆದರ್ಶ ಕ್ಷೇತ್ರಗಳನ್ನಾಗಿ ಮಾಡಿರಿ. ನಮ್ಮ ಜನರನ್ನೆಲ್ಲ ಯುಗಯುಗಾಂತರದಿಂದ ಮುಚ್ಚಿ ಮುಸುಕಿ ಕಂಗೆಡಿಸಿದ ಮುಗ್ಗಲತನವನ್ನು ನೀವು ಹೊಡೆದೋಡಿಸಬೇಕಾಗಿದೆ. ಉದ್ಯೋಗ ಹಾಗು ದೀರ್ಘ ಪರಿಶ್ರಮದ ಮೇಲ್ಪಂಕ್ತಿಯನ್ನು ಹಾಕಿಕೊಟ್ಟರೇನೆ ಆದನ್ನು ಸಾಧಿಸಬಲ್ಲಿರಿ. ಚಾತುರ್ಯ ದಕ್ಷತೆಗಳಿಂದ ಹೆಡಿಗೆಯ ಕಸಬರಿಗಳ ಬಳಕೆಯನ್ನು ಮಾಡಲು ನೀವು ಸಮರ್ಥರಾಗಬೇಕು. ಮತ್ತು ಶೌಚಕೂಪಗಳನ್ನು ಸ್ವಚ್ಛಮಾಡುವಉದ್ಯೋಗವು ಹೊಲೆಗೆಲಸವೆಂದೂ ಕೀಳ್ಗೆಲ್ಲಸವೆಂದೂ ಬಗೆಯಬಾರದು. ಈ ಕೆಲಸದಲ್ಲಿಯ ಪ್ರಾವೀಣ್ಯವು ವ್ಹಿಕ್ಟೋರಿಯಾ ಕ್ರಾಸನ್ನು ಪಡೆವುದಕ್ಕಿಂತಲೂ ಹೆಚ್ಚು ಶೌರ್ಯದ ಕೆಲಸ.

ಆ ಮೇಲೆ ಪ್ರಶ್ನೋತ್ತರಗಳು ನಡೆದವು :—

ಪ್ರ :— ಯುದ್ಧದಲ್ಲಿಯೇ ಎಲ್ಲ ಬಾಳನ್ನು ಸವೆಸಿದವನು ಅಹಿಂಸೆಯನ್ನು ಯಶಸ್ವಿಯಾಗಿ ಹೇಗೆ ಅಂಗೀಕರಿಸಬಲ್ಲನು ? ಅವೆರಡೂ ವಿಸಂಗತವಲ್ಲವೆ?

ಉ :— ನಾನೊಪ್ಪುವದಿಲ್ಲ. ಬಾದಶಹಾಖಾನರು ಪಠಾಣರಿರುವರು. ಆದರೆ ಇಂದು ಅವರು ಅಹಿಂಸೆಯ ಸೈನಿಕರಾಗಿರುವರು. ಟಾಲ್‌ಸ್ಟಾಯರೂ ಸೈನ್ಯದಲ್ಲಿ ದುಡಿದರು. ಆದರೂ ಯುರೋಪಿನಲ್ಲಿ ಅವರೇ ಅಹಿಂಸೆಯ ಅಧ್ವರ್ಯುಗಳಾದರು. ಅಹಿಂಸೆಯಲ್ಲಿರುವ ಅಂತಃಸತ್ತ್ವದ ಅರಿವು ನಮಗಿನ್ನೂ ಪೂರ್ಣ ಆಗಿಲ್ಲ. ೧೯೪೨ರಲ್ಲಿ ಸರಕಾರವು ನನ್ನನ್ನು ಬಂಧಿಸಿರದಿದ್ದರೆ ಅಹಿಂಸೆಯಿಂದ ಜಪಾನವನ್ನು ಹೇಗೆ ಎದುರಿಸಬಹುದೆಂಬದನ್ನು ನಾನು ತೋರಿಸುತ್ತಿದ್ದೆ.

ಪ್ರ — ಆತ್ಮರಕ್ಷಣೆಗಾಗಿ ಆಯುಧವನ್ನು ಉಪಯೋಗಿಸುವದು ನಿಶ್ಚಯವಾಗಿಯೂ ಅಹಿಂಸಾಭಂಗವಲ್ಲ ?

ಉ — ವೇವೆಲ, ಅಚಿನ್ಲೆಕ, ಹಿಟ್ಲರರಂಥವರೂ ವಿನಾಕಾರಣ ಶಸ್ತ್ರ ಪ್ರಯೋಗಿಸುವದಿಲ್ಲ. ಆದರೆ ಅದು ಅಹಿಂಸೆಯಾಗದು. ಸಮರ್ಥನೆ ಏನೇ ಇದ್ದರೂ ಅದು ಹಿಂಸೆಯೆ.

ಪ್ರ — ನೀವು ಅಹಿಂಸೆಯನ್ನಪ್ಪಿಕೊಂಡು ಇಡೀ ಜಗತ್ತನ್ನೇ ನಿಮ್ಮೊಡನೆ ಕೊಂಡೊಯ್ಯಲಾರಿರಿ. ನೀವದರಲ್ಲಿ ಒಂದನ್ನೇ ಆರಿಸಿಕೊಳ್ಳಬೇಕಾಗುವದು.

ಉ — ನಾನಿದನ್ನು ಒಪ್ಪಲಾರೆ. ಸುಧಾರಕನು ಪ್ರವಾಹದಗುಂಟ ಸಾಗಬೇಕಾಗುವದಿಲ್ಲ. ಅನೇಕ ಸಲ ಅವನು ಪ್ರವಾಹದ ವಿರುದ್ಧ ಪ್ರಾಣದ ಪರಿವೆ ಇಲ್ಲದೆ ಹೋಗಬೇಕಾಗುತ್ತದೆ. ತಿಳಿಗೆಟ್ಟ ಜನತೆಯ ಹೊಗಳಿಕೆಯಿಂದ ನೀವು ಕಂಗೆಡಬಾರದು. ಆಯುಧವನ್ನು ನೀವು ಹೇಗೆ ಉಪಯೋಗಿಸಬೇಕೆಂಬ ಸಂದೇಶದನ್ನು ಜನತೆಗೆ ಕೊಡಬೇಕಾಗಿಲ್ಲ. ಆದರೆ ಆಯುಧವನ್ನು ಕಂಡು ಹೆದರದಿರುವದನ್ನು ಅವರಿಗೆ ಕಲಿಸಬೇಕಾಗಿದೆ.

ಪ್ರ — ಸುಭಾಸರು ವಿಜಯಿಗಳಾಗಿ ನಿಮ್ಮ ಬಳಿಗೆ ಬಂದಿದ್ದರೆ ನೀವೇನು ಮಾಡುತ್ತಿದ್ದಿರಿ ?

ಉ — ನಿಮ್ಮ ಶಸ್ತ್ರಗಳನೆಲ್ಲ ಕಸಿದುಕೊಂಡು ನನ್ನೆದುರು ರಾಶಿಹಾಕಲು ಹೇಳುತ್ತಿದೆ.

ದೂರ ಚಾಚುವ ನೆರಳು

ಭಾರತ ಅನೇಕ ನಗರಗಳಲ್ಲಿ ಜಾತೀಯ ಗಲಭೆಗಳ ನೆರಳು ಇನ್ನೂ ದೂರ ಚಾಚುತಿರುವಾಗಲೆ ಮಹಾತ್ಮರು ಮಾಸೂರಿಗೆ ತೆರಳಿದರು. ಆ ತಿಳಿಗೇಡಿತನದ ಗಲಭೆಗಳಿಂದ ಮಹಾತ್ಮರಿಗೆ ಬಹಳ ವ್ಯಥೆಯಾಗಿದೆ. ಹೊಣೆಗೆಟ್ಟ ಜನರು ಇತರರನ್ನು ಹೆದರಿಸಿ ಪುಂಡಾಟಿಕೆ ನಡೆಸುವದಕ್ಕಾಗಿ, ಇಲ್ಲವೆ ಜನ ಜಂಗುಳಿಯು ಅವಿಚಾರದ ಪ್ರಚಾರದ ಸುಳಿಗೆ ಸಿಕ್ಕು ಈ ಗಲಭೆಗಳನ್ನು ಪ್ರಾರಂಭಿಸುತ್ತಿದೆಂಬದು ಮಹಾತ್ಮರಿಗೆ ಗೊತ್ತಿದೆ. ಇಂಥ ಗಲಭೆಗಳಲ್ಲಿ ಅವಕ್ಕೆ ನಿಜವಾದ ಕಾರಣರಾದವರು ಗೌರವದ ಪರದೆಯಲ್ಲಿ ಸುರಕ್ಷಿತರಾಗಿ ಕುಳಿತಿರುತ್ತಾರೆ. ಆದರೆ ಬೀದಿಯಲ್ಲಿಯ ನಿರಪರಾಧಿಗಳು ಬಲಿ ಬೀಳುತ್ತಾರೆ.

೧೬೭೮-೮೦ರ ಪೋಪೀಯ ಒಳಸಂಚಿನ ಕಾಲಕ್ಕೆ ಇದ್ದ ದೇಶದ ಹೆದರಿಕೆಯ ಪರಿಸ್ಥಿತಿಯನ್ನು ಒಬ್ಬ ಪ್ರಸಿದ್ಧ ಆಂಗ್ಲ ಲೇಖಕನು ಹೀಗೆ ಬರೆದಿದ್ದಾನೆ.

"ನಮ್ಮ ಕಾಲದಲ್ಲಿ ಪೋಪನ ಅಧಿಕಾರವನ್ನು ಎದುರಿಸಿ ಕಾದುವದಕ್ಕಾಗಿ ೧೦೦ ಜಟ್ಟಿಗಳು ಸದಾ ಸಿದ್ಧರಾಗಿರುತ್ತಿದ್ದರು. ಆದರೆ ಅವರಿಗೆ ತಮ್ಮ ವೈರಿ ಯಾರೆಂಬುದೇ ತಿಳಿದಿರಲಿಲ್ಲ''

ನಮ್ಮ ಇಂದಿನ ಜಾತೀಯ ಗಲಭೆಗಳಿಗೂ ಇದೇ ಅನ್ವಯಿಸುವದು. ಇಂಥ ಪ್ರಸಂಗಗಳಲ್ಲಿ ಪ್ರಾರ್ಥಿಯು ಏನು ಮಾಡಬೇಕು ಎಂದು ಮಹಾತ್ಮರು ದಿಲ್ಲಿಯಲ್ಲಿಯ ಕೊನೆಯ ಪ್ರಾರ್ಥನಾ ಸಭೆಯಲ್ಲಿ ಕೇಳಿದರು. ಅಂದು ಮೌನ ದಿನವಾದ್ದರಿಂದ ಮಹಾತ್ಮರು ಬರೆಹದಲ್ಲಿಯೆ ಹೀಗೆ ಉತ್ತರಿಸಿದರು. "ಗಲಭೆ ಸಂಭವಿಸುವ ಪ್ರದೇಶಗಳನ್ನೆಲ್ಲ ಸಂದರ್ಶಿಸುವದು ಯಾರಿಗೂ ಸಾಧ್ಯವಿಲ್ಲೆಂಬುದು ಸ್ಪಷ್ಟವಾಗಿದೆ. ಆದರೆ ಕಾಯಾ,ವಾಚಾ, ಮನಸಾ ಅದಕ್ಕೆ ಪ್ರೋತ್ಸಾಹನ ಕೊಡದಿರುವದು ಸಾಧ್ಯವಿದೆ. ನಿಮ್ಮ ಕಣ್ಣೆದುರಿನಲ್ಲಿಯೆ ಗಲಭೆ ಸಂಭವಿಸಿದರೆ ಇತರರ ಪ್ರಾಣವನ್ನು ಕೊಳ್ಳದೆ ನಿಮ್ಮ ಪ್ರಾಣವನ್ನಾದರೂ ಅರ್ಪಿಸಿ ಗಲಭೆಯನ್ನು ನಿಲ್ಲಿಸಲು ಪ್ರಯತ್ನಿಸಬೇಕು. ನಾನು ನಿನ್ನೆ ಹೇಳಿದಂತೆ ಆಡಿದ ಮಾತಿಗಿಂತಲೂ ಪ್ರಭಾವಿಯಾದದ್ದು ಸದ್ವಿಚಾರ. ನೀವಿದನ್ನು ನಂಬುವಿರಾ ? ನಂಬಿ ಅದರಂತೆ ನಡೆದುಕೊಳ್ಳುವಿರಾ ?

ಮಸೂರಿ

ನಿಬಿಡ ಕಾನನದಿಂದೊಪ್ಪುವ ಮಸೂರಿಯ ದೇವದಾರು ಸುಗಂಧಿತ ಶೀತಲವಾಯುವು ಬಿರುಗಾಳಿ, ಬಿಸಿಲಿನ ಬೇಗೆಯಲ್ಲಿ ಹುರಪಳಿಸುತ್ತಿರುವ ರಾಜಧಾನಿಯಿಂದ ಬಂದ ಮಹಾತ್ಮನಿಗೆ ಸುಖಸ್ವಾಗತವನ್ನಿತ್ತಿತು. ಮಹಾತ್ಮರು ಮಸೂರಿಗೆ ಆಗಮಿಸಿದ್ದು ಇದು ಮೂರನೆಯ ಸಲ. ಲಾಹೋರ ಕಾಂಗ್ರೆಸದಲ್ಲಿ ಭಾರತ ಸ್ವಾತಂತ್ರ್ಯದ ಠರಾವು ಪಾಸಾದ ವರ್ಷ ಅಂದರೆ ಇಂದಿಗೆ ೧೮ ವರ್ಷಗಳ ಹಿಂದೆ ಮಹಾತ್ಮರು ಇಲ್ಲಿಗೆ ಈ ಮೊದಲು ಆಗಮಿಸಿದ್ದರು. ಇಲ್ಲಿ ತಮ್ಮ ನಿವಾಸವಾದ ಬಿರ್ಲಾ ಭವನದಲ್ಲಿ ಪ್ರಥಮ ಸಾಯಂ ಸಭೆಯಲ್ಲಿ ಮಹಾತ್ಮರು ಮಾಡಿದ ಭಾಷಣದಲ್ಲಿ ಆತ್ಮನಿರೀಕ್ಷಣೆ, ದುಃಖ ಉದಾಸಭಾವ ಇವೆಲ್ಲ ಸೇರಿದ್ದವು. ಆಧುನಿಕ ಅಲಂಕಾರಗಳ ಬೆಡಗಿನ ಆಗರವಾದ ಮಸೂರಿಯಲ್ಲಿ ಮಹಾತ್ಮರಿಗೆ ಹೇಗೆ ಪ್ರಶಸ್ತವೆನಿಸಬೇಕು? ಕಾಂಗ್ರೆಸದ ಕಾರ್ಯಕ್ಕಾಗಿ ತಾವು ಈ ಮೊದಲು ಮಸೂರಿಗೆ ಬಂದದ್ದನ್ನು ಅರುಹಿದರು. ಈ ಸಲ ಅವರು ತಮ್ಮ ಸ್ವಂತದ ಕೆಲಸಕ್ಕಾಗಿ ಬಂದಿದ್ದಾರೆ. "ನಾನು ಕಾಂಗ್ರೆಸ್ಸಿನ ನಾಲ್ಕಾಣೆ ಸದಸ್ಯನು ಕೂಡ ಇಲ್ಲ. ಆದರೆ ನಿಷ್ಕಾಮ ಬುದ್ಧಿಯಿಂದ ತಮ್ಮ ಮಿತಿ ಮೀರಿ ಕಾಂಗ್ರೆಸ್ಸಿಗೆ ಮೌನವಾಗಿ ಸೇವೆ ಸಲ್ಲಿಸುತ್ತಿದ್ದರೂ ಸದಸ್ಯರ ಯಾದಿಯಲ್ಲಿರದಿರುವ ಅಸಂಖ್ಯಾತ ಕಾಂಗ್ರೆಸ ಕರ್ತರಲ್ಲಿ ನಾನೂ ಒಬ್ಬನಾಗಿದ್ದೇನಷ್ಟೆ. ಹೀಗೇಕೆ? ಯಾಕಂದರೆ ಸ್ವಾತಂತ್ರ್ಯ ಪಿಪಾಸೆಯು ಅವರನ್ನು ಆವರಿಸಿದೆ. ಸ್ವಾತಂತ್ರ್ಯವನ್ನು ಹೇಗೆ ಸಂಪಾದಿಸಬೇಕೆಂಬುದು ಅವರಿಗೆ ಗೊತ್ತಿಲ್ಲ. ಭಾರತ ಸ್ವಾತಂತ್ರ್ಯವನ್ನು ಸಂಪಾದಿಸುವದಕ್ಕಾಗಿ ಕಳೆದ ೬೦ ವರ್ಷ ಹೋರಾಟ ನಡೆಸಿದ ಸಂಸ್ಥೆ ಕಾಂಗ್ರೆಸು ಎಂದು ಅವರು ಕೇಳಿದ್ದಾರೆ. ಆದ್ದರಿಂದ ಅವರು ಕಾಂಗ್ರೆಸಿನ ಭಕ್ತರಾಗಿದ್ದಾರೆ. ಅಂಥವರಲ್ಲಿ ಒಬ್ಬ ವಿನಿಮ್ರ ವ್ಯಕ್ತಿಯೆಂದು ನಾನು ವೈಯಕ್ತಿಕವಾಗಿ ಬಂದಿದ್ದೇನೆ. ಯಾರೊಬ್ಬರೂ ನನ್ನನ್ನು ನೋಡಿಕೊಳ್ಳುವದಕ್ಕಾಗಿ ಆಯಾಸಪಟ್ಟುಕೊಳ್ಳಬೇಕಾಗಿಲ್ಲ. ದೇವರೊಬ್ಬರೇ ನನ್ನ ಸಂರಕ್ಷಕ- ನಾಳಿಗೆ ತನಗೇನಾಗುವದೆಂಬದನ್ನು ಅರಿಯದ ಕ್ಷುದ್ರ ಮಾನವನು ಇತರರನ್ನೆಂತು ರಕ್ಷಿಸಬಲ್ಲನು? ನಾನು ದೇವರ ರಕ್ಷಣೆಯಲ್ಲಿದ್ದರೆ ಸಾಕು. ಅವನು ನನ್ನನ್ನು ಕಾಯಲಿ. ಇಲ್ಲವೆ ಕೊಲ್ಲಲಿ. ಅವನು ಕೆಲವು ಸಲ ಕಾಯುವದಕ್ಕಾಗಿಯೂ ಕೊಲ್ಲುತ್ತಾನೆಂದು ನನಗೆ ತಿಳಿದಿದೆ."

ಮಸೂರಿಯ ಸಿರಿವಂತರ ಬೆಡಗಿನ ಬಾಳಿನ ಬಗ್ಗೆ ಮಹಾತ್ಮರು ಈಗಾಗಲೆ ಕೇಳಿದ್ದಾರೆ. ಈ ಸಲ ಬಂದ ಕೂಡಲೆ ಪುನಃ ಅದರ ಪುನರುಚ್ಚಾರವಾಯಿತು. ಹಿಮಾಲಯದಲ್ಲಿಯ ಇತರ ಪರ್ವತ ನಗರಗಳಲ್ಲಿಯಂತೆ ಮಸೂರಿಯಲ್ಲಿಯೂ ಬಡವರ ವಾಸಕ್ಕೆ ಅವಕಾಶವಿಲ್ಲ. "ಬಡವರು ನಿಮಗಾಗಿ ಜೀತದಾಳುಗಳಂತೆ ದುಡಿಯುತ್ತಾರೆ. ನಿಮ್ಮ ರಿಕ್ಷಾ ಬಂಡಿಗಳನ್ನು ಎಳೆಯುತ್ತಾರೆ. ಧಷ್ಟಪುಷ್ಟ ಮನುಷ್ಯನು ಕುಳಿತಂಥ ರಿಕ್ಷಾಬಂಡಿಯನ್ನೇ ನಮ್ಮ ಸಹಭ್ರಾಂಧವನು ಎಳೆಯುವದನ್ನು ಕಂಡು ನನಗೆ ನೋವಾಗುತ್ತದೆ. ನಿಮಗೂ ವ್ಯಥೆಯಾಗಬೇಕು. ನಿಮ್ಮನ್ನು ಟೀಕಿಸುವದಕ್ಕಾಗಿ ನಾನು ಈ ಮಾತುಗಳನ್ನು ಕೇಳುತ್ತಿರುವದಿಲ್ಲ. ಹಿಂದಿಯರೇ ಆದ ಈ ಬಡಪಾಯಿಗಳ ಅಸ್ತಿತ್ವವನ್ನೇ ಮರೆತು ಬಿಡುವಿರೇನೊ ಎಂದು ಹೇಳುತ್ತಿದ್ದೇನೆ. ಅವರ ವಿಷಯವಾಗಿ ವಿಚಾರಿಸಿ ಅವರ ಜೀವನವನ್ನರಿತುಕೊಳ್ಳುವದು ನಿಮಗೇ ಕೂಡಿದೆ.

"ಬೇಸಿಗೆಯಲ್ಲಿ ಪರ್ವತನಗರಗಳಿಗೆ ಹೋಗುವಷ್ಟು ರಾಮನಾಮವು ನನ್ನನ್ನು ಸಮರ್ಥನನ್ನಾಗಿಸುವ ದಿನವನ್ನು ಎದುರುನೋಡುತ್ತಿದ್ದೇನೆ. ಕೋಟ್ಯಾವಧಿ ಜನರಿಗೆ ಪರ್ವತ ನಗರಗಳಿಗೆ ಹೋಗಲಿಕ್ಕಾಗುವದಿಲ್ಲ. ಅವರು ಬಯಲಿನಲ್ಲಿಯೆ ಹುಟ್ಟಿ ಸಾಯುತ್ತಾರೆ.

"ನಾನಿಲ್ಲಿ ಸುಖಾನುಭವಕ್ಕಾಗಿ ಬಂದಿಲ್ಲ. ಆದರೆ ನಾನಿನ್ನೂ ಕೆಲವು ವರ್ಷ ಬದುಕಬೇಕಾದರೆ ಇಂಥಲ್ಲಿಗೆ ಹೋಗಬೇಕೆಂದು ಡಾಕ್ಟರರು ಹೇಳಿದ್ದರಿಂದ ಇಲ್ಲಿಗೆ ಬಂದಿದ್ದೇನೆ. ನನಗೆ ನಿಮ್ಮ ಆಶೀರ್ವಾದಗಳನ್ನು ಕೊಡಿರಿ ನನ್ನ ಕೆಲಸವನ್ನು ಸಾಗಿಸಿಕೊಳ್ಳಲಿಕ್ಕೂ ಸೃಷ್ಟಿಕರ್ತನನ್ನು ಚಿಂತಿಸುವದಕ್ಕೂ ಮೌನಮಯ ಅವಕಾಶವನ್ನೊದಗಿಸಿಕೊಡಿರಿ."

ಬವಡರ ನಿವಾಸ

ಮಹಾತ್ಮರು ಈ ವಿಷಯವನ್ನು ಇಲ್ಲಿಗೆ ನಿಲ್ಲಿಸಲಿಲ್ಲ. ಮರು ದಿನ ಅವರು ಪುನಃ ಅದೇ ವಿಷಯವನ್ನೆತ್ತಿಕೊಂಡು ಮಸೂರಿಯಲ್ಲಿ ಬಡವರಿಗಾಗಿ

(೧೦ ನೇ ಪುಟ ನೋಡಿರಿ)

ಟೀಕೆ--ಟಿಪ್ಪಣಿಗಳು

೭ ನೇ ಪುಟದಿಂದ ಮುಂದರಿದುದು

ಕರಾಚಿ ಗೊತ್ತುವಳಿಯನ್ನು ಉಲ್ಲೇಖಿಸದಿದ್ದುದಕ್ಕೆ ನನ್ನನ್ನು ಟೀಕಿಸಲಾಗುತ್ತದೆ. ಮಂತ್ರಿಗಳ ಕಡಮೆ ಸಂಬಳದ ಪ್ರಮಾಣವು ಕೇವಲ ಆ ಗೊತ್ತುವಳಿಯನ್ನು ಆಧರಿಸಿ ನಿಂತಿಲ್ಲ ಆದರೆ ಅದಕ್ಕೂ ಮೇಲ್ಮಟ್ಟದಲ್ಲಿದೆ. ನಾನು ತಿಳಿದಮಟ್ಟಿಗೆ ಕಾಂಗ್ರೆಸು ಆ ಗೊತ್ತುವಳಿಯನ್ನು ಎಂದೂ ಬದಲಿಸಿಲ್ಲ. ಅದು ಪಾಸಾದ ಕಾಲದಲ್ಲಿಯಂತೆ ಈಗಲೂ ಬಂಧನಕಾರಕವಾಗಿದೆ.

ಸಂಬಳವನ್ನು ಹೆಚ್ಚಿಸಿದ್ದು ನ್ಯಾಯ್ಯವಾಗಿದೆಯೊ ಎಂಬುದನ್ನು ನಾನರಿಯೆ. ಮಂತ್ರಿಗಳ ಹೇಳಿಕೆಯನ್ನು ಕೇಳಿಕೊಳ್ಳದೆ ನಾನು ಸಂಬಳದ ಹೆಚ್ಚಳವನ್ನು ನಿಷೇಧಿಸತಕ್ಕದ್ದಲ್ಲ ಅವರ ಮೇಲೆ ಅಷ್ಟೆ ಏಕೆ ನನ್ನ ಹೊರತು ಎರಡನೆಯಾರ ಮೇಲೆಯೇ ನನ್ನ ಅಧಿಕಾರವೇನೂ ಇಲ್ಲೆಂಬುದನ್ನು ಟೀಕಾಕಾರರು ಅರಿಯತಕ್ಕದ್ದು. ಅಲ್ಲದೆ ವರ್ಕಿಂಗ ಕಮಿಟಿಯ ಎಲ್ಲ ಸಭೆಗಳಲ್ಲಿಯೂ ನಾನು ಉಪಸ್ಥಿತನಾಗಿರುವದಿಲ್ಲ. ಅಧ್ಯಕ್ಷರು ಕರೆದಾಗ ಮಾತ್ರ ನಾನು ವರ್ಕಿಂಗ ಕಮಿಟಿ ಸಭೆಗೆ ಹೋಗುವೆ. ನಾನು ಕೇವಲ ಅಭಿಪ್ರಾಯವನ್ನು ಮಾತ್ರ ಕೊಡಬಲ್ಲೆ. ಏನಾದರೂ ವರ್ಜಸ್ಸನ್ನುಪಯೋಗಿಸಬೇಕಾಗಿದ್ದರೆ ನನ್ನ ಆ ಅಭಿಪ್ರಾಯಪೂರ್ವಕ ವಿಚಾರ ಮಾಡಿದ್ದು ಸಂಗತಿಗಳನ್ನೆಲ್ಲ ತಿಳಿದುಕೊಂಡಬಳಿಕ ಕೊಟ್ಟದ್ದು ಆಗಿರಬೇಕು.

ಶ್ರೀಮಂತ—ಬಡವರಲ್ಲಿ ಉಚ್ಚ—ನೀಚ ಅಧಿಕಾರಿಗಳಲ್ಲಿರುವ ಭಯಂಕರವಾದ ಅಸಮಾನತೆಯ ಪ್ರಶ್ನೆ ಬೇರೆ ವಿಷಯುವಾಗಿದ್ದು ಪೂರ್ಣ ವಿಚಾರ ಮಾಡಿ ಅದನ್ನು ನಿಷ್ಕರ್ಷಿಸಬೇಕಾದಂತಹದಾಗಿದೆ. ಕೆಲ ಮಂತ್ರಿಗಳ ಮತ್ತು ಅವರ ಕಾರ್ಯದರ್ಶಿಗಳ ಸಂಬಳ ಕಡಮೆ ಮಾಡುವ ಮಟ್ಟಿಗೆ ಮಾತ್ರ ಅದು ಸಂಬಂಧಿಸಿದ್ದಿರಲಾರದು. ಎರಡೂ ವಿಷಯಗಳನ್ನು ಅವುಗಳ ಗುಣಾವಗುಣಗಳನ್ನನುಲಕ್ಷಿಸಿಯೆ ನಿರ್ಧರಿಸಬೇಕು. ಆಯಾ ಮಂತ್ರಿಗಳು ಸಂಬಳದ ಪ್ರಶ್ನೆಯನ್ನು ಸುಲಭವಾಗಿ ಬಗೆಹರಿಸಬಲ್ಲರು, ಬಗೆಹರಿಸಿಕೊಳ್ಳತಕ್ಕದ್ದು. ಎರಡನೆಯ ಪ್ರಶ್ನೆ ಬಹಳ ವ್ಯಾಪಕವಾದುದರಿಂದ ಸಂಪೂರ್ಣವಾಗಿ ವಿಮರ್ಶಿಸಬೇಕಾಗಿದೆ. ವಿಲಂಬ ಮಾಡದೆ ಮಂತ್ರಿಗಳು ತಮ್ಮ ಪ್ರಾಂತದಲ್ಲಿ ಈ ವಿಷಯವನ್ನು ನಿರ್ಣಯಿಸತಕ್ಕದ್ದು ಎಂಬುದನ್ನು ನಾನು ಒಪ್ಪುತ್ತೇನೆ. ಕೆಳವರ್ಗದ ನೌಕರರ ಸಂಬಳವನ್ನು ಪೂರ್ಣವಾಗಿ ಪುನರ್ವಿಚಾರಿಸಿ ಅವಶ್ಯವಿದ್ದಲ್ಲೆಲ್ಲ ಮಂತ್ರಿಗಳು ಅದನ್ನು ಹೆಚ್ಚಿಸಬೇಕೆಂಬುದಕ್ಕೂ ನಾನು ಒಪ್ಪುತ್ತೇನೆ.

ಮುಸೂರಿ ಮೋ. ಕ. ಗಾಂಧಿ.

೩೧—೫—೪೬

ರಾಜಕೀಯ ಕೈದಿಗಳ ಬಿಡುಗಡೆ

ರಾಜಕೀಯ ಕೈದಿಗಳೆಲ್ಲರ ಬಿಡುಗಡೆಯನ್ನು ಪ್ರಾಂತಿಕ ಹೊಣೆಗಾರ ಮಂತ್ರಿಗಳು ಮಾಡಬೇಕಾದುದು ಅವಶ್ಯವೆಂದು ಭಾವಿಸಲಾಗುತ್ತದೆ. ಕೊಲೆ ಕೊಳ್ಳಿ ಮತ್ತು ದರವಡೆ ಮೊದಲಾದ ಅಪರಾಧಗಳಿಗಾಗಿ ಶಿಕ್ಷಿಸಲ್ಪಟ್ಟವರೂ ಇವರಲ್ಲಿ ಅಡಕರಾಗುವರು. ಇದು ಶೂರರ ಮತ್ತು ಹುತಾತ್ಮರ ಬಿಡುಗಡೆಯೆಂದು ಸಾರ್ವಜನಿಕರು ಎಷ್ಟರ ಮಟ್ಟಿಗೆ ಪ್ರಶಂಸಿಸಬೇಕೆಂದು ಸುದ್ದಿಗಾರರು ಕೇಳುತ್ತಾರೆ.

ಇಂಥ ಅಪರಾಧಗಳಿಗಾಗಿ ಶಿಕ್ಷಿಸಲ್ಪಟ್ಟವರ ಬಿಡುಗಡೆ ವಿವಿಧ ಕಾರಣಗಳಿಗಾಗಿ ಮಾಡುವುದು ಒಂದು ವಿಧದ ಕರ್ತವ್ಯ, ಆದರೆ ಅಂಥವರ ಕೃತಿಗಳನ್ನು ಹುತಾತ್ಮರ ಕೃತಿಗಳೆಂದು ಮನ್ನಿಸುವುದು, ಇಲ್ಲವೆ ಅವರನ್ನು ಹೊಗಳುವುದು ಬೇರೆ ಮಾತು. ಅದು ವಿಚಾರಹೀನ ಮತ್ತು ತಪ್ಪು ಭಾವನೆಯಾಗಿದೆಂಬಲ್ಲಿ ಸಂದೇಹವಿಲ್ಲ. ಸಾರ್ವಜನಿಕ ಕಾರ್ಯಕ್ಕಾಗಿ ಹಣ ಬೇಕೆಂದು ನಾನು ದರವಡೆ ಹಾಕಿದರೆ ನಾನು ದರೋಡೆಗಾರನೆ ಆಗುವೆನು; ನಾನು ದರವಡೆ ಹಾಕಿದ ಹಣದ ಉಪಯೋಗ ಸಾರ್ವಜನಿಕ ಕಾರ್ಯಕ್ಕಾಗಿ ಇತ್ತೆಂಬ ಕಾರಣದಿಂದ ದರೋಡೆಯ ಪಾಪದಿಂದ ನಾನು ಮುಕ್ತನಾಗಲಾರೆನು. ದೇಶಾಭಿಮಾನದ ಹೆಸರಿನಲ್ಲಿ ಪ್ರತಿಯೊಂದು ಅಪರಾಧವನ್ನು ಹೀಗೆ ಮನಸ್ವೀ ಹೊಗಳಹತ್ತಿದರೆ ಆ ಬಾಣವು ಇಮ್ಮಡಿ ಜೋರಿನಿಂದ ತಿರುಗಿಬಂದು ರಾಷ್ಟ್ರದಲ್ಲಿ ನಡುವುದು. ಆದಕ್ಕಾಗಿ ರಾಷ್ಟ್ರವು ಬಹಳ ಹಾನಿಯನ್ನು ಸಹಿಸಬೇಕಾಗುವದು. ಸ್ವಾತಂತ್ರ್ಯದಲ್ಲಿ ಅಪರಾಧ ಮಾಡುವುದಕ್ಕೂ ಮುಕ್ತದ್ವಾರವಿದೆ ಆದರೆ ಅದರಲ್ಲಿ ಸ್ವಯಂನಿಯಂತ್ರಣವನ್ನು ಹಾಕಿಕೊಳ್ಳದಿದ್ದರೆ ಆ ಸ್ವಾತಂತ್ರ್ಯ ಶಾಪವಾಗಿಯೇ ಪರಿಣಮಿಸುವದು. ಮೇಲೆ ಉಲ್ಲೇಖಿಸಿದ ಸಾರ್ವಜನಿಕ ಮನ್ನಣೆ ಜನತೆಯ ಸದೋಷ ಶಿಕ್ಷಣದ ಪರಿಣಾಮ; ನಾವೆಣಿಸುವದಕ್ಕಿಂತ ಮೊದಲು ಬರಬಹುದಾದ ಸ್ವಾತಂತ್ರ್ಯದ ಅಪಾಯಕಾರಕವಾದ ಸಿದ್ಧತೆಯ ಫಲವದೆಂದು ಹೇಳಬೇಕಾಗುವದು.

ಮುಸೂರಿ ಮೋ. ಕ. ಗಾಂಧಿ

೩೧—೫—೪೬

ಇನ್ನಷ್ಟು ಸೂಚನೆಗಳು

ಆಹಾರ ಕೊರತೆ ಅನೇಕರ ತಲೆ ತಿನ್ನುತಿದ್ದುದು ಶುಭಲಕ್ಷಣ. ಆ ಆಹಾರ ಕೊರತೆಯನ್ನು ಹೋಗಲಾಡಿಸಲು ಎಲ್ಲ ಕಡೆಯಿಂದಲೂ ಸೂಚನೆಗಳು ಬರುತಿವೆ. ಗೆಳೆಯನೊಬ್ಬನು ತನಗೆ ಪರಿಚಿತ ವಿಷಯದ ಬಗ್ಗೆ ಇಂತು ಬರೆಯುತ್ತಾನೆ.

೧) ಆಹಾರಕೊರತೆ ಇಷ್ಟೊಂದು ತೀಕ್ಷ್ಣವಾಗಿರುವಾಗ ಮಾಂಸಾಹಾರಿಗಳಿಗೆ ಸಸ್ಯಾಹಾರಿಗಳಷ್ಟೇ ಧಾನ್ಯದ ಅವಶ್ಯಕತೆಯೇಕೆ? ಅವರಿಗೆ ಅಷ್ಟೇ ಧಾನ್ಯವನ್ನೇಕೆ ಕೊಡಬೇಕು? ಮಾಂಸಾಹಾರದಿಂದ ಸಿಕ್ಕುತಿರುವ ಪೌಷ್ಟಿಕತೆಯ ಪ್ರಮಾಣಕ್ಕನುಸಾರವಾಗಿ ಧಾನ್ಯಗಳ ಸೀದಾ ಕಡಮೆ ಮಾಡಿದ್ದಾದರೆ ಆಹಾರ ಪದಾರ್ಥಗಳಲ್ಲಿ ಬಹಳಷ್ಟು ಉಳಿತಾಯವಾದಂತಾಗುವದು.

೨) ಧಾನ್ಯಪದಾರ್ಥಗಳ ಸೀದಾ ಕಡಮೆ ಮಾಡಲಾಗಿದೆ. ಕಡಮೆ ಮಾಡಿದ ಈ ಸೀದಾ ಪದಾರ್ಥಗಳಿಂದ ಕಠಿನ ಕೆಲಸ ಮಾಡುತಿರುವ ಅನೇಕ ಜನರಿಗೆ ತಮ್ಮ ಹಸಿವೆಯನ್ನು ಹಿಂಗಿಸಿಕೊಳ್ಳುವುದು ಕಠಿನವಾಗಹತ್ತಿದೆ. ಗೋದಿಯಲ್ಲಿ ಹೆಸರು, ಕಡ್ಲಿ, ಜವೆಗೋದಿಯನ್ನು ಕೂಡಿಸಿ ಹಿಟ್ಟು ಮಾಡಿ ಕಡಮೆ ಮಾಡಿದ ಪ್ರಮಾಣವನ್ನು ಹೆಚ್ಚಿಸಿಕೊಳ್ಳುತಿರುವರು. ಆದರೆ ಈ ಮೂರೂ ಧಾನ್ಯಗಳ ಬೆಲೆ ಗೋದಿಗಿಂತ ಹೆಚ್ಚಿಗಿರುವುದು. ಅನೇಕರಿಗೆ ಇದು ಪೂರೈಸುವದಿಲ್ಲ. ಮಾಂಸಾಹಾರಿಗಳಿಗೆ ಯಾವ ಪ್ರಮಾಣದಲ್ಲಿ ಧಾನ್ಯಗಳ ಸೀದಾ ಕಡಮೆಮಾಡಿದೆಯೊ, ಅಷ್ಟೇ ಸಾರವುಳ್ಳ ಮಾಂಸವನ್ನು ಅದೇ ಬೆಲೆಗೆ ಕೊಡುವಂತೆ ಮಾಡಬೇಕಾದುದು ಅವಶ್ಯವೆನಿಸುತ್ತದೆ. ನಾನು ಈ ಲೆಕ್ಕದ ಅಂದಾಜು ಮಾಡಿದ್ದು ಬರುವ ಕೆಲವು ತಿಂಗಳುಗಳಿಗಾಗಿ ಅದು ೧೫ ಕೋಟಿ ರೂಪಾಯಿಗಿಂತ ಹೆಚ್ಚಿಗೆ ಹೋಗದು. ಮಾನವ ಜೀವನವನ್ನು ರಕ್ಷಿಸುವದಕ್ಕಾಗಿ ಇಷ್ಟು ಹಣ ವೆಚ್ಚಮಾಡುವುದೇನು ಹೆಚ್ಚಲ್ಲ. ಹಿಂದುಸ್ತಾನದಲ್ಲಿ ಆಹಾರಾಭಾವಕ್ಕಾಗಿ ೧–೧॥ ಕೋಟಿ ಜನ ಮರಣಹೊಂದುವದೆಂದು ಹೇಳಲಾಗುತ್ತದೆ.

೩) ಪ್ರಾಣವನ್ನು ತೆಗೆದುಕೊಳ್ಳುವುದು ನನಗೆ ಬಹಳ ಕಷ್ಟದ್ದು. ಆದರೆ ಮಾನವಜೀವನ ಮತ್ತು ಪಶುಜೀವನಗಳ ನಡುವೆ ಸೆಣಸಾಟ ನಡೆದಾಗ ಮಾನವ ಜೀವನಕ್ಕೆ ಹೆಚ್ಚು ಮಹತ್ವ ಕೊಡಬೇಕಾಗುವದೆಂದು ನನಗನಿಸುತ್ತದೆ. ಚಿಗರಿ, ಮೊಲ, ಹಂದಿ, ಕಾಡುಹಂದಿ ಮತ್ತು ಪಾರಿವಾಳಗಳಿಂದ ಬೆಳೆಗಳಿಗೆ ಬಹಳ ಹಾನಿಯಾಗುತ್ತದೆ. ನಾನು ಸಸ್ಯಾಹಾರಿಯು. ಈ ಪ್ರಾಣಿಗಳಿಗೆಲ್ಲ. ಆಹಾರ ಮೂಲ್ಯವಿದೆಂದು ಮಾಂಸಾಹಾರಿಗಳು ಹೇಳುವರಲ್ಲದೆ ಆಹಾರಕ್ಕಾಗಿ ಇವುಗಳನ್ನುಪಯೋಗಿಸಬಹುದೆಂದು ಹೇಳುತ್ತಾರೆ. ಯೋಗ್ಯ ಸಂಘಟನೆಯಿಂದ, ಅದು ಕಠಿನವಿದ್ದರೂ–ಅಶಕ್ಯವಿಲ್ಲ–ಈ ಪ್ರಾಣಿಗಳನ್ನು ಗುಂಡಿನಿಂದ ಕೊಂದು ಕೆಲವೊಂದು ಪ್ರದೇಶಕ್ಕೆ ವಿಶೇಷತಃ ದೊಡ್ಡ ನಗರಗಳಿಗೆ ಮಾಂಸವನ್ನು ಪೂರಯಿಸುವ ವ್ಯವಸ್ಥೆ ಮಾಡುವದು ಶಕ್ಯವಿದೆ. ಈ ರೀತಿ ಈ ಪ್ರಾಣಿಗಳನ್ನು ಕೊಲ್ಲುವುದರಿಂದ ಹೊಲಗಳಲ್ಲಿಯ ಬೆಳೆಗಳಿಗೆ ಆಗುತಿದ್ದ ನಾಶವೂ ತಾನಾಗಿಯೆ ಕಡಿಮೆಯಾಗುವುದು.

೪) ಬರಗಾಲ ಭಾಗಕ್ಕೆ ಆಹಾರದ ಪದಾರ್ಥಗಳನ್ನುಳಿಸುವುದಕ್ಕಾಗಿ ಸದ್ಯಕ್ಕೆ ಕೈಕೊಂಡ ಸೀದಾ ಪದ್ಧತಿ ಬಹಳ ಕಡಮೆ ಜನರ ಮನಹೊಗುತ್ತದೆ. ಕಳ್ಳಪೇಟೆ ಮತ್ತು ಲಂಚಗುಳಿತನ ಎಲ್ಲೆಲ್ಲಿಯೂ ನರ್ತನ ಮಾಡುತಿದೆ. ತಾನು ಉಳಿಸಿದ ಧಾನ್ಯವೆಲ್ಲ ಕಳ್ಳಪೇಟೆಗೆ ಹೋಗುತಿದೆಂದು ಪ್ರತಿಯೊಬ್ಬನಿಗೆ ಎನಿಸುತಿದೆ. ಉಳಿಸಿದ ಆಹಾರ ಪದಾರ್ಥಗಳನ್ನು ಕಳೆಹಾಕಿ ಬರಗಾಲ ಪ್ರದೇಶಕ್ಕೆ ಕಳಿಸುವ ವಚನವನ್ನು ಕೊಟ್ಟದ್ದಾದರೆ ಒಳ್ಳೆ ಪ್ರಭಾವಶಾಲಿಯಾದ ಪರಿಣಾಮವುಂಟಾಗುವದು. ಇದಕ್ಕಾಗಿ ಸಂಘಟನೆ ಅವಶ್ಯ. ಆದರೆ ಹೆಚ್ಚು ಪ್ರಮಾಣದಲ್ಲಿ ಆಹಾರ ಪದಾರ್ಥಗಳು ಬರಹತ್ತಿವೆಂದು ನನಗನಿಸುತ್ತದೆ.

ಅಧಿಕಾರಿಗಳು ಮೊದಲನೆಯದನ್ನು ಮಾಡುವರೋ ಇಲ್ಲವೊ; ಆದರೆ ಪೂರ್ಣ ಧಾನ್ಯ ಸೀದಾ ತೆಗೆದುಕೊಳ್ಳುತಿರುವ 'ಪ್ರಾಮಾಣಿಕ ಮಾಂಸಾಹಾರಿಗಳು ಅತ್ತ ಗಮನಿಸುವದು ಅವಶ್ಯವಾಗಿದೆ. ಅವರು ತಮ್ಮ ಧಾನ್ಯದಲ್ಲಿಯ ಕೆಲ ಅಂಶವನ್ನು ಅವಶ್ಯವಿದ್ದವರಿಗೆ ಸುಲಭವಾಗಿ ಕೊಡಬಲ್ಲರು. ಇಂಥ ಸಂದರ್ಭಗಳಲ್ಲಿ ಅವಶ್ಯವಿದ್ದವರಿಗೆ ಪರಿಹಾರ ಕೊಡಬೇಕಾದರೆ ಪರಸ್ಪರ ಸಹಾಯಮಾಡುವದು ತೀವ್ರವೇ ಪರಿಣಾಮಕಾರಿಯಾದ ಮಾರ್ಗ.

ಎರಡನೆಯ ಪ್ರಶ್ನೆಗೂ ಇದೇ ಉತ್ತರ. ಮೂರನೆಯದು ಮಾತ್ರ ವಿವಾದಾತ್ಮಕವಾಗಿದೆ. ಎಲ್ಲ ಜೀವನವೂ ಪವಿತ್ರವೆಂದು ಬಹುಮಟ್ಟಿಗೆ ಪರಿಗಣಿಸಲ್ಪಡುತಿರುವ ದೇಶದಲ್ಲಿ, ಹಾಗಿಲ್ಲದಿದ್ದರೂ ಪ್ರಾಣಿಜೀವವನ್ನು ತೆಗೆದುಕೊಳ್ಳಲು ಜನರು ಒಪ್ಪದಿರುವುದು ಒಂದು ಬಗೆಯ ರೂಢಿಯೆ ಯಾವದೊಂದರಲ್ಲಿ ಆಗಿರುವದೊ ಅಲ್ಲಿ ಮಾಂಸಾಹಾರಿಗಳು ಈ ಸೂಚನೆಯನ್ನು ಅನುಸರಿಸುವದು ಕಠಿನವಾಗಿದೆ. ಆದರೆ ಎಲ್ಲ ಜೀವಿಗಳನ್ನು ಸಮಭಾವನೆಯಿಂದ ಸನ್ಮಾನಿಸುತಿರುವ ನನಗೆ ಈ ಸುದ್ದಿಗಾರನ ಬುದ್ಧಿಗೆ ತೋಚಿದ ಸೂಚನೆಯನ್ನು ಮಾಂಸಾಹಾರಿಗಳು ಅನುಸರಿಸಬೇಕೆಂದು ಸಲಹೆ ಕೊಡಲು ಕಠಿನವೇನೂ ಎನಿಸದು. ಆಹಾರಕ್ಕೆ ಯಾವದೇ ಬಗೆಯ ಸಂಬಂಧವಿಲ್ಲದಂಥ ಜೀವಿಗಳ ಪ್ರಾಣವನ್ನು ತೆಗೆದುಕೊಳ್ಳುವುದರ ವಿರುದ್ಧ ಎತ್ತಿದ ಆಕ್ಷೇಪದ ಬಗ್ಗೆ ಹರಿಜನ ಬಂಧುವಿನಲ್ಲಿ ವಿವೇಚಿಸಬೇಕೆಂದು ಮಾಡಿರುವೆ.

ನಾಲ್ಕನೆಯ ಸೂಚನೆ ಚೆನ್ನಾಗಿದ್ದರೂ ಸರಕಾರದಲ್ಲಿ ಲಂಚಗುಳಿತನ, ಅಯೋಗ್ಯ ಬೇಜವಾಬದಾರಿತನ ಮೊದಲಾದವುಗಳು ಮನೆಮಾಡಿಕೊಂಡಿದ್ದರಿಂದ ಇದರಿಂದಲೂ ಉಪಯುಕ್ತ ಪರಿಣಾಮವೇನೂ ಆಗದು. ಜನತೆಗೆ ಹೊಣೆಗಾರವಾದ ಮತ್ತು ಜನತೆಯ ವಿಶ್ವಾಸಕ್ಕೆ ಪಾತ್ರವಾದ ರಾಷ್ಟ್ರೀಯ ಸರಕಾರ ಸ್ಥಾಪನೆಯಾದ ಬಳಿಕ ಈ ತೊಂದರೆಯನ್ನು ಹೋಗಲಾಡಿಸಬಹುದಾಗಿದೆ.

ಮುಸೂರಿ ಮೋ. ಕ. ಗಾಂಧಿ

೨೯—೫—೪೬

ಶ್ರದ್ಧಾ ಚಿಕಿತ್ಸೆ--ರಾಮನಾಮ

ಗೆಳೆಯನೊಬ್ಬನಿಂದ ಈ ಅಪಹಾಸದ ನುಡಿ-

೧೭–೩–೪೬ನೇ ದಿನದ ಹರಿಜನ ಸಂಚಿಕೆಯಲ್ಲಿ ನೀವು ಬರೆದ 'ತಪ್ಪು ಒಪ್ಪಿಗೆ ಮತ್ತು ಚಿಕಿತ್ಸೆ' ಎಂಬ ಲೇಖವನ್ನು ಓದಿರುವೆನು. ಈ ನೈಸರ್ಗಿಕ ಚಿಕಿತ್ಸೆಗೂ ಏನಾದರೂ ನಿಕಟಸಂಬಂಧವಿದೆಯೊ ಹೇಗೆಂಬ ಬಗ್ಗೆ ನನಗೆ ಆಶ್ಚರ್ಯ. ಚಿಕಿತ್ಸೆಯಲ್ಲಿ ವಿಶ್ವಾಸವಿರಬೇಕಾದುದು ಅವಶ್ಯ ಆದರೆ ಕೆಲ ವಿಶಿಷ್ಟ ಶ್ರದ್ಧಾ ಚಿಕಿತ್ಸೆಗಳಿರುವುವು. ಉದಾಹರಣಾರ್ಥವಾಗಿ ಮೈಲೀಬೇನೆ, ಹೊಟ್ಟೆಕಡತ ಮೊದಲಾದವುಗಳು. ನಿಮಗೆ ಗೊತ್ತಿದ್ದಂತೆ ಮೈಲೀಬೇನೆಗೆ ವಿಶೇಷತಃ ದಕ್ಷಿಣದಲ್ಲಿ ಯಾವದೇ ಬಗೆಯ ಚಿಕಿತ್ರೆ ಮಾಡುವುದಿಲ್ಲ. ಅದು ದೈವೀವಿಪತ್ತೆಂದು ಭಾವಿಸಲಾಗುತ್ತದೆ. ಮಾರೆಮ್ಮನ ಪೂಜೆ ನಾವು ಮಾಡುತ್ತೇವೆ ಬಹುತರ ಎಲ್ಲ ಸಂದರ್ಭಗಳಲ್ಲಿಯೂ ಯಶಸ್ಸು ಸಿಕ್ಕುತಿದ್ದುದು ಆಶ್ಚರ್ಯಕರವಾಗಿದೆ. ಹೊಟ್ಟೆಕಡಿತಕ್ಕಾಗಿ ಬಹಳ ದಿನಗಳಿಂದ ಇದ್ದ ಹೊಟ್ಟೆ ಕಡಿತಕ್ಕಾಗಿಯೂ ತಿರುಪತಿ ತಿಮ್ಮಪ್ಪನಿಗೆ ಮುಡುಪು ತೆಗೆದಿಟ್ಟು ವಾಸಿಯಾಗಿ ನಂತರ ತಾವು ಬೇಡಿಕೊಂಡಂತೆ ಮಾಡುತ್ತಾರೆ. ಒಂದು ಯೋಗ್ಯ ಉದಾಹರಣೆ ಕೊಡಬಹುದಾದರೆ, ನಮ್ಮ ತಾಯಿಗೆ ಅದೇ ನೋವು ಇದ್ದಿತು, ಅವಳು ತಿರುಪತಿಗೆ ಹೋಗಿ ಬಂದ ಬಳಿಕ ಆ ಬೇನೆಯಿಂದ ಈಗ ಅವಳು ಮುಕ್ತಳಾಗಿರುವಳು.

ಈ ಸಂದರ್ಭದಲ್ಲಿ ನನಗೆ ಸ್ಪಷ್ಟೀಕರಿಸಿ ಹೇಳುವಿರಾ? ಇಂಥ ನೈಸರ್ಗಿಕ ಚಿಕಿತ್ಸೆಯಲ್ಲಿಯೂ ಜನರು ವಿಶ್ವಾಸವನ್ನಿಟ್ಟು 'ಡಾಕ್ಟರರತ್ತ ಹೋಗಿ ಹಣವನ್ನೇಕೆ ಕಳೆದುಕೊಳ್ಳಬೇಕು ಪಾಸರರು ಹೇಳಿದಂತೆ ಡಾಕ್ಟರರು ರೋಗಿಗಳನ್ನು ಯಾವಾಗಲೂ ರೋಗಿಗಳನ್ನಾಗಿಯೆ ಇಡಲು ಒಳ್ಳೆ ಮೋಸಗಾರಿಕೆಯನ್ನೆ ಆಚರಿಸುತ್ತಿರುವರು."

ಮೇಲೆ ಉಲ್ಲೇಖಿಸಿದ ಉದಾಹರಣೆಗಳು ನೈಸರ್ಗಿಕ ಚಿಕಿತ್ಸೆಯೂ ಅಲ್ಲ, ನಾನು ಅದರಲ್ಲಿ ಸೇರಿಸಿದ ರಾಮನಾಮವೂ ಅಲ್ಲ. ಆದರೆ ಅನೇಕ ಸಂದರ್ಭಗಳಲ್ಲಿ ನಿಸರ್ಗವೆ ಹೇಗೆ ಬೇರೆ ಚಿಕಿತ್ಸೆಯಿಲ್ಲದೆ ರೋಗಗಳನ್ನು ವಾಸಿಮಾಡುತಿದೆಂಬುದರ ಉದಾಹರಣೆಗಳಿವು. ಹಿಂದೀಯರ ಜೀವನದಲ್ಲಿ ಮೂಢಭಾವನೆ ಎಂತು ಸುಳಿದಾಡುತಿದೆಂಬುದರ ಸ್ಪಷ್ಟ ಉದಾಹರಣೆಗಳಿವು. ನೈಸರ್ಗಿಕ ಚಿಕಿತ್ಸೆಯ ಕೇಂದ್ರ ಬಿಂದುವಿನಂತಿರುವ ರಾಮನಾಮವು ಮೂಢಭಾವನೆಯ ಶತ್ರುವು. ಯಾವುದಕ್ಕು ಹೇಸದ ಜನರು ಬೇರೆ ಎಲ್ಲವನ್ನು ತೆಗಳುತಿರುವಂತೆ ರಾಮನಾಮವನ್ನೂ ತೆಗಳುತಿರುವರು. ಕೇವಲ ತುಟಿಯಲ್ಲಿ ರಾಮನಾಮವನ್ನು ಜಪಿಸುವುದು ಚಿಕಿತ್ಸೆಗೆ ಸಂಬಂಧಿಸಲರಿಯದು. ಶ್ರದ್ಧಾ ಚಿಕಿತ್ಸೆ ಇದರ ಅರ್ಥ ನಿಜವಾಗಿ ನನಗೆ ತಿಳಿದಿದ್ದರೆ ಅದು ಕೇವಲ ಅಂಧ ಚಿಕಿತ್ಸೆ. ಈ ಗೆಳೆಯ ಹೇಳುತಿರುವಂಥ ಅಂಥ ಚಿಕಿತ್ಸೆ. ಅದರಿಂದ ಪರಮಾತ್ಮನ ಹೆಸರನ್ನು ಅಪಹಾಸಗೊಳಿಸಿದಂತಾಗುತ್ತದೆ. ಪರಮಾತ್ಮ ಯಾವನೊಬ್ಬನ ಕಲ್ಪನೆಯನಾದನಲ್ಲ. ಹೃದಯದಿಂದ ಅದು ಹೊರಹೊಮ್ಮಬೇಕು. ಪರಮಾತ್ಮನಲ್ಲಿ ಆತ್ಯಂತಿಕ ಶ್ರದ್ಧೆ ಮತ್ತು ಅವನ ಸಂಕಲ್ಪದ ಪರಿಜ್ಞಾನವಿರಬೇಕು, ಬಾಹ್ಯಸಹಾಯವಿಲ್ಲದೆ ರೋಗವನ್ನು ಸಂಪೂರ್ಣ ವಾಸಿ ಮಾಡಲು ಇದು ಸಹಾಯಕವಾಗುವದು. ಶರೀರದ ಆರೋಗ್ಯ ರಕ್ಷಣೆಗೆ ವಿಶುದ್ಧ, ಗಟ್ಟಿ ಮನಸ್ಸು ಅತ್ಯವಶ್ಯವೆಂಬುದೆ ಆ ಸಂಕಲ್ಪ. ವಿಶುದ್ಧ ಹೃದಯದಿಂದಲೆ ವಿಶುದ್ಧ ಮನಸ್ಸು ಶಕ್ಯವಾಗುವುದು ಅದು ಡಾಕ್ಟರರ ಯಂತ್ರಕ್ಕೆ ಹತ್ತುವ ಹೃದಯವಲ್ಲ. ಆದರೆ ಪರಮಾತ್ಮನ ನಿವಾಸಸ್ಥಾನವಾದ ಹೃದಯವು. ಹೃದಯದಲ್ಲಿ ಪರಮಾತ್ಮನ ಸಾಕ್ಷಾತ್ಕಾರವಾದರೆ ಮನಸ್ಸಿನಲ್ಲಿ ದುಷ್ಟ ಹಾಗು ಅಲಸ್ಯದ ವಿಚಾರಗಳು ಬರುವುದು ಅಶಕ್ಯವಾಗಿದೆ. ವಿಚಾರವಿಶುದ್ಧತೆಯಿದ್ದರೆ ಬೇನೆ ಬರುವದೇ ಶಕ್ಯವಿಲ್ಲ. ಇಂಥ ಪರಿಸ್ಥಿತಿಯನ್ನು ಮುಟ್ಟುವುದು ಕಠಿನ. ಆದರೆ ಈ ಮಾತನ್ನು ತಿಳಿದುಕೊಳ್ಳುವದೆ ಆರೋಗ್ಯದ ಮೊದಲನೆ ಮೆಟ್ಟಲು. ಇದನ್ನು ಹತ್ತುವದು ಕಠಿನ. ಅವಶ್ಯಕ ಪ್ರಯತ್ನ ಮಾಡುವದು ಮುಂದಿನ ಮೆಟ್ಟಲು. ಜೀವನದಲ್ಲಿ ಈ ರೀತಿ ಆತ್ಯಂತಿಕ ಬದಲಾವಣೆಯಾಗಬೇಕಾದರೆ ಮೇಲೆ ವಿವರಿಸಿದ ಎಲ್ಲ ನಿಸರ್ಗ ನಿಯಮಗಳನ್ನು ಪಾಲಿಸುವದು ಅವಶ್ಯವಾಗಿದೆ. ಈ ನಿಸರ್ಗ ನಿಯಮಗಳನ್ನು ಮುರಿದು ವಿಶುದ್ಧ ಹೃದಯವಿದೆಂದು ಹೇಳಿಕೊಳ್ಳಲಾಗದು. ವಿಶುದ್ಧ ಹೃದಯಿಗಳು ರಾಮನಾಮ ಜಪಿಸದೆ ಸಿದ್ಧಿಯನ್ನು ಪಡೆಯಬಲ್ಲರೆಂದೂ ಅಷ್ಟೇ ನ್ಯಾಯ್ಯವಾಗಿ ಹೇಳಬಹುದು.

ವಿಶುದ್ಧಿಯನ್ನುಪಡೆಯುವ ಎರಡನೆಯ ಮಾರ್ಗವನ್ನು ನಾವು ತಿಳಿದುಕೊಂಡಿರುವೆನಷ್ಟೆ. ಜಗತ್ತಿನಲ್ಲೆಲ್ಲ ಪ್ರಾಚೀನ ಋಷಿಗಳು ಅನುಸರಿಸಿದ ಮಾರ್ಗವಿದು. ಅವರು ಪರಮಾತ್ಮನ ಕೃಪಾಪಾತ್ರರು, ಮೂಢಭಾವನೆಯ ಜನರಲ್ಲ.

ಇದು ಕ್ರಿಶ್ಚನ್ ಶಾಸ್ತ್ರವಾಗಿದ್ದರೆ ಅದರೊಡನೆ ನನ್ನದೇನು ಜಗಳವಿಲ್ಲ. ರಾಮನಾಮ ಮಾರ್ಗವು ನನ್ನ ಸಂಶೋಧನೆಯೇನಲ್ಲ. ಕ್ರಿಶ್ಚನ್ ಶತಮಾನಕ್ಕಿಂತ ಬಹಳ ಹಳೆಯದದು.

ರಾಮನಾಮವು ಶಸ್ತ್ರ ಚಿಕಿತ್ಸೆಯನ್ನೂ ತಪ್ಪಿಸುತಿದೆಯೆ ಎಂದು ಸುದ್ದಿಗಾರನೊಬ್ಬನ ಪ್ರಶ್ನೆ. ನಿಜವಾಗಿಯೂ ಇಲ್ಲ. ಅಪಘಾತದಲ್ಲಿ ಮುರಿದುಹೋದ ಕಾಲು ಅದರಿಂದ ತಿರುಗಿ ಬರುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಶಸ್ತ್ರಚಿಕಿತ್ಸೆ ಅನವಶ್ಯ. ಅವಶ್ಯವಿದ್ದಲ್ಲಿ ಅದನ್ನು ಮಾಡಲಿಕ್ಕೆ ಬೇಕು. ಆದರೆ ಪರಮಾತ್ಮನ ಅನುಯಾಯಿ ಒಂದು ಅವಯವ ಕಳೆದುಕೊಂಡರೂ ವಿಷಾದಿಸಲಾರನು. ರಾಮನಾಮ ಪಠನವು ಪ್ರಯೋಗಸಿದ್ಧ ಪದ್ಧತಿಯಲ್ಲ, ಇಲ್ಲವೆ ತಾತ್ಕಾಲಿಕ ಉಪಾಯವಲ್ಲ.

ಮುಸೂರಿ ಮೋ. ಕ. ಗಾಂಧಿ

೩೦—೫—೪೬

ಪ್ರಶ್ನ—ಪೆಟ್ಟಿಗೆ

ಯಾವದೆ ಪ್ರಸಂಗದಲ್ಲಿ ಸುಳ್ಳಾಡುವದು ನ್ಯಾಯ್ಯವೆ ?

ಪ್ರಶ್ನೆ— ಬರ್ಟ್ರಾಂಡ ರಸ್ಸೆಲ್ಲರ ಈ ಅಭಿಪ್ರಾಯಕ್ಕೆ ನೀವೇನು ಹೇಳುವಿರಿ ? "ಹಳ್ಳಿಯಲ್ಲಿ ನಾನೊಂದು ದಿನ ತಿರುಗಾಡಲು ಹೋದಾಗ ಅತ್ಯಂತ ದಣಿದ ನರಿಯೊಂದು ಇನ್ನೂ ಓಡಲು ಪ್ರಯತ್ನಿಸುತಿದ್ದುದನ್ನು ಕಂಡೆ. ಕೆಲ ನಿಮಿಷಗಳ ನಂತರವೆ ನಾನು ಬೇಟೆಗಾರನನ್ನು ನೋಡಿದೆ. ನರಿಯನ್ನು ನೋಡಿದಿರಾ ಎಂದು ಅವರು ನನ್ನನ್ನು ಕೇಳಿದರು ಅಹುದೆಂದು ನಾನು ಉತ್ತರಿಸಿದೆನು. ಯಾವ ದಾರಿಯಿಂದ ಅದು ಹೋಯಿತೆಂದು ಅವರು ಮತ್ತೆ ಕೇಳಿದರು ಅಗ ನಾನು ಸುಳ್ಳು ಹೇಳಿದೆ. ನಾನು ಸತ್ಯವನ್ನು ಹೇಳಿದ್ದರೆ ಹೆಚ್ಚು ಜಾಣ ಮನುಷ್ಯನಾಗುತಿದ್ದೆನೆಂದು ನನಗೇನು ಎನಿಸುವುದಿಲ್ಲ.

ಉತ್ತರ— ಬರ್ಟ್ರಾಂಡ ರಸ್ಸೆಲ ದೊಡ್ಡ ಲೇಖಕ ಮತ್ತು ತತ್ವಜ್ಞಾನಿಗಳು. ಹೀಗಿದ್ದರೂ ಅವರ ಅಭಿಪ್ರಾಯವನ್ನು ನಾನು ಎತ್ತಿ ಹಿಡಿಯಲಾರೆನೆಂದು ವಿನಯಪೂರ್ವಕ ಭಿನ್ನಾಭಿಪ್ರಾಯ ವ್ಯಕ್ತಪಡಿಸುತ್ತೇನೆ. ನರಿಯನ್ನು ನೋಡಿದೆನೆಂದು ಒಪ್ಪಿ ಅವರು ಪ್ರಾರಂಭದಲ್ಲಿಯೇ ತಪ್ಪು ಮಾಡಿದರು. ಮೊದಲನೆ ಪ್ರಶ್ನೆಗೆ ಉತ್ತರಕೊಡಲು ಅವರೇನು ಬದ್ಧರಾಗಿರಲಿಲ್ಲ. ಬೇಟೆಗಾರನನ್ನು ಅಡ್ಡದಾರಿ ಹಿಡಿಸುವ ಇಚ್ಛೆ ಅವರದಿರದಿದ್ದರೆ ಎರಡನೇ ಪ್ರಶ್ನೆಗೂ ಉತ್ತರ ಕೊಡಲು ಅವರು ನಿರಾಕರಿಸಬಹುದಾಗಿತ್ತು. ಕೇಳಿದ ಪ್ರಶ್ನೆಗೆಲ್ಲ ಉತ್ತರ ಕೊಡಲೇಬೇಕೆಂಬ ನಿರ್ಬಂಧವಿಲ್ಲೆಂದು ನಾನು ಯಾವಾಗಲೂ ಪ್ರದಿಪಾದಿಸುತ್ತ ಬಂದಿದ್ದೇನೆ. ಸತ್ಯ ಮಾತಾಡುವುದಕ್ಕೆ ಯಾವ ಸಂದರ್ಭದಲ್ಲಿಯೂ ಅಪವಾದವಿರತಕ್ಕದ್ದಲ್ಲ.

ಮಾನಪತ್ರ ಮತ್ತು ಪುಷ್ಪಹಾರಗಳು

ಪ್ರಶ್ನೆ— ಸುದ್ದಿಗಾರನೊಬ್ಬ ಬರೆಯುತ್ತಾನೆ. "ಅನೇಕ ಪ್ರಾಂತಗಳಲ್ಲಿ ಕಾಂಗ್ರೆಸ್‌ಮಂತ್ರಿಮಂಡಳಗಳು ಅಸ್ತಿತ್ವದಲ್ಲಿವೆ. ಅದಕ್ಕಾಗಿ ಸಾರ್ವಜನಿಕರು ಅಭಿಮಾನ ತಾಳುತ್ತಾರೆ. ಆದುದರಿಂದ ಯಾವನೊಬ್ಬ ಮಂತ್ರಿಯು ಯಾವದೊಂದು ಸ್ಥಳಕ್ಕೆ ಹೋದ ಕೊಡಲೆ ಸ್ಥಳಿಕ ಸಂಘಸಂಸ್ಥೆಗಳು ಸ್ಥಾನಿಕ ಸಂಸ್ಥೆಗಳು ಅವರಿಗೆ ಮೂಲ್ಯ ಮಾನಪತ್ರಗಳನ್ನು ಸಮರ್ಪಿಸಿ ಗೌರವಿಸುವುದುಂಟು. ಬಹುತರ ಎಲ್ಲ ಸಂದರ್ಭಗಳಲ್ಲಿ ಇವೆಲ್ಲ ವಸ್ತುಗಳು ಮಂತ್ರಿಗಳ ಸೊತ್ತಾಗಿಯೆ ಪರಿಣಮಿಸುವುವು. ಈ ರೂಢಿಯು ಸರಿಯಾದುದಲ್ಲೆಂದು ನನ್ನ ಅಭಿಪ್ರಾಯ. ಈ ರೀತಿಯ ಮಾನಪತ್ರಗಳನ್ನು ಸ್ವೀಕರಿಸುವುದನ್ನೇ ನಿಲ್ಲಿಸಬೇಕು ಇಲ್ಲವಾದರೆ ಆ ಸಮಯದಲ್ಲಿ ಸಮರ್ಪಿಸಿದ ವಸ್ತುಗಳು ಸ್ಥಳಿಕ ಕಾಂಗ್ರೆಸ ಕಮಿಟಿಗಳಿಗಾದರೂ ದೊರೆಯಬೇಕು. ಮಂತ್ರಿಗಳಿಗೆ ಇಲ್ಲವೆ ಕಾಂಗ್ರೆಸ ಧುರೀಣರಿಗೆ ಪುಷ್ಪಹಾರಗಳನ್ನು ಸಮರ್ಪಿಸುವಲ್ಲಿ ಒಂದು ಬಗೆಯ ನಿಶ್ಚಿತ ಧೋರಣೆ ಇರತಕ್ಕದ್ದು. ೩೦೦-೪೦೦ ರೂಪಾಯಿಗಳನ್ನು ವೆಚ್ಚಮಾಡಿ ಮಂತ್ರಿಗಳಿಗೆ ಹೂಮಾಲೆಗಳನ್ನು ಹಾಕಿದ ಅನೇಕ ಉದಾಹರಣೆಗಳು ನನಗೆ ಗೊತ್ತುಂಟು. ಇದು ಹಣದ ಕೇವಲ ಅಪವ್ಯಯ.

ಉತ್ತರ— ಈ ತಕರಾರು ಸಾಧಾರವಾಗಿದೆ. ಮೂಲ್ಯ ಮಾನಪತ್ರಗಳನ್ನು ಇಲ್ಲವೆ ಬೆಲೆಬಾಳುವ ಹೂಮಾಲೆಗಳನ್ನು ಯಾವ ಸಾರ್ವಜನಿಕ ಸೇವಕನೂ ಸ್ವೀಕರಿಸತಕ್ಕದ್ದಲ್ಲ. ಈ ಸಂಗತಿಗಳು ಒಂದು ಬಗೆಯ ಪಿಡುಗಾಗಿ ಪರಿಣಮಿಸಿವೆ. ಹೆಚ್ಚಿಗೆ ಹಾನಿಕಾರಕವಲ್ಲದಿದ್ದರೂ—ಬಹುಮೂಲ್ಯ ಕರಂಡಕ ಕಟ್ಟಿಗಳು ಮೊದಲಾದವುಗಳಿಗಾಗಿ ವ್ಯಯಮಾಡುವ ಹಣ ಕಲಾಕೋವಿದರಿಗೆ ಹೋಗುವುದೆಂದು ಅನೇಕ ಸಲ ಪ್ರತಿಪಾದಿಸಲಾಗುತ್ತದೆ. ಮಂತ್ರಿಗಳ ಮೊದಲಾದವರ ಸಹಾಯವಿಲ್ಲದೆ ಈ ಕಲಾಕೋವಿದರು ತಮ್ಮ ನಿರ್ವಾಹವನ್ನು ಬೇಕಾದ ಹಾಗೆ ಸಾಗಿಸಿಕೊಳ್ಳಬಹುದು. ಈ ಸಭ್ಯ ಗೃಹಸ್ಥರು ಕೇವಲ ವಿಹಾರಕ್ಕಾಗಿ ಸಂಚರಿಸುವುದಿಲ್ಲ.

ಮುಖ್ಯ ದೋಷಗಳು

ನ್ಯಾಯವಾದ ದೃಷ್ಟಿಯಿಂದ ಸ್ವಾಭಾವಿಕವಾಗಿ ನೋಡಿದರೆ ಈ (ಬ್ರಿಟಿಶ ಮಂತ್ರಿಗಳು)ಘೋಷಣೆಯು ಸ್ವಷ್ಟಾಭಿಪ್ರಾಯದ ಎದೆಗಾರಿಕೆಯ ಘೋಷಣೆಯಂತೆ ಕಾಣುತ್ತದೆ. ಆದರೆ ಸರಕಾರಿ ಅಭಿಪ್ರಾಯವು ಜನಸಾಮಾನ್ಯರ ಅಭಿಪ್ರಾಯಕ್ಕಿಂತ ಭಿನ್ನವಾಗಿರುವದುಂಟು. ಹಾಗಿದ್ದು ಅದರದೇ ಮೇಲುಗೈಯಾದರೆ ಅದೊಂದು ದುಶ್ಚಿಹ್ನವೆ. ಬ್ರಿಟಿಶರ ದೀರ್ಘಕಾಲೀನ ಆಳಿಕೆಯಲ್ಲಿ ಸರಕಾರೀ ಅಭಿಪ್ರಾಯವೇ ಮೆರೆದು ಒತ್ತಾಯದಿಂದ ಜನರ ಮೇಲೆ ಹೇರಲ್ಪಟ್ಟಿದೆ ಭಾರತದಲ್ಲಿ ನ್ಯಾಯಾಧೀಶನ ಮತ್ತು ಕಾರ್ಯಕಾರೀ ಅಧಿಕಾರಿಯ ಹುದ್ದೆಗಳೆರಡೂ ಒಬ್ಬನಲ್ಲಿಯೆ ಇವೆಂದು ಈ ಮೊದಲೇ ಎಷ್ಟೋ ಸಲ ಹೇಳಿದ್ದೇನೆ. ಈಗಿನ ಘೋಷಣೆಯು ಸಾಮ್ರಾಜ್ಯವಾದೀ ಧೋರಣೆಗಿಂತ ಬೇರೆಯಾಗಿಲ್ಲವೆ? ಹೌದೆಂದು ನಾನು ಉತ್ತರಿಸಿದ್ದೇನೆ. ಅದೆಂತೇ ಇರಲಿ, ಅದರ ಕೊರತೆಗಳನ್ನು ಅರಿತುಕೊಳ್ಳೋಣ.

ಬ್ರಿಟಿಶ ರಾಯಭಾರವು ಕೆಲದಿನಗಳನ್ನು ಸಿಮ್ಲಾದಲ್ಲಿ ಕಳೆದು ೧೪ ನೇ ತಾ॥ ಗೆ ನಿಲ್ಲಿಗೆ ಹಿಂತಿರುಗಿ ೧೬ ನೇ ತಾ॥ ಗೆ ತನ್ನ ಘೋಷಣೆ ಹೊರಡಿಸಿತು. ಆದರೆ ಇನ್ನೂ ಕೇಂದ್ರದಲ್ಲಿ ನಡುಗಾಲ ಸರಕಾರವಿಲ್ಲ. ನಡುಗಾಲ ಸರಕಾರ ಸ್ಥಾಪಿಸಿ ನಂತರ ಅವರು ಘೋಷಣೆ ಹೊರಡಿಸಬಹುದೆಂದು ತಿಳಿಯಲಾಗಿತ್ತು. ಆದರೆ ಅವರು ಮೊದಲು ಘೋಷಣೆ ಹೊರಡಿಸಿ ನಂತರ ನಡುಗಾಲ ಸರಕಾರದ ಸ್ಥಾಪನೆಯ ಬಗ್ಗೆ ಮಾಹಿತಿಯನ್ನು ಕೂಡಿಸಹತ್ತಿದರು. ಇತ್ತ ಲಕ್ಷಾವಧಿ ಭಾರತೀಯರು ಅನ್ನಬಟ್ಟೆಯಿಲ್ಲದೆ ಗೋಳಿಡುತ್ತಿರುವಾಗ ಈ ಕಾರ್ಯವು ಬಹುಕಾಲ ನಡೆಯುವದು. ಇದು ಮೊದಲನೆಯ ದೋಷ.

ಸಂಸ್ಥಾನಗಳ ಮೇಲಿನ ವರಿಷ್ಠಾಧಿಕಾರದ ಪ್ರಶ್ನೆ ಅನಿರ್ಣೀತವಾಗಿದೆ. ಇಲ್ಲಿಯ ಬ್ರಿಟಿಶ ಆಳಿಕೆಯ ಮುಕ್ತಾಯದೊಡನೆ ಈ ವರಿಷ್ಠಾಧಿಕಾರವೂ ಕೊನೆಗೊಳ್ಳುವದು ಎಂದಿಷ್ಟೇ ಹೇಳಿದರೆ ಸಾಲದು. ನಡುಗಾಲ ಸರಕಾರದಲ್ಲಿ ಇದರ ಮೇಲೆ ನಿಯಂತ್ರಣವಿಲ್ಲದೆ ಹೋದರೆ ಸ್ವತಂತ್ರ ಭಾರತದ ಸರಕಾರಕ್ಕೆ ಕಠಿಣ ಸಮಸ್ಯೆಯನ್ನು ಎದುರಿಸಬೇಕಾಗುವದು. ನಡುಗಾಲ ಸರಕಾರ ಸ್ಥಾಪಿತವಾದೊಡನೆ ವರಿಷ್ಠಾಧಿಕಾರವನ್ನು ನಷ್ಟಗೊಳಿಸುವದು ಸಾಧ್ಯವಿಲ್ಲದಿದ್ದರೆ ಅದನ್ನು ನಡುಗಾಲ ಸರಕಾರದ ಸಹಕಾರದಿಂದ ಸಂಸ್ಥಾನೀ ಪ್ರಜರ ಹಿತಕ್ಕಾಗಿ ಉಪಯೋಗಿಸಬೇಕು. ಜನರಿಗೆ ಸ್ವಾತಂತ್ರ್ಯ ಬೇಕಾಗಿದೆ. ಅವರು ಅದಕ್ಕಾಗಿ ಹೋರಾಡುತ್ತಿದ್ದಾರೆ. ಜನರ ಹಕ್ಕುಗಳನ್ನು ಹತ್ತಿಕ್ಕುವದಕ್ಕಾಗಿ ಬ್ರಿಟಿಶ ಸರಕಾರವು ತಮ್ಮನ್ನು ನಿರ್ಮಿಸಿಲ್ಲವೆಂದು ನರೇಂದ್ರರು ಒಪ್ಪಿಕೊಳ್ಳುತ್ತಿದ್ದರೂ ಪರಕೀಯ ಶಕ್ತಿಯ ಆಧಾರದಿಂದ ನಿಂತಿರುವ ಈ ನರೇಂದ್ರರಿಗೆ ಸ್ವಾತಂತ್ರ್ಯ ಬೇಕಾಗಿಲ್ಲ. ನರೇಂದ್ರರು ಹೇಳಿಕೊಳ್ಳುವದೆಲ್ಲ ನಿಜವಿದ್ದರೆ ಅವರು ಈ ಹೊಸ ಯೋಜನೆಯಂತೆ ಸಿದ್ಧಿಸುವ ಜನರ ವರಿಷ್ಠಾಧಿಕಾರಕ್ಕೆ ಹೆದರಬಾರದು. ಇದು ಎರಡನೆ ದೋಷ.

ನಡುಗಾಲ ಸರಕಾರವಿರುವ ವರೆಗೆ ಭಾರತವನ್ನು ಪರಕೀಯರ ದಾಳಿಗಳಿಂದ ರಕ್ಷಿಸಿ ಇಲ್ಲಿ ಶಾಂತಿಯನ್ನು ಕಾಪಾಡಿಕೊಳ್ಳುವದಕ್ಕಾಗಿ ಬ್ರಿಟಿಶ ಸೈನ್ಯವು ಉಳಿಯುವದು ಎಂದು ಹೇಳಲಾಗಿದೆ. ಈ ಮೇಲಿನ ಕಾರ್ಯಕ್ಕಾಗಿ ಸಮಕಾಲದಲ್ಲಿ ಬ್ರಿಟಿಶ ಸೇನೆಯು ಇಲ್ಲಿ ಉಳಿದರೆ ಘಟನಾ ಸಮಿತಿಯ ಕಾರ್ಯಕ್ಕೆ ಆತಂಕ ಉಂಟಾಗುವದು. ಭಾರತವು ಸ್ವತಂತ್ರವಾದ ನಂತರ ಕೂಡ ಈ ಸೇನೆಯು ಬೇಕೆಂದೆನಿಸಬಹುದು. ತನ್ನ ಅಂತರಿಕ ಅಥವಾ ಬಾಹ್ಯ ಸಂರಕ್ಷಣೆಗಾಗಿ ಪರಕೀಯ ಸೈನ್ಯವನ್ನಿಟ್ಟುಕೊಳ್ಳುವ ಅಥವಾ ಒತ್ತಾಯದಿಂದ ಇಡಲ್ಪಟ್ಟಂಥ ದೇಶವು ಸ್ವತಂತ್ರವೆಂದು ಹೇಳಲಿಕ್ಕೆ ಬರುವದಿಲ್ಲ, ಇಂಥ ರಾಷ್ಟವು ಸ್ವರಾಜ್ಯಕ್ಕೆ ಅಸಮರ್ಥವೆಂದೇ ಹೇಳಬೇಗಾಗುವದು. ಹೆರವರ ನೆರವಿಲ್ಲದೆ ಯಾರಿಗೂ ತಲೆಬಾಗದೆ ನಿಲ್ಲಬಲ್ಲ ನಾಡೇ ಸ್ವಾತಂತ್ರ್ಯಕ್ಕೆ ಯೋಗ್ಯ. ಸ್ವತಂತ್ರರಾದ ಮೇಲೆ ನಾವು ನಮ್ಮ ಕಾಲಮೇಲೆ ನಿಲ್ಲಬೇಕೆಂದಿದ್ದರೆ ಈ ನಡುಗಾಲದಲ್ಲಿಯೇ ನಾವು ಎದ್ದು ನಿಲ್ಲಲು ಕಲಿಯಬೇಕು. ಹೆರವರ ಕೈಯಿಂದ ಉಣ್ಣುವದನ್ನು ನಾವಿಂದಿನಿಂದಲೆ ನಿಲ್ಲಿಸಿಬಿಡಬೇಕು.

ನಮಗೆ ಬೇಕಾದಂತೆ ಈ ಎಲ್ಲ ಸಂಗತಿಗಳು ಸಂಭವಿಸುತ್ತಿಲ್ಲವೆಂಬುದಕ್ಕೆ ನಮ್ಮ ದೌರ್ಬಲ್ಯವೇ ಕಾರಣ (ನಮ್ಮ ದೌರ್ಬಲ್ಯಕ್ಕೆ ಕಾರಣಗಳೇನೇ ಇರಲಿ) ಆದರೆ ಬ್ರಿಟಿಶ ಸರಕಾರವಾಗಲಿ ಜನತೆಯಾಗಲಿ ಕಾರಣವಲ್ಲ. ನಮಗೆ ನಮ್ಮ ನಾಡೇ ದೊರೆಯುವದೇ ಹೊರತಾಗಿ ಸಮುದ್ರದಾಚೆಯಿಂದ ಬಹುಮಾನವೇನೊ ದೊರೆಯದು. ತಾವು ಘೋಷಿಸಿದಂತೆ ನಡೆದುಕೊಳ್ಳುವದಕ್ಕಾಗಿಯೆ ಬ್ರಿಟಿಶ ಮಂತ್ರಿತ್ರಯರು ಇಲ್ಲಿಗೆ ಆಗಮಿಸಿದ್ದಾರೆ. ಅವರು ಬ್ರಿಟಿಶ ಘೋಷಣೆಗಳನ್ನು ಮರೆತು ಬ್ರಿಟಿಶ ಆಳಿಕೆಯನ್ನು ಇಲ್ಲಿ ಶಾಶ್ವತಗೊಳಿಸುವ ಉಪಾಯಗಳನ್ನು ಹುಡುಕಹತ್ತಿದರೆ ಅವರನ್ನು ನಿಂದಿಸುವ ಕಾಲವಿದೇ. ಇನ್ನೂ ಹೆದರಿಕೆ ಇದೆಯಾದರೂ ಬ್ರಿಟಿಶಮಂತ್ರಿಗಳು ಒಳಗೊಂದು ಹೊರಗೊಂದು ತೋರಿದ ಉದಾಹರಣೆ ಇದು ವರೆಗೆ ಕಂಡುಬಂದಿಲ್ಲ.

ಹೊಸದಿಲ್ಲಿ ಮೋ. ಕ. ಗಾಂಧಿ
೨೬-೫-೪೬.

ಜನರ ಅಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕಾಗಿ ಈ ಸಂಚಾರವನ್ನು ಕೈಕೊಳ್ಳಲಾಗುತ್ತದೆ. ಅವರಿಗೆ ಕೊಟ್ಟ ಮಾನಪತ್ರಗಳಲ್ಲಿ ಅವರ ಸದ್ಗುಣಗಳನ್ನೇನು ಪ್ರಶಂಸಿಸಬೇಕಿಲ್ಲ. ಆ ಸದ್ಗುಣಗಳು ಅವರ ಪರಿಶ್ರಮದ ಫಲ. ಸ್ಥಳಿಕ ಕುಂದುಕೊರತೆಗಳನ್ನು ಅವಶ್ಯಕತೆಗಳನ್ನು ಮಾತ್ರ ಆ ಮಾನಪತ್ರಗಳಲ್ಲಿ ಉಲ್ಲೇಖಿಸಬಹುದು. ಈ ಸಮಯದಲ್ಲಿ ಮಂತ್ರಿಗಳು ಮತ್ತು ಅವರ ಕಾರ್ಯದರ್ಶಿಗಳು ಬಹಳ ಕಠಿನ ಕಾರ್ಯವನ್ನು ಮಾಡಬೇಕಾಗಿದೆ. ಸಾರ್ವಜನಿಕರ ಮನ್ನಣೆ ಅವರಿಗೆ ಸಹಾಯಕವಾಗದೆ ತೊಡಕಾಗಿಯೆ ಪರಿಣಮಿಸುವುದು.

ಮಸೂರಿ ಮೋ. ಕ. ಗಾಂಧಿ
೩೧-೫-೪೬

೦ ೦ ೦ ೦

ಇಡೀ ದಿವಸ ಕೆಲಸ ಮಾಡಿದರೂ ಹೊಟ್ಟೆಗೆ ಸಾಕಾಗುವಷ್ಟು ಅನ್ನಸಿಕ್ಕದಿದ್ದರೆ ಏನು ಮಾಡತಕ್ಕದ್ದು ?

ಉತ್ತರ— ಕೂಲಿಕಾರನಿಗೆ ಮಾಡಿದ ಪರಿಶ್ರಮಕ್ಕೆ ತಕ್ಕ ಮೂಲ್ಯ ಸಿಕ್ಕಲಿಕ್ಕೆಬೇಕು. ಈ ನಿಯಮವು ಪರ್ವತಗಳಷ್ಟೆ ಹಳೆಯದು. ಎಲ್ಲ ಬಗೆಯ ಉಪಯುಕ್ತ ಕೆಲಸದಿಂದ ಕೂಲಿಕಾರನಿಗೆ ಅಷ್ಟೇ ಮತ್ತು ಸಾಕಷ್ಟು ಕೂಲಿಯು ದೊರೆಯಲಿಕ್ಕೆಬೇಕು. ಆ ಸುವರ್ಣ ಸಮಯ ಬರುವ ವರೆಗೆ ಪ್ರತಿಯೊಬ್ಬ ಕೂಲಿಕಾರನಿಗೆ ಕನಿಷ್ಠ ತನ್ನ ಸ್ವಂತದ ಮತ್ತು ಕುಟುಂಬದ ಅನ್ನವಸ್ತ್ರಗಳಿಗೆ ಸಾಕಾಗುವಷ್ಟು ಕೂಲಿಯಾದರೂ ಸಿಕ್ಕುವಂತೆ ಮಾಡಲಿಕ್ಕೆಬೇಕು. ಇಷ್ಟನ್ನಾದರೂ ಮಾಡದಿದ್ದ ಸರಕಾರವು ಸರಕಾರವೇ ಅಲ್ಲ. ಅದೊಂದು ಬಗೆಯ ಅರಾಜಕತೆ. ಇಂಥ ಪರಿಸ್ಥಿತಿಯನ್ನು ಶಾಂತರೀತಿಯಿಂದ ವಿರೋಧಿಸಲಿಕ್ಕೆಬೇಕು. ಧಾನ್ಯದ ಅಂಗಡಿಗಳನ್ನು ಲೂಟಿ ಮಾಡುವದು ಇಲ್ಲವೆ ಗೊಂದಲ ಹಾಕುವುದು ಇದಕ್ಕುಪಾಯವಲ್ಲ. ಅದರಿಂದ ಅನವಶ್ಯಕ ಹಾನಿ ಮತ್ತು ಮರಣಕ್ಕವಕಾಶ ಸಿಕ್ಕುವುದು. ಅಧಿಕಾರಿಗಳು ಅಂಜಿಕೆಯಿಂದ ಹಿಂದೆ ಸರಿದರೂ ಆದರಿಂದ ನಿಜವಾದ ಸಹಾಯ ಅವರಿಗಾಗಲಿ ಜನತೆಗಾಗಲಿ ಸಿಕ್ಕುವುದಿಲ್ಲ. ಅರಾಜಕತೆಯೂ ಅದರಿಂದ ಇಲ್ಲದಂತಾಗುವುದಿಲ್ಲ. ಪರಿಸ್ಥಿತಿ ಇದ್ದಂತೆಯೆ ಉಳಿಯುವದು. ಜಗತ್ತಿನ ಸುತ್ತಲೂ ದೃಷ್ಟಿಕ್ಷೇಪ ಮಾಡಿದರೆ ಮೇಲೆ ಹೇಳಿದುದು ದೃಢೀಕರಿಸಲಾಗುತ್ತದೆ. ಕಾಳಿನ ಸಂಗ್ರಹಾಲಯದಲ್ಲಿ ಕಾಳು ಇದ್ದರೂ ಹಸಿದವರಿಗೆ ಕಾಳು ಸಿಕ್ಕದಿದ್ದರೆ ಅವರು ಶಾಂತರೀತಿಯಿಂದ ಸತ್ಯಾಗ್ರಹವನ್ನು ಪ್ರಾರಂಭಿಸಬೇಕು. ತಮಗೆ ಕೊಡದಿದ್ದನ್ನು ಅವರು ಒತ್ತಾಯದಿಂದ ಬಲುಮೆಯಿಂದ ತೆಗೆದುಕೊಳ್ಳಕೂಡದು. ಅವರು ಆಮರಣ ಉಪೋಷಣ ಕೈಕೊಳ್ಳಬಹುದು ಮತ್ತು ತಮ್ಮ ಸಲುವಾಗಿ ಪರಿಹಾರವನ್ನು ಪಡೆಯಬಹುದು. ಅವರಲ್ಲಿ ತಾಳ್ಮೆಯಿದ್ದರೆ ನಾನು ಸೂಚಿಸಿದ ಪದ್ಧತಿಯಿಂದ ಯಶಸ್ಸು ಸಿಕ್ಕುವುದು ನಿಶ್ಚಿತ.

ಮಸೂರಿ ಮೋ. ಕ. ಗಾಂಧಿ
೨೯—೫—೪೬ (ಹರಿಜನ ಬಂಧುವಿನಿಂದ)

ನಾರದ ಪತ್ರ

(ಲನೇ ಪುಟದಿಂದ ಮುಂದರಿದುದು)

ಒಂದು ವಾಸಸ್ಥಳ ಇರಬೇಕೆಂದು ಹೇಳಿದರು. ಪರ್ವತದ ಆರೋಗ್ಯದಾಯಕ ಹವೆಯ ಆವಶ್ಯಕತೆ ಇದ್ದಾಗಲೆಲ್ಲ ಅವರಿಗೆ ಆ ಸೌಕರ್ಯ ದೊರೆಯಬೇಕು. 'ನಾನು ನಾನಾಗಿಯೆ ಹರಿಜನನಾಗಿದ್ದೇನೆ. ಹರಿಜನರೂ ಬಂದು ವಾಸಿಸಬಹುದಾದಂಥ ಸ್ಥಳದಲ್ಲಿ ನಾನು ವಾಸಿಸಬಯಸುತ್ತೇನೆ. ಹುಟ್ಟಿನಿಂದ ಹರಿಜನನಾದವನು ನನ್ನ ವರ್ಣವನ್ನು ಹಳಿಯಬಹುದು. ಆದರೆ ಸ್ವೇಚ್ಛೆಯಿಂದ ಹರಿಜನನಾದ ನಾನೆಂತು ಹಾಗೆ ಮಾಡಬಲ್ಲೆ? ಅಸ್ಪೃಶ್ಯತೆಯು ಇಲ್ಲದಂತಾಗಬೇಕಾದರೆ ಮತ್ತು ಜಗತ್ತಿನಲ್ಲಿ ಹಿಂದೂ ಧರ್ಮವು ಉಳಿಯಬೇಕಾಗಿದ್ದರೆ ಸವರ್ಣ ಹಿಂದುಗಳೆಲ್ಲ ಅತಿಶೂದ್ರರಾಗಬೇಕೆಂದು ನಾನು ಅವರಿಗೆ ಉಪದೇಶಿಸಲೂ ಹಿಂಜರಿದಿಲ್ಲ.'' ಹರಿಜನರು ಬಂದು ಇರಬಹುದಾದಂಥ ಸ್ಥಳವು ಮಸೂರಿಯಲ್ಲಿ ಇದ್ದರೆ ತಾವೂ ಅಲ್ಲಿರಬಹುದು. ಪಂಚಗಣಿಯಲ್ಲಿ ಇದೇ ಪ್ರಶ್ನೆಯನ್ನು ಕೇಳಿದಾಗ ಅಂಥದೊಂದು ವಸತಿಯನ್ನು ಸ್ಥಾಪಿಸಲು ಪ್ರಯತ್ನಿಸುತ್ತಿರುವದಾಗಿ ಅಲ್ಲಿಯವರು ಹೇಳಿದರು. ಮಸೂರಿಯಲ್ಲಿಯೂ ಇಂಥ ಪ್ರಯತ್ನ ನಡೆಸಲು ಇಲ್ಲಿಯ ನಾಗರಿಕರ ಒಂದು ಸಮಿತಿ ರಚಿತವಾಗಲಿದೆಂಬ ಸುದ್ದಿಯನ್ನು ಜನರಿಗೆ ತಿಳಿಸಲು ತಮಗೆ ಸಂತೋಷವಾಗುವದೆಂದೂ ಹೇಳಿದರು.

ಮೇಜವಾನಿಯಲ್ಲಿ ಶವದರ್ಶನ

ಭಾರತವನ್ನು ಮುತ್ತಲಿರುವ ಬರಗಾಲವು ಮನಸ್ಸನ್ನೇ ಆವರಿಸಿ ಬಿಟ್ಟಿದೆ. ಮೇಜವಾನಿಯಲ್ಲಿ ಶವದರ್ಶನವಾದರೆ ಹೇಗಾದೀತೆಂದು ಅವರು ತಮ್ಮ ಬಿಡಗಿನ ಶ್ರೋತೃಗಳಿಗೆ ಕೇಳಿದರು. ನಿಜವಾಗಿ ಹೇಳಬೇಕಾದರೆ ಬರಗಾಲವೀಗ ಭಾರತದಲ್ಲಿ ತಲೆಯೆತ್ತಿದೆ. ಕೋಟ್ಯಾವಧಿ ಜನರಿಗೆ ತಿನ್ನಲು ಕೂಳಿಲ್ಲ. ಸಿರಿವಂತರು ಹಣ ಸುರಿಯಲು ಸಿದ್ಧರಿದ್ದಾರೆ. ಆದರೆ ಜನರೇನೂ ಹಣ ತಿಂದು ಜೀವಿಸುವದಿಲ್ಲ. ನಾಡಿನಲ್ಲಿ ಸಾಕಷ್ಟು ಆಹಾರವಿಲ್ಲ. ಇದ್ದಷ್ಟು ಧಾನ್ಯವನ್ನು ಕೊರತೆಯ ಪ್ರದೇಶಗಳಿಗೆ ಸಾಗಿಸಲಾಗುವದಿಲ್ಲ. ಸರಕಾರವು ಹೀಗೆ ದಿವಾಳಿಖೋರವಾಗಿದೆ. ಇನ್ನು ಕೆಲವೆಡೆ ಆಹಾರ ಸಂಗ್ರಹವಿದ್ದೂ ಅಲ್ಲಿಯ ಜನರು ಉಪವಾಸಕ್ಕೀಡಾಗಿದ್ದಾರೆ. ಇದಕ್ಕೆ ನಮ್ಮ ಜನರ ಲಂಚಗುಳಿತನ, ಅತ್ಯಾಸೆಗಳೇ ಕಾರಣವಾಗಿವೆ. ತಮಗೆ ಬೇಕಾದ್ದನ್ನು ಬೇಕಾದಲ್ಲಿಂದ ದೊರಕಿಸಬಲ್ಲ ಬಲ್ಲಿದರು ಬಡವರಿಗಾಗಿ ಪ್ರತಿಯೊಂದು ಕಾಳನ್ನೂ ಉಳಿಸಬೇಕೆಂದು ಅವರು ಬಿನ್ನವಿಸಿದ್ದಾರೆ. ಜನರು ಸಹಕರಿಸಿದರೆ ಮತ್ತು ಲಂಚಗುಳಿತನ, ಕಳ್ಳಪೇಟೆಗಳು ನಿರ್ನಾಮವಾದರೆ ಈಗಿನ ಬರಗಾಲವನ್ನು ಎದುರಿಸಲು ಸಾಕಾಗುವಷ್ಟು ಧಾನ್ಯವು ನಮ್ಮ ದೇಶದಲ್ಲಿದೆ. ಕೆಲವರು ಮಹಾತ್ಮರ ಹೇಳಿಕೆಯನ್ನು ಒಪ್ಪದೇ ನಾವು ಪರದೇಶಗಳಿಂದ ಧಾನ್ಯವನ್ನು ಪಡೆಯದಿದ್ದರೆ ಉಪವಾಸ ಸಾಯುವೆವೆಂದು ಹೇಳುತ್ತಿದ್ದಾರೆ. ಆದರೆ ಮಹಾತ್ಮರು ಇದನ್ನೊಪ್ಪುವುದಿಲ್ಲ. ಮೊದಲನೆಯದಾಗಿ ಪರದೇಶದ ಕಾಳು ಭಾರತಕ್ಕೆ ಬರಬೇಕಾದರೆ ವಿಲಂಬವಾಗುವದು, ಭಾರತದ ಬಂದರಗಳಲ್ಲಿ ಆ ಕಾಳು ಬಂದ ನಂತರ ಕೂಡ ಕೊರತೆಯ ಪ್ರದೇಶಗಳಿಗೆ ಅದನ್ನು ಸಾಗಿಸಲು ಅರು ವಾರಗಳ ಸಮಯ ಬೇಕಾಗುವದು. ತನಗೆ ತಾನೇ ನೆರವಾಗುವದೇ ಉತ್ತಮ ಉಪಾಯ. ಇದಕ್ಕಾಗಿ ಪರಸ್ಪರ ಸಹಕಾರ ಬೆಳೆದು ಲಂಚಗುಳಿತನ ನಿರ್ಮೂಲವಾಗಬೇಕು. ಮಸೂರಿಯ ಸಿರಿವಂತ ಸ್ತ್ರೀ-ಪುರುಷರೆಲ್ಲ ಬರಗಾಲಕ್ಕೀಡಾದವರಿಗಾಗಿ ಒಂದೊಂದು ಕಾಳನ್ನೂ ಉಳಿಸಲೇಬೇಕೆಂದು ಮಹಾತ್ಮರು ಕೇಳಿಕೊಂಡರು. ಪ್ರತಿಯೊಬ್ಬರೂ ತಮ್ಮ ಆರೋಗ್ಯಕ್ಕೆ ಅವಶ್ಯಕವಾದಷ್ಟನ್ನೇ ಉಪಯೋಗಿಸುವ ನಿರ್ಬಂಧ ಹಾಕಿಕೊಂಡರೆ ಈ ಸಂಕಟಗಳನ್ನು ನೀಗಬಹುದು.

ಮಸೂರಿ ಪ್ಯಾರೇಲಾಲ
೧-೬-೪೬

ಕರ್ನಾಟಕ

ಧಾರವಾಡ

ಧಾರವಾಡ ಕ. ಏ. ಬೋರ್ಡ ಅರ್ಟ್ಸ ಕಾಲೇಜಿನ ಪ್ರಿನ್ಸಿಪಾಲ ಶ್ರೀ ಕಂಠಯ್ಯನವರು ನಿಧನಹೊಂದಿದ್ದರಿಂದ ಪ್ರಿ. ಜಠಾರ ಗಣಪತರಾಯರು ಪ್ರಿನ್ಸಿಪಾಲರಾಗಿ ನೇಮಿಸಲ್ಪಟ್ಟಿರುವರು.

ಕರ್ನಾಟಕ ವಣಿಕ ಸಂಘದ ಪರವಾಗಿ ಶ್ರೀ ಸದಾಶಿವಪ್ಪಾ ದುಂಡಪ್ಪಾ ಅಕ್ಕಿ ಇವರು ಮದ್ರಾಸ ಸದರ್ನ ಮರಾಠಾ ರೇಲ್ವೆ ಮಂಡಲದ ಸಲಹೆಗಾರರಾಗಿ ನೇಮಿಸಲ್ಪಟ್ಟಿದ್ದಾರೆ.

ಗದಗಿನಲ್ಲಿ ಪ್ರಮುಖ ನಾಗರಿಕರ ಸಭೆ ಸೇರಿ ಇದೇ ೨೦ ಕ್ಕೆ ಕರ್ನಾಟಕ ಪ್ರಾಂತದ ಎಡಪಕ್ಷ ಸಮ್ಮೇಲನ ನಡೆಸಬೇಕೆಂದು ಗೊತ್ತಾಗಿ ಆ ಬಗ್ಗೆ ಸಮಿತಿಯೊಂದು ಸ್ಥಾಪಿತವಾಯಿತು.

೧೬೦ ಎಕರೆ ಭೂಮಿಯಲ್ಲಿ ೧೨೦೦ ಚೀಲ ಜೋಳ ಬೆಳೆಯುವವರಿಗೆ ೫೦ ರೂಪಾಯಿ ಬಹುಮಾನ ಕೊಡಲಾಗುವದು. ಈ ಸಲ ಮುಂಗಾರಿ ಜೋಳ ಬರುವ ವರೆಗೆ ಸಾಕಷ್ಟು ಕಾಳಿನ ಸಂಗ್ರಹವಿಲ್ಲದ್ದರಿಂದ ಪ್ರತಿಯೊಬ್ಬ ರೈತನು ನವಣಿ ಬಿತ್ತುವದರಿಂದ ಬರಗಾಲದಿಂದ ಮುಕ್ತನಾಗಬಹುದೆಂದು ಶ್ರೀ ವೀರಪ್ಪ ಬಸರೀಗಿಡದ ಇವರು ಅಭಿಪ್ರಾಯ ಪಡುತ್ತಾರೆ.

ಬೆಳಗಾವಿ

ಬೆಳಗಾವಿ ಮುನಸಿಪಾಲಿಟಿಯ ರೇಶನ್ ಅಂಗಡಿಗಳಿಂದ ಈ ವರ್ಷ ಮುನಸಿಪಾಲಿಟಿಗೆ ೪೯ ಸಾವಿರ ರೂಪಾಯಿ ಲಾಭವಾಗಿದ್ದು ಅದಕ್ಕಾಗಿ ಅಂಗಡಿ ಕೆಲಸಗಾರರಿಗೆ ಒಂದೊಂದು ತಿಂಗಳ ಬೋನಸ್ಸು ಕೊಡಲಾಗುವದು. ಭಂಗೀ ಜನರ ತುಟ್ಟಿಭತ್ತೆ ಸರಕಾರಿ ನಿಯಮದಂತೆ ೨೦—೨೨ ಕ್ಕೆ ಏರಿಸಲಾಯಿತು.

ಚಿಕ್ಕೋಡಿ ತಾಲೂಕಿನ ಬೋರಗಾಂವ ಹಳ್ಳಿಯ ಪಾಟೀಲರು ೧೯೪೨ ನೇ ಚಳವಳಿಯ ಕಾಲಕ್ಕೆ ಜನರಿಗೆ ಸುಳ್ಳುಸುಳ್ಳೆ ಅಂಜಿಕೆ ಹಾಕಿ ಮನಸ್ವಿ ಹಣ ತಿಂದರೆಂದು ಅಪವಾದವಿದ್ದಿತಷ್ಟೆ. ಎರಡು ದಿನಗಳ ಹಿಂದೆ ಸುಮಾರು ಸಾವಿರ ಜನರು ಗೌಡರ ಮನೆಗೆ ಹೋಗಿ ತಿಂದ ರೊಕ್ಕ ತಿರುಗಿ ಕೊಡ್ರಿ ಇಲ್ಲದಿದ್ದರೆ ಸರಕಾರದ ಕಡೆಗೆ ಅರ್ಜಿ ಮಾಡುವೆವೆಂದು ಹೇಳಿದರು. ಕೂಡಲೆ ಅವರು ಯಾದಿಯ ಪ್ರಕಾರ ಹಣ ಕೊಟ್ಟರೆಂದು ತಿಳಿಯುತ್ತದೆ.

ಸವದತ್ತಿ ಮುನಿಸಿಪಾಲಿಟಿಯ ಸಭೆಗೆ ಶ್ರೀ ಎಚ್ [illegible]ಜಲಗಿಯವರು ಅಧ್ಯಕ್ಷರು ಪಿ. ಟಿ. ತಿಪರಾಶಿಯವರು ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು.

ಬೆಳಗಾವಿಯ ಟಿಳಕವಾಡಿ ಕ್ರೀಡಾ ಭವನದಲ್ಲಿಯ ಕ್ಲಬ್ಬಿನಲ್ಲಿ ಕೆಲಪೆನಶನರರು ಅಧಿಕಾರಿಗಳು ಮತ್ತು ಇತರರು ಬ್ರಿಜ್ ಆಡುತ್ತ ಕುಳಿತಾಗ ಮೋರೆಗೆ ಮುಸುಕಿ ಹಾಕಿಕೊಂಡದ್ದ ನಾಲ್ಕಾರು ಜನ ಬಂದು ಗುರುತ್ತ ಮಾಡಿಯೆ ಅವರಲ್ಲಿದ್ದ ಹಣವನ್ನೆಲ್ಲ ದೋಚಿಕೊಂಡು ಆ ಇಸ್ಪೇಟುಗಳನ್ನೆಲ್ಲ ಹರಿದು ಹಾಕಿದರು. ಹೋಗುವಾಗ ನೀವು ವೃದ್ಧರು ತರುಣರಿಗೆ ಆದರ್ಶರಿದ್ದು ಹೀಗೆ ಇಸ್ಪೇಟು-ಆಡುತ್ತ ಕೂಡ್ರುವದು ಸರಿಯಲ್ಲ. ನಾವೇನು ನಿಮ್ಮ ಹಣವನ್ನು ಅಪಹರಿಸುವದಿಲ್ಲ. ಕಾಂಗ್ರೆಸ್ ಕಾರ್ಯಕ್ಕಾಗಿ ಉಪಯೋಗಿಸುವೆವೆಂದು ಮುಂತಾಗಿ ಹೇಳಿದರಂತೆ.

ಉತ್ತರಕನ್ನಡ

[illegible]ತ್ತರ ಕನ್ನಡ ಜಿಲ್ಲೆಯ ಮರಾಠಿ ಮಾತಾಡುವ ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಬೆಳಗಾವಿ ಮರಾಠಿ ಸಾಹಿತ್ಯಸಮ್ಮೇಲನದ ಠರಾವನ್ನು ಕಾರವಾರ ಕೊಂಕಣಿ ಪರಿಷತ್ತಿನ ಕಾರ್ಯದರ್ಶಿ ಎಂ ಎಂ ಶಾನಭಾಗರು ಖಂಡಿಸಿ ಬದಲಾಗಿ ಮುಂಬಯಿ ದ್ವೀಪ, ಠಾಣಾ, ಕುಲಾಬಾ, ರತ್ನಾಗಿರಿ, ಗೋವಾ, ಕಾರವಾರ, ಮಲಬಾರ ಜಿಲ್ಲೆಗಳನ್ನು ಸೇರಿಸಿ ಕೊಂಕಣ ಪ್ರಾಂತವನ್ನು ನಿರ್ಮಿಸಿಕೊಡಬೇಕೆಂದು ಕೇಳಿಕೊಂಡಿದ್ದಾರೆ.

ಅಂಕೋಲೆಯಲ್ಲಿ ವೈಶ್ಯ ತರುಣ ಸಂಘದ ಸ್ನೇಹ ಸಮ್ಮೇಲನ ಶ್ರೀ ರಾಯಾ ಮಂಜುನಾಥ ಸೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ವಿಜಾಪುರ

ಚಿಮಣಿ ಎಣ್ಣೆಯ ಸೀದಾ ಪದ್ಧತಿಯನ್ನು ವಿಜಾಪುರ, ಬಾಗಲಕೋಟಿ, ಗುಳೇದಗುಡ್ಡ ಮತ್ತು ಇಳಕಲ್ಲಗಳಲ್ಲಿ ಜೂನ ೧, ೧೯೪೬ ರಿಂದ ಬಳಕೆಯಲ್ಲಿ ತರಲಾಗಿದೆ.

ಬಾಗಲಕೋಟೆಯಲ್ಲಿ ೧೫ ದಿನಗಳಿಂದ ನಡೆದಿದ್ದ ಸ್ತ್ರೀ ಸೈನಿಕ ಶಿಕ್ಷಣ ಶಿಬಿರದ ಸಮಾರೋಪ ಸಮಾರಂಭ ಶ್ರೀ ರಾ. ಯ. ಧಾರವಾಡಕರರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಶಿಬಿರದಲ್ಲಿ ೨೪ ಸೈನಿಕರು ತರಬೇತಿ ಹೊಂದಿದ್ದಾರೆ.

ಮುಂಬಯಿ ಪ್ರಾಂತದ ಗೃಹ ಮಂತ್ರಿಗಳಾದ ಮಾನ್ಯ ಮುರಾರಜಿ ದೇಸಾಯರು ವಿಜಾಪುರ ಜಿಲ್ಲೆಯ ಕೆಲ ಭಾಗದಲ್ಲಿ ಸಂಚರಿಸಿ ಹೋದರು. ಜಿಲ್ಲೆಯಲ್ಲಿನ ಬರಗಾಲ ಪರಿಸ್ಥಿತಿ, ನಡೆದ ಪರಿಹಾರ ಕಾರ್ಯ ಮೊದಲಾದವುಗಳನ್ನು ಪ್ರತ್ಯಕ್ಷ ತಿಳಿದುಕೊಂಡು ಹೋದರು.

ವಿಜಾಪುರ ಜಿಲ್ಲಾ ಲೋಕಲ ಬೋರ್ಡಿನವರು ಪ್ರಾಥಮಿಕ ಶಾಲೆಗಳ ಶಿಕ್ಷಕರಿಗೆ ಸರಕಾರಿ ಪ್ರಮಾಣದಂತೆ ತುಟ್ಟಿ ಭತ್ತೆ ಮಂಜೂರ ಮಾಡಿಲ್ಲೆಂದು ತಿಳಿಯುತ್ತದೆ. ಇದಲ್ಲದೆ ಸರಕಾರಿ ಪ್ರಮಾಣದಂತೆ ತುಟ್ಟಿ ಭತ್ತೆ ಮಂಜೂರು ಮಾಡದಿದ್ದರೆ ಡಿ ಎಲ್ ಬಿ ನೋಕರರು ಸಂಪು ಹೂಡುವದಾಗಿ ಗೊತ್ತುಪಡಿಸಿರುವರೆಂದು ತಿಳಿಯುತ್ತದೆ.

ವಿಜಾಪುರ ಜಿಲ್ಲೆಯಲ್ಲಿ ಮಳೆ ಸಾಧಾರಣ ಎಲ್ಲ ಕಡೆಗೆ ಆಗಿದ್ದು ಮುಂಗಾರಿ ಬಿತ್ತನೆಯ ಕೆಲಸ ಪ್ರಾರಂಭವಾಗಿದೆ. ರೋಹಿಣಿ ಮಳೆಯಿಂದ ರೈತರ ಮೋರೆಯ ಮೇಲೆ ಸ್ವಲ್ಪ ದ್ರವ ಬಂದಂತಾಗಿದೆ.

ಕನ್ನಡ ಸಂಸ್ಥಾನ

ಕಳೆದ ವಾರ ಮಿರಜಿಯಲ್ಲಿ ಜಂಗೀ ಕುಸ್ತಿಗಳನ್ನೇರ್ಪಡಿಸಿ ಪ್ರಸಿದ್ಧ ಪೈಲವಾನರ ಕುಸ್ತಿ ಆಡಿಸದಿದ್ದುದಕ್ಕಾಗಿ ಗೊಂದಲವಾಗಿ ಪೋಲೀಸರು ಗೋಳೀಬಾರು ಮಾಡಬೇಕಾದ ಪ್ರಸಂಗ ಬಂದಿತ್ತಷ್ಟೆ. ಆಸಂಬಂಧದಲ್ಲೀಗ ಕಂತ್ರಾಟದಾರ ಮಾರುತಿ ಶಿತೋಳೆಯೆಂಬವರನ್ನು ಪಿನಲ್ ಕೋಡಿನ ೫೨೦ ನೇ ಕಲ್ಮಿನನ್ವಯ ಸೆರೆ ಹಿಡಿದಿದ್ದಾರೆ. ಪೋಲೀಸ ಗೋಳೀಬಾರಿನ ವಿಚಾರಣೆಯಾಗಬೇಕೆಂದು ಸಾರ್ವಜನಿಕರು ಕೇಳಿಕೊಂಡಿದ್ದಾರೆ.

ಮಿರಜಿ ನಾಗರಿಕ ಪೂರೈಕೆ ಖಾತೆಯ ಸದ್ಯದ ಡಾಯರೆಕ್ಟರರಾದ ಶ್ರೀ ತಮ್ಮಣರಾವ ಕಡಕೋಳ ಇವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟದ್ದು ಬೇಗನೆ ಇಲ್ಲಿಂದ ಹೊರಡುವವರಿದ್ದಾರೆ. ಅವರ ರಾಜೀನಾಮೆ ಮಾತ್ರ ಇನ್ನೂ ಸ್ವೀಕೃತವಾಗಿಲ್ಲ.

ಮಿರಜಿ ಶಾಸನ ಸಭೆಯಲ್ಲಿ ೩ ನೇ ತಾರೀಕು ಧನಸಹಾಯ ಮಂಜೂರಿಯ ಚರ್ಚೆ ನಡೆಯಿತು. ೯ ಕಡಿತದ ಸೂಚನೆಗಳಲ್ಲಿ ೬ ಸ್ವೀಕೃತವಾದವು. ೨ ಹಿಂತೆಗೆದುಕೊಳ್ಳಲ್ಪಟ್ಟವು. ಹಾಗು ಒಂದು ಬಿದ್ದುಹೋಯಿತು. ಪೂರೈಕೆ ಖಾತೆಗೆ ಸಂಬಂಧಿಸಿದ ಒಂದು ನಿಂದಾವ್ಯಂಜಕ ಸೂಚನೆ ಅಂಗೀಕೃತವಾಯಿತು.

ಘಟನಾ ಸಮಿತಿಯಲ್ಲಿ ಸಂಸ್ಥಾನ ಪ್ರಜರಿಗೆ ಪ್ರಾತಿನಿಧ್ಯ ಕೊಡಬೇಕು. ಮತ್ತು ಸಾಂಗಲಿ ಸಂಸ್ಥಾನವನ್ನು ಮುಂಬಯಿ ಪ್ರಾಂತದಲ್ಲಿ ಸೇರಿಸುವ ಉದ್ದೇಶ ಇಟ್ಟುಕೊಂಡು ಈಗ ಪೂರ್ಣ ಹೊಣೆಗಾರಿಕೆ ಕೊಡಬೇಕೆಂದು ಕವಠೆಯಲ್ಲಿ ಸ್ವಾಮಿ ರಮಾನಂದ ಮಹಾರಾಜರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಾಂಗಲಿ ರೈತ ಸಭೆಯಲ್ಲಿ ನಿರ್ಣಯಿಸಲಾಯಿತು. ಕಾಶ್ಮೀರ ಪ್ರಜೆಗಳ ಬೇಡಿಕೆಗಳಿಗೂ ಸಭೆಯಲ್ಲಿ ಬೆಂಬಲ ಕೊಡಲಾಯಿತು.

ಸಾಂಗಲಿ ಗಜಾನನ ಬಟ್ಟೆ ಗಿರಣಿಯ ಕೆಲಸಗಾರರು ೩ ನೇ ತಾರೀಖಿನಿಂದ ಸಂಪು ಪ್ರಾರಂಭಿಸಿದ್ದಾರೆ. ಸಾಕಷ್ಟು ತುಟ್ಟಿ ಭತ್ತೆ ಮತ್ತು ಬೋನಸ್ಸು ಕೊಡಬೇಕೆಂದು ಅವರು ಕೇಳಿದ್ದಾರೆ. ಉಳಿದ ಗಿರಣಿಗಳ ಕೆಲಸಗಾರರೂ ಸಹಾನುಭೂತಿಗಾಗಿ ಒಂದು ದಿನ ಸಂಪು ಮಾಡಿದ್ದರು.

ಪ್ರಾಥಮಿಕ ಶಿಕ್ಷಕರ ತುಟ್ಟಿಭತ್ತೆ

ಮುಂಬೈಸರಕಾರದವರು, ಪ್ರಾಂತದಲ್ಲಿಯ ಜಿಲ್ಲೆಯ ಲೋಕಲ್ ಬೋರ್ಡುಗಳ ಮತ್ತು ಎಲ್ಲ ಮುನಸೀಪಾಲಿಟಿಗಳ ಆಡಳಿತೆಯ ಕೆಳಗೆ ಕೆಲ್ಸಮಾಡುತ್ತಿರುವ ಪ್ರಾಥಮಿಕ ಶಿಕ್ಷಕರಿಗೆ ಕೊಡುವ ತುಟ್ಟಿಭತ್ತೆಯನ್ನು ಸನ್ ೧೯೪೬ ರ ಎಪ್ರಿಲ ತಿಂಗಳ ೧ ರಿಂದ ಹೆಚ್ಚು ಮಾಡಿರುವರು. (ಸನ್ ೧೯೪೬ ರ ಮೇ ತಿಂಗಳ ಪಗಾರದೊಂದಿಗೆ ಅದು ದೊರೆಯುವದು.) ಸರಕಾರೀ ನೌಕರರ ತುಟ್ಟಿಭತ್ತೆಯನ್ನು ಎಪ್ರಿಲ ೧ ರಿಂದ ಹೆಚ್ಚು ಮಾಡಲಾಗಿದೆ. ಪ್ರಾಥಮಿಕ ಶಿಕ್ಷಕರು ಸಹ ಸರಕಾರಿ ನೌಕರರಷ್ಟೇ ತುಟ್ಟಿಭತ್ತೆಯನ್ನು ಪಡೆಯುವರು.

ಮೇಲಿನಂತೆ, ಮುಂಬಯಿ ಉಪನಗರಜಿಲ್ಲೆ ಸಿರೋಳ, ವಾಸ್ನ, ಅಚೇರ, ಸಾಬರಮತಿ ಕ್ಷೇತ್ರಗಳಲ್ಲಿ ಶಿಕ್ಷಕರು ಮತ್ತು ಅಹಮ್ಮದಾಬಾದ ಅಂಚೆಯ ಕಚೇರಿಯಿಂದ ೩ ಮೈಲುಗಳ ವ್ಯಾಸದೊಳಗಿರುವ ಸ್ಥಳಗಳಲ್ಲಿ ಶಿಕ್ಷಕರು, ಪುಣೆಯ ಉಪನಗರದ ಮುನಸಿಪಾಲಟಿ ಕ್ಷೇತ್ರ, ಪುಣೆಯ ರೇಲ್ವೆ ಸ್ಟೇಶನಿನಿಂದ ೫ ಮೈಲುಗಳ ವ್ಯಾಸದೊಳಗಿರುವ ಗಣೇಶಖಿಂಡಿ ಮತ್ತು ಬೇರೆ ಸ್ಥಳಗಳಲ್ಲಿಯ ಶಿಕ್ಷಕರು ಠಾಣೆಯ ಮನಕ್ಯರಾಣಗಳಲ್ಲಿ ತಿಂಗಳಿಗೆ ೪೦ ರೂ. ಗಳಿಗಿಂತ ಕಡಿಮೆ ಸಂಬಳವುಳ್ಳ ಶಿಕ್ಷಕರಿಗೆ ೨೪ ರೂ. ಮತ್ತು ತಿಂಗಳಿಗೆ ೪೦ ರೂ. ಇಲ್ಲವೆ ಅದಕ್ಕಿಂತ ಹೆಚ್ಚು ಸಂಬಳವುಳ್ಳ ಶಿಕ್ಷಕರಿಗೆ ೨೬ ರೂ. ತುಟ್ಟಿಭತ್ತೆ ದೊರೆಯುವದು.

ಉಳಿದ ಕಡೆಯ ಜಿಲ್ಲಾ ಲೋಕಲ್‌ಬೋರ್ಡು ಕ್ಷೇತ್ರಗಳಲ್ಲಿ ತಿಂಗಳಿಗೆ ೪೦ ರೂ. ಗಳಿಗಿಂತ ಕಡಿಮೆ ಸಂಬಳವುಳ್ಳ ಶಿಕ್ಷಕರಿಗೆ ೨೦ ರೂ. ಮತ್ತು ತಿಂಗಳಿಗೆ ೪೦ ರೂ. ಇಲ್ಲವೆ ಅದಕ್ಕಿಂತ ಹೆಚ್ಚು ಸಂಬಳವುಳ್ಳ ಶಿಕ್ಷಕರಿಗೆ ೨೪ ರೂ. ತುಟ್ಟಿಭತ್ತೆ ದೊರೆಯುವದು.

ಹಿಂದುಸ್ತಾನ

ಮುಂಬಯಿ

ಮುಂಬಯಿ ಶಾಸನಸಭೆಯ ಆಯವ್ಯಯ ಅಧಿವೇಶನ ಜುಲೈ ಕೊನೆಯಲ್ಲಿ ಪ್ರಾರಂಭವಾಗುವ ಸಂಭವವಿದೆ. ಅದರ ಸಿದ್ಧತೆ ಭರದಿಂದ ನಡೆದಿದೆ.

ಮುಂಬಯಿ ಸರಕಾರದ ಗೃಹ ಮಂತ್ರಿಗಳಾದ ಶ್ರೀ ಮುರಾರಜಿ ದೇಸಾಯಿ ಇವರು ಬಾರ್ಡೋಲಿಯಲ್ಲಿ ಸರದಾರ ಆಸ್ಪತ್ರೆಯ ಸಂಬಂಧದಲ್ಲಿ ವಿಚಾರ ವಿನಿಮಯ ಮಾಡಿದರು. ಸಭೆಯಲ್ಲಿ ಒಂದು ಲಕ್ಷ ರೂಪಾಯಿ ಆಶ್ವಾಸನ ದೊರೆಯಿತು. ಅರಳೀ ವ್ಯಾಪಾರಸ್ಥರ ಮಾನಪತ್ರಕ್ಕೆ ಉತ್ತರ ಕೊಡುತ್ತ ವ್ಯಾಪಾರಸ್ಥರು ರೈತರಿಗೆ ನ್ಯಾಯವನ್ನು ದಯಪಾಲಿಸಬೇಕೆಂದು ಉಪದೇಶಿಸಿದರು.

ಸುಭಾಸ ಸೈನಿಕರಿಗೆ ಸಾರ್ವಜನಿಕ ವಾಹನಗಳನ್ನು ನಡೆಸಲು ತಕ್ಕ ನೈಪುಣ್ಯವಿದ್ದರೆ ಲಾಯಸೆನ್ಸ ಕೊಡಬಹುದೆಂದು ಮುಂಬಯಿ ಸರಕಾರದವರು ಪ್ರಕಟಿಸಿದ್ದಾರೆ.

ಅ. ಭಾ. ಪುರೋಗಾಮಿ ಪಕ್ಷದ ಅಧ್ಯಕ್ಷರಾದ ಸರದಾರ ಶಾರ್ದೂಲಪಿಂಗ ಕವೀಶ್ವರರು ಮುಂಬಯಿಗೆ ಬಂದಿದ್ದು ಸಾರ್ವಜನಿಕ ಸಭೆಯಲ್ಲಿ ಸದ್ಯದ ಪರಿಸ್ಥಿತಿಯನ್ನು ಚಿತ್ರಿಸಿದರು.

ಘಟನಾ ಸಮಿತಿಗೆ ಮುಂಬೈಯಿಂದ ಹೋಗುವ ಪ್ರತಿನಿಧಿಗಳ ಚುನಾವಣೆ ಕಾರ್ಯಕ್ರಮ ಸರಕಾರಕ್ಕೆ ಇನ್ನೂ ಗೊತ್ತಾಗಿಲ್ಲೆಂದು ತಿಳಿಯುತ್ತದೆ.

ಮುಂಬಯಿಯ ಒಂದು ಜವಳಿ ಗಿರಣಿಯಲ್ಲಿಯ ಕೂಲಿಕಾರರು ಹಾಗು ಒಡೆಯರಲ್ಲಿ ಒಡಂಬಡಿಕೆಯನ್ನು ಸಾಧಿಸುವ ಬಗ್ಗೆ ಪ್ರಸಿದ್ಧ ಕೂಲಿಕಾರ ಮುಖಂಡರಾದ ಶ್ರೀ ಆರ್ ಎಸ್ ನಿಂಬಕರರು ಅನಿಯಮಿತ ಅವಧಿಯ ವರೆಗೆ ಉಪವಾಸ ಪ್ರಾರಂಭಿಸಲು ನಿರ್ಧರಿಸಿದ್ದಾರೆ.

ಮನಮಾಡದಲ್ಲಿ ಬುಧವಾರ ರಾತ್ರಿ ಸರಕಾರೀ ಧಾನ್ಯ ಸಂಗ್ರಹ ಮಾಡಿದ ಥಿಯೆಟರಿಗೆ ಬೆಂಕಿ ಹತ್ತಿ ಒಂದು ಲಕ್ಷ ರೂಪಾಯಿ ಹಾನಿ ಸಂಭವಿಸಿದ ಸುದ್ದಿ ಬಂದಿದೆ.

ಬೆಳಗಾವಿಯಲ್ಲಿ ಕಳೆದ ೧೪ ಕ್ಕೆ ಮಾಡಿದಂತೆ ತಾಳಗೆಟ್ಟ ಭಾಷಣಗಳನ್ನು ಮಾಡಬಾರದೆಂದು ಪುಣೆಯ ಜಿಲ್ಹಾ ಮ್ಯಾಜಿಸ್ಟ್ರೇಟರು ಆಚಾರ್ಯ ಅತ್ರೆಯವರ ಮೇಲೆ ನೋಟೀಸು ಜಾರಿ ಮಾಡಿರುವರು. ಮಹಾತ್ಮರ ಅನುಯಾಯಿ ತಾವು ತಮ್ಮ ಭಾಷಣದ ಧ್ವನಿಯು ಕಾಂಗ್ರೆಸ ಧುರೀಣರ ಭಾಷಣಗಳಂತೆಯೆ ಇದ್ದು ಅಂತಹ ಭಾಷಣವನ್ನು ಇನ್ನು ಮುಂದೆಯೂ ತಾವು ಮಾಡುವೆವೆಂದು ಮುಂತಾಗಿ ಅತ್ರೆಯವರು ಉತ್ತರಿಸಿದ್ದಾರೆ.

ಲೋಕೋಪಯೋಗಿ ಕಾರ್ಯಗಳಿಗಾಗಿ ಸಹಾಯವನ್ನೀಯುವ ಉದ್ದೇಶದಿಂದ ಮುಂಬಯಿ ಸರಕಾರದವರು ಈ ವರ್ಷದ ಮುಂಗಡ ಪತ್ರಿಕೆಯಲ್ಲಿ ೧೦೭೧೦೦೦೦ ರೂಪಾಯಿಗಳನ್ನು ಮಂಜೂರ ಮಾಡಿದ್ದಾರೆ.

ಮುಂಬಯಿ ಸರಕಾರದವರು ೩೮ ರೂರಲ್ ಅಸಿಸ್ಟಂಟರ ಸ್ಥಳಗಳನ್ನು ಮಂಜೂರು ಮಾಡಿದ್ದಾರೆ ಇವರನ್ನು ಸಹಕಾರ ಸಂಘಗಳಲ್ಲಿ ಕೆಲಸ ಮಾಡಲು ತರಬೇತು ಮಾಡಲಾಗುವದು.

ಮುಂಬಯಿ ಸರಕಾರದವರು ಸರಕಾರದಿಂದ ಸಹಾಯ ಪಡೆಯುವ ಮತ್ತು ವೈದ್ಯಕೀಯ ವೃತ್ತಿಯಲ್ಲಿರುವವರಿಗೆ ಮನೆಕಟ್ಟುವದಕ್ಕಾಗಿ ಮುಂಗಡ ಹಣ ಕೊಡುವ ಬಗ್ಗೆ ಇರುವ ಯೋಜನೆಯನ್ನು ಮತ್ತೆ ಎರಡು ವರ್ಷಗಳ ಅವಧಿಯ ವರೆಗೆ ಅಂದರೆ ಸನ್ ೧೯೪೮ ರ ಮಾರ್ಚ ತಿಂಗಳ ೩೧ ರ ವರೆಗೆ ಬೆಳೆಯಿಸಿರುವರು ಮತ್ತು ಈ ಯೋಜನೆಗಾಗಿ ಸದ್ಯದ ವರ್ಷದ ಮುಂಗಡ ಪತ್ರಿಕೆಯಲ್ಲಿ ೩೦೦೦ ರೂ. ಕಾದಿಟ್ಟಿರುವರು.

ಮೋಟರುಗಳಲ್ಲಿ ಹೆಚ್ಚಿಗೆ ಜನರನ್ನು ಕೂಡಿಸಿಕೊಳ್ಳದಂತೆ ಮುಂಬಯಿ ಸರಕಾರದವರು ಉಗ್ರ ಉಪಾಯಗಳನ್ನು ಕೈಕೊಳ್ಳಲು ನಿರ್ಧರಿಸಿದ್ದಾರೆ. ಇಂಥ ಮೊದಲನೆ ಅಪರಾಧಕ್ಕೆ ೩ ತಿಂಗಳ ಮೋಟರ ಪರವಾನಿಗೆ ರದ್ದುಗೊಳಿಸಲು ಎರಡನೆ ಅಪರಾಧವಾಗಿದ್ದರೆ ಕಾಯಂ ಪರವಾನಿಗೆ ರದ್ದುಗೊಳಿಸಲು ಪ್ರಾಂತಿಕ ಸಾರಿಗೆ ಅಧಿಕಾರಿಗಳಿಗೆ ಅಧಿಕಾರ ಕೊಡಲಾಗಿದೆ.

ಬಿಹಾರದಲ್ಲಿ ಇತ್ತೀಚೆ ಮತ್ತೆ ೨೩೦ ರಾಜಕೀಯ ಕೈದಿಗಳ ಬಿಡುಗಡೆಯಾಗಿದೆ.

ಹೊಸದಿಲ್ಲಿ

ಬ್ರಹ್ಮದೇಶ ಸರಕಾರದ ಕಾರ್ಯಕಾರೀ ಮಂಡಲದ ಸದಸ್ಯರಾದ ಯು. ಬಾ., ಓಹೆನ್ ಮತ್ತು ಯು. ಆಯ. ಇವರು ಹಿಂದಿನ ಮುಖ್ಯ ಮಂತ್ರಿಗಳಾದ ಯು ಸಾ ಇವರ ಬಿನ್ನಹದಮೇರೆಗೆ ರಾಜೀನಾಮೆ ಕೊಟ್ಟಿದ್ದಾರೆ.

ಅರ್ಝುದ ಹಿಂದ ಸರಕಾರದ ಸುದ್ದಿ ಖಾತೆಯ ಮಂತ್ರಿಗಳಾಗಿದ್ದ ಎಸ್. ಎ. ಅಯ್ಯರರು ಹಿಂದುಸ್ತಾನ ಟಾಯಿಮ್ಸ ಪತ್ರಿಕೆಯ ಮುಂಬಯಿ ಸುದ್ದಿಗಾರರಾಗಿ ನಿಯಮಿಸಲ್ಪಟ್ಟಿರುವರು. ಅಲ್ಲದೆ ಅವರು ಅರ್ಝುದ ಸೈನಿಕರ ಪರಿಹಾರ ಸಮಿತಿಯ ಗೌರವ ಕಾರ್ಯದರ್ಶಿಗಳ ಕೆಲಸವನ್ನೂ ನೋಡಿಕೊಳ್ಳುವರು.

ಇಂಡೋನೇಶಿಯದಿಂದ ಹಿಂದುಸ್ತಾನಕ್ಕೆ ಬರತಕ್ಕ ೫ ಲಕ್ಷ ಟನ್ ಅಕ್ಕಿಯ ಸಾರಿಗೆಯ ಮಾರ್ಗದಲ್ಲಿದ್ದ ಅಡಚಣಿಗಳು ದೂರಾಗುತ್ತ ಬಂದಿದ್ದು ಆ ಅಕ್ಕಿ ಬೇಗನೆ ಹಿಂದುಸ್ತಾನಕ್ಕೆ ಬರುವದಾಗಿ ಆಶಿಸಲಾಗಿದೆ,

ಆಸ್ಟ್ರೇಲಿಯಾ ಸರಕಾರದವರು .ಹಿಂದುಸ್ತಾನಕ್ಕೆ ೫ ಸಾವಿರ ಟನ್ ಬಟಾಟಿ ಕೊಡಲು ಒಪ್ಪಿದ್ದು ವ್ಯಾಪಾರಿಗಳ ಮುಖಾಂತರ ಅವನ್ನು ತರಿಸಲಾಗುವದು.

ಹಿಂದುಸ್ತಾನ ಸರಕಾರದ ಅರ್ಥಸಚಿವ ಸರ್ ಅರ್ಚಿಬಾಲ್ಡ ರೋಲಂಡ್ಸ ಮತ್ತು ಗೃಹಮಂತ್ರಿ ಸರ್ ಜಾನ್ ಥಾರ್ನ ಇವರು ರಾಜೀನಾಮೆ ಕೊಟ್ಟು ಸ್ವದೇಶಕ್ಕೆ ಮರಳಿದರು. ಹಿಂದಿನ ಆರ್ಥಿಕ ಸಲಹೆಗಾರರಾದ ಸರ್ ಟಾಮಸ ಗ್ರೆಗರಿಯವರೂ ಇಂಗ್ಲಂಡಿಗೆ ಪ್ರಯಾಣ ಬೆಳೆಸಿದರು.

ಕರ್ಫ್ಯೂ ಹುಕುಮು ಜಾರಿಯಲ್ಲಿದ್ದಾಗ ಚಾಂದಣಿ ಚೌಕಿನಲ್ಲಿ ಎಸ್ಪ್ಲನೇಡ ಉಪಹಾರ ಗೃಹದಲ್ಲಿ ರವಿವಾರ ರಾತ್ರಿ ಇಬ್ಬರು ಕಾರಿನಿಂದ ಇಳಿದು ಒಳಗೆ ಹೊಕ್ಕರು. ಒಬ್ಬನು ಅಂಗಡಿಯೊಡೆಯನಿಗೆ ಗುಂಡಿನಿಂದ ಹೊಡೆದನು. ಮತ್ತೊಬ್ಬನು ರೋಖ ಹಣ ತೆಗೆದುಕೊಂಡನು. ಇಬ್ಬರೂ ಅಪರಾಧಿಗಳು ಕಾರಿನಲ್ಲಿ ಕುಳಿತು ಪಾರಾಗಿ ಹೋದರು.

ಮಧ್ಯಪ್ರಾಂತ

೧೯೪೨ ರ ಗಲಭೆಯಲ್ಲಿ ಪೋಲೀಸರು ನಡೆಸಿದ ಅತ್ಯಾಚಾರಗಳ ವಿಚಾರಣೆ ನಡೆಸಬೇಕೆಂದು ಸುಭದ್ರಾ ಕುಮಾರಿ ಚವ್ಹಾಣ ಎಂ ಎಲ್ ಎ ಇವರು ಮಧ್ಯಪ್ರಾಂತ ಶಾಸನ ಸಭೆಯಲ್ಲಿ ಗೊತ್ತುವಳಿ ಮಂಡಿಸಿದ್ದಾರೆ.

ಮಧ್ಯಪ್ರಾಂತ ಮತ್ತು ವರ್ಹಾಡದಲ್ಲಿರುವ ಸುಭಾಸ ಸೈನಿಕರ ಪರಿಷತ್ತು ಜೂನ ೧೦-೧೧ ಕ್ಕೆ ಕೂಡುವದು.

ಮದ್ರಾಸ

ಮದ್ರಾಸದಲ್ಲಿ ಈಗಿರುವ ಶಾಸನ ಸಭಾ ಮಂದಿರವು ತೀರ ಸಂಕುಚಿತವಿದ್ದುದರಿಂದ ಹೊಸ ಭವನವನ್ನು ಕಟ್ಟಿಸಬೇಕೆಂದು ಸರಕಾರಕ್ಕೆ ಹಲವರು ಸೂಚಿಸಿದ್ದಾರೆ. ಮೌಂಟರೋಡಿನಲ್ಲಿರುವ ಸರಕಾರಿ ಬಯಲು ಜಾಗೆಯಲ್ಲಿ ಈ ಹೊಸ ಕಟ್ಟಡವನ್ನು ಕಟ್ಟಿಸಲಿರುವರು.

ಇದೇ ಜೂನ ಮತ್ತು ಜುಲೈ ತಿಂಗಳಲ್ಲಿ ಸರಕಾರಕ್ಕೆ ರೈತರು ಅಕ್ಕಿ ಮಾರಿದರೆ ಒಂದೊಂದು ಮಣಕ್ಕೆ ಒಂದೊಂದು ರೂಪಾಯಿ ಬೋನಸ್ಸು ಕೊಡುವದಾಗಿ ಮದ್ರಾಸ ಸರಕಾರದವರು ಪ್ರಕಟಿಸಿರುವರು. ಈ ಸಂಬಂಧದಲ್ಲಿ ಸರಕಾರಕ್ಕೆ ೫೪ ಲಕ್ಷ ರೂಪಾಯಿ ವೆಚ್ಚ ಬರುವದೆಂದು ಅಂದಾಜು ಮಾಡಲಾಗಿದೆ.

ಮದ್ರಾಸ ಹೋಟೆಲ ಕೆಲಸಗಾರರ ಬೇಡಿಕೆಗಳನ್ನು ಮಧ್ಯಸ್ತಿಕೆಗೆ ಒಪ್ಪಿಸಲು ಒಡೆಯರು ಸಿದ್ಧರಾದ್ದರಿಂದ ಕೆಲಸಗಾರರು ಸಂಪು ನಿಲ್ಲಿಸಿದ್ದಾರೆ. ಹತ್ತು ದಿನಗಳ ವರೆಗೆ ಸಂಪು ನಡೆದಿದ್ದಿತು.

ಮದ್ರಾಸ ಪ್ರಾಂತಕ್ಕೆ ಘಟನಾ ಸಮಿತಿಯಲ್ಲಿ ೪೯ ಸ್ಥಾನಗಳು ದೊರೆಯುತ್ತಿದ್ದು ಅದರಲ್ಲಿ ಮುಸಲ್ಮಾನರಿಗೆ ೪ ಸ್ಥಾನಗಳು ಸಿಕ್ಕುವವು.

ಬಂಗಾಲ

ಬಂಗಾಲ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಪರವಾಗಿ ೨ ನೇ ತಾರೀಕು ಸಭೆಸೇರಿ ಬರಗಾಲ ದಿನವನ್ನಾಚರಿಸಲಾಯಿತು. ಮತ್ತೊಂದು ಬರಬಿದ್ದರೆ ಜನರು ಅದನ್ನು ಸಹಿಸಲಾರರೆಂದು ಸರಕಾರಕ್ಕೆ ಎಚ್ಚರಿಕೆಯನ್ನೀಯಲಾಯಿತು.

ಬಂಗಾಲ ಶಾಸನ ಸಭೆಯ ಚುನಾವಣಿಗೆ ಹುರಿಯಾಳಾಗಿ ನಿಂತವರಲ್ಲಿ ೧೯೬ ಜನರು ಚುನಾವಣೆಯ ಖರ್ಚಿನ ಲೆಕ್ಕಪತ್ರ ಒಪ್ಪಿಸದಿದ್ದುದರಿಂದ ಅವರನ್ನು ಹುರಿಯಾಳಾಗಿ ನಿಲ್ಲಲಿಕ್ಕೆ ಮತದಾನ ಮಾಡಲಿಕ್ಕೆ ಅನರ್ಹರನ್ನಾಗಿ ಮಾಡಲಾಗಿದೆಂದು ಸರಕಾರಿ ಗ್ಯಾಝೆಟನಲ್ಲಿ ಪ್ರಕಟಿಸಲಾಗಿದೆ.

ಬಿಹಾರ

ಬಿಹಾರದಲ್ಲಿ ಪ್ರೌಢಶಿಕ್ಷಣದ ಪ್ರಚಾರಕ್ಕಾಗಿ ಸರಕಾರದವರು ೧೨೦೦೦ ವಾಚನಾಲಯಗಳನ್ನು ಪ್ರಾರಂಭಿಸಲು ನಿರ್ಧರಿಸಿದ್ದಾರೆ. ಪ್ರತಿಯೊಂದು ಜಿಲ್ಹೆಯಲ್ಲಿ ಒಂದೊಂದು ವಿಷಯದ ಪುಸ್ತಕಗಳನ್ನು ಸಂಗ್ರಹಿಸಲಾಗುವದು. ಕೇಂದ್ರ ವಾಚನಾಲಯವನ್ನು ಪಾಟಣಾದಲ್ಲಿ ಸ್ಥಾಪಿಸಲಾಗುವದು.

ಬಿಹಾರ ಮಂತ್ರಿಮಂಡಳ ಮತ್ತು ಗವರ್ನರರಲ್ಲಿ ಮತಭೇದವಾಗಿದೆಂದು ಹಬ್ಬಿದ ಸುದ್ದಿ ನಿರಾಧಾರವಾಗಿದೆಂದು ಮುಖ್ಯಮಂತ್ರಿ ಶ್ರೀಕೃಷ್ಣಸಿಂಹರು ಸಾರಿದ್ದಾರೆ. ಗವರ್ನರರು ಹೊಸಬರಿದ್ದುದರಿಂದ ಕೈದಿಗಳ ಬಿಡುಗಡೆಯ ಪ್ರಶ್ನೆ ಸ್ವಲ್ಪ ವಿಲಂಬವಾಗಹತ್ತಿದೆಂದು ಅವರು ಹೇಳಿದರು.

ಬಿಹಾರ ಕಾಂಗ್ರೆಸ ಕಮಿಟಿಯ ಸಭೆ ಸೇರಿ ಡಾ. ರಾಜೇಂದ್ರಪ್ರಸಾದರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ತಮ್ಮ ಕಾರ್ಯಕಾರೀ ಮಂಡಳವನ್ನಾರಿಸಿಕೊಳ್ಳಲು ಅವರಿಗೇ ಅಧಿಕಾರ ಕೊಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಮಕ್ಕಳ ಕೂಟ

ದಕ್ಷಿಣ ಕನ್ನಡ ಜಿಲ್ಲಾ ಮಕ್ಕಳ ಕೂಟದ ಮೊದಲನೆ ಅಧಿವೇಶನ ಇದೇ ಮೇ ೨೭-೨೮-೨೯ ನೇ ತಾರೀಕು ಉಡುಪಿಯ ಹಾಯರ ಎಲಿಮೆಂಟರಿ ಸಾಲೆಯಲ್ಲಿ ಜರುಗಿತು. ೨೭ ನೇ ತಾರೀಕು ಶ್ರೀಮತಿ ರಾಧಾಬಾಯಿಯವರಿಂದ ರಾಷ್ಟ್ರ ಧ್ವಜಾರೋಹಣ ನೆರವೇರಿತು ಪರಿಷತ್ತು ಪ್ರಾರಂಭವಾಯಿತು. ಶ್ರೀ ಎನ್ ರಾಜಗೋಪಾಲ ಕೃಷ್ಣರಾಯರು ಅಧ್ಯಕ್ಷಾಸನದಲ್ಲಿ ವಿರಾಜಮಾನರಾಗಿದ್ದರು. ಶ್ರೀ ನರಸಿಂಹನ ಸ್ವಾಗತ ಭಾಷಣ ಮಾಡಿದನು. ಬಿ ರಾಮಕೃಷ್ಣ ಆಚಾರ್ಯರು ದೀರ್ಘ ಭಾಷಣಮಾಡಿ ಮಕ್ಕಳ ಬೆಳವಣಿಗೆಗೆ ಶೀಲ ವಿನಯ ವ್ಯಾಯಾಮದ ಅವಶ್ಯಕತೆ ಉಪಯೋಗ ಮುಂತಾದವುಗಳ ಸಮಯೋಚಿತ ಭಾಷಣ ಮಾಡಿದರು. ವಿದ್ವಾನ್ ಕೆ ಕುಪ್ಪಣ್ಣಾಚಾರ್ಯ ಮಕ್ಕಳ ಚಟವಟಿಕೆ ತರಬೇತು ಏಳಿಗೆಯ ಮಾರ್ಗ ಮುಂತಾದ್ದನ್ನು ವಿವರಿಸಿದರು. ಅಧ್ಯಕ್ಷರು ಮಕ್ಕಳ ಬೆಳವಣಿಗೆಯ ಬಗ್ಗೆ ಉದ್ಬೋಧಕ ಭಾಷಣಮಾಡಿ ಬಳಿಕ ಶ್ರೀ ಬೇಂದ್ರೆಯವರ ಕವಿತಾ ವಾಚನ ವಿವಿಧ ವಿನೋದಾವಳಿ ಮುಗಿದು ಮೊದಲನೆ ದಿನದ ಕಾರ್ಯಕ್ರಮ ಕೊನೆಗಂಡಿತು.

ಎರಡನೆ ದಿನ ಮುಂಜಾನೆ ೯ ಗಂಟೆಗೆ ವಾಚನ ಸ್ಪರ್ಧೆ ಜರುಗಿತು. ಮಧ್ಯಾನ್ಹ ೩॥ ಗಂಟೆಗೆ ಶ್ರೀ ಕೆ. ವೆಂಕಟರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ ಪ್ರಾರಂಭವಾಯಿತು. ಶ್ರೀ ಕೊರಡಕಲ್ ಶ್ರೀ ನಿವಾಸರಾಯರು ಭಾಷಣ ಮಾಡಿದರು. ಶ್ರೀ ವಿಠ್ಠಲ ಶೆಣೈಯವರು ಮಕ್ಕಳ ಸಾಹಿತ್ಯದ ಬಗ್ಗೆ ಬೋಧಪ್ರದ ಭಾಷಣ ಮಾಡಿದರು ಅಧ್ಯಕ್ಷರು ತಮ್ಮ ಗಂಭೀರ ಭಾಷಣದಲ್ಲಿ ಮಕ್ಕಳ ಜೀವನವು ಹೇಗೆ ಸುಸೂತ್ರ ಸಾಗಬೇಕು ಸತ್ಪ್ರಜೆಯಾಗಬಹುದೆಂಬುದನ್ನು ವಿವರಿಸಿದರು. ನೃತ್ಯ ಮೊದಲಾದ ಕಾರ್ಯಕ್ರಮದೊಂದಿಗೆ ಕಾರ್ಯಕ್ರಮ ಕೊನೆಗಂಡಿತು.

ಸಮ್ಮೇಲನದ ಕೊನೆಯ ದಿನ ಭಾಷಣ ಸ್ಪರ್ಧೆ ನಡೆಯಿತು. ಮಧ್ಯಾಹ್ನ ೩ ಗಂಟೆಗೆ ಮಾಡರ್ನ ಸಾಲೆಯಿಂದ ಮಕ್ಕಳ ರಾಷ್ಟ್ರಧ್ವಜದ ಮೆರವಣಿಗೆ ನಗರವನ್ನು ಸುತ್ತಿ ಬಂದಿತು. ಮೆರವಣಿಗೆ ಸಮ್ಮೇಲನ ಭವನಕ್ಕೆ ಬಂದ ಕೂಡಲೆ ಅಸಂಖ್ಯ ಹೆತ್ತವರು ಅವರನ್ನು ಸ್ವಾಗತಿಸಿದರು. ಎಂ. ವಿಠ್ಠಲ ಹೆಗ್ಡೆಯವರು ಸಭಾಧಿಪತಿಗಳಾಗಿ ಆರಿಸಲ್ಪಟ್ಟರು. ಶ್ರೀ ಮುಖ್ಯಪ್ರಾಣ ತಂತ್ರಿಯವರು ಮಕ್ಕಳಲ್ಲಿ ನವಜಾಗ್ರತೆಯ ಬಗ್ಗೆ ಉದ್ಬೋಧಕ ಭಾಷಣ ಮಾಡಿದರು. ಯುವಕರಾದ ನಾರಾಯಣಭಟ್ಟರು ಮಕ್ಕಳ ಆರೋಗ್ಯ ತರಬೇತಿಯ ಬಗ್ಗೆ ಹೇಳಿದರು. ಅನಂತರ ಗಾಯನ, ಕವಿತಾ ವಾಚನ ವಾದನ ಮೊದಲಾದ ಕಾರ್ಯಕ್ರಮಗಳು ಜರುಗಿದವು. ಕೂಟದ ಅಧ್ಯಕ್ಷ ಶ್ರೀ ಬಿ ಅನಂತಯ್ಯ ಶೆಟ್ಟರು ಸಮ್ಮೇಲನದಲ್ಲಿ ಸಹಕರಿಸಿದ ಎಲ್ಲ ಮಹನೀಯರ ಆಭಾರ ಮನ್ನಿಸಿದರು. ಅನಂತರ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಮಂಗಲ ಗೀತೆಯೊಡನೆ ಸಮ್ಮೇಲನ ಮುಕ್ತಾಯವಾಯಿತು.

ಮಹತ್ವದ ಸೂಚನೆ

ಅಂಚೆ ತಿಕೀಟ ಹಚ್ಚದೆ ನಮ್ಮ ವಾರಪತ್ರಿಕೆಗಳನ್ನು ಕಳಿಸುವದಕ್ಕಾಗಿ ನಾವು ಲಾಯಸೆನ್ಸ ಪಡೆದಿರುತ್ತೇವೆ. ನಮ್ಮ ಲಾಯಸೆನ್ಸ ನಂಬರ ೩ ಇದೆ. ಇದನ್ನು ನಮ್ಮ ವಾರಪತ್ರಿಕೆಯ ಮೇಲೆ ಮುದ್ರಿಸಿರುತ್ತೇವೆ. ಈ ಲಾಯಸೆನ್ಸಪ್ರಕಾರ ನಾವು ಸೋಮವಾರ ತಾರೀಖು ೩-೬-೪೬ ರಿಂದ ವಾರಪತ್ರಿಕೆಗಳನ್ನು ತಿಕೀಟು ಹಚ್ಚದೆ ಕಳಿಸಲಿಕ್ಕೆ ಪ್ರಾರಂಭಿಸಿರುವೆವು.

ಅಂಚೆ ಅಧಿಕಾರಿಗಳು ಮತ್ತು ನಮ್ಮ ವಾಚಕರು ಇತ್ತ ಗಮನಿಸಬೇಕು. ಅಂಚೆ ತಿಕೀಟು ಇಲ್ಲೆಂದು "ನಾಟ ಪೇಡ" ಎಂದು ಅಂಚೆ ಅಧಿಕಾರಿಗಳು ತಪ್ಪಿ ಭಾವಿಸಿದರೆ ವಾಚಕರು ಈ ವಿಷಯವನ್ನು ಅವರ ಗಮನಕ್ಕೆ ತರಬೇಕು.

ಮ್ಯಾನೇಜರ
ಕರ್ಮವೀರ, ಹುಬ್ಬಳ್ಳಿ.

ಯುದ್ಧದ ಗಂಡಾಂತರ ವಿಮಾ ಕಾಯದೆಯನ್ನು ಮುಕ್ತಾಯಗೊಳಿಸುವ ಬಗ್ಗೆ ಮಂಡಿಸಲಾದ ಮಸೂದೆ ಮೈ. ಪ್ರಜಾಪ್ರತಿನಿಧಿ ಸಭೆಯಲ್ಲಿ ೩೪ ವಿರುದ್ಧ ೧೫೯ ಮತಗಳಿಂದ ಬಿದ್ದು ಹೋಯಿತು. ವರಮಾನ ತೆರಿಗೆಯ ತಿದ್ದುಪಡಿ ಮಸೂದೆ ೪೮ ವಿರುದ್ಧ ೧೮೦ ಮತಗಳಿಂದ ಬಿದ್ದು ಹೋಯಿತು ಮೈಸೂರ ಮೋಟರ ವಾಹನಗಳ ಸಂಬಂಧದಲ್ಲಿ ತಂದಮಸೂದೆಯೂ ಬಿದ್ದು ಹೋಯಿತು. ಮೂರನೇ ಮಸೂದೆಯೂ ಬಿದ್ದು ಹೋಯಿತು.

ಮೈಸೂರ ಸರಕಾರದವರು ನಮ್ಮ ಬೇಡಿಕೆಗಳನ್ನು ಮನ್ನಿಸದಿದ್ದರೆ ಹೊಣೆಗಾರ ಸರಕಾರ ಸ್ಥಾಪನೆಗಾಗಿ ಕಾಂಗ್ರೆಸ್ಸು ಹೋರಾಟ ಹೂಡುವದೆಂದು ಮೈಸೂರು ಕಾಂಗ್ರೆಸ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ಹೇಳಿದರು.

ಮಧ್ಯಕಾಲ ಸರಕಾರದಲ್ಲಿ ಲೀಗಿನ ಪರವಾಗಿ ನವಾಬಜಾದಾ ಲಿಯಾಕತ ಅಲ್ಲೀಖಾನ, ಸರ್ ನಾಝೀಮುದ್ದೀನ, ಸರ್ ಫಿರೋಜಖಾನ, ಅಬ್ದುರ್‌ರಾಬನಿ ಶಿತಾರ ಮತ್ತು ನವಾಬ ಮಹಮ್ಮದ ಇಸ್ಮಾಯಿಲ್‌ರು ಅಧಿಕಾರ ವಹಿಸಬಹುದು.

ಅಂತರ್ ರಾಷ್ಟ್ರೀಯ

ಫ್ರ್ಯಾಂಕೋನ ಆಡಳಿತ ಜಾಗತಿಕ ಶಾಂತಿಗೆ ಗಂಡಾಂತರ

ಜಾಗತಿಕ ಭದ್ರತಾ ಮಂಡಳದವರು ಸ್ಪೇನದ ಜನರಲ್ ಫ್ರ್ಯಾಂಕೋನ ಆಡಳಿತ ಬಗೆಗೆ ವಿಚಾರಮಾಡಿ ವರದಿಯನ್ನೊಪ್ಪಿಸಲು ಉಪಸಮಿತಿಯನ್ನು ನಿಯಮಿಸಿದ್ದರಷ್ಟೆ. ಆಸಮಿತಿಯವರಿದೀಗ ತಮ್ಮ ವರದಿಯನ್ನೊಪ್ಪಿಸಿದ್ದು ಸ್ಪೇನದಲ್ಲಿಯ ಫ್ರ್ಯಾಂಕೋನ ಆಡಳಿತೆ ಜಾಗತಿಕ ಶಾಂತಿಗೇ ಗಂಡಾಂತರಪ್ರದವಾಗಿದೆಂದು ಅಭಿಪ್ರಾಯ ಪಟ್ಟಿದ್ದಾರೆ. ಅವನ ಆಡಳಿತ ನಾವಾಶೇಷವಾಗದಿದ್ದರೆ ಆರಾಷ್ಟ್ರದ ರಾಜಕೀಯ ಸಂಬಂಧವನ್ನು ಕಡಿದುಕೊಳ್ಳಬೇಕೆಂದು ಯುಕ್ತ ರಾಷ್ಟ್ರ ಸಭೆಯು ತನ್ನ ಸದಸ್ಯರಿಗೆ ಒತ್ತಾಯ ಮಾಡಬೇಕಾಗುವದೆಂದು ಈ ವರದಿಯಲ್ಲಿ ಸೂಚಿಸಲಾಗಿದೆ. ಸದ್ಯಕ್ಕೆ ಫ್ರ್ಯಾಂಕೋನ ಆಡಳಿತ ಶಾಂತಿಮಯವಾಗಿ ಸಾಗಿದ್ದರೂ ಭಾವೀ ಶಾಂತಿಗೆ ಗಂಡಾಂತರ ತಂದೊಡ್ಡುವ ಅಂಶಗಳು ಆ ಆಡಳಿತದಲ್ಲಿವೆಂದು ವರದಿಯಲ್ಲಿ ಖಂಡತುಂಡ ಹೇಳಲಾಗಿದೆ. ಅಸ್ಟ್ರೇಲಿಯದ ಪ್ರತಿನಿಧಿ ಡಾ. ಹರ್ಬರ್ಟ ಇವ್ಹ್ಯಾಟರು ಈ ಸಮಿತಿಯ ಚೇರಮನ್ನರಾಗಿದ್ದು ಅವರೂ ಈ ವರದಿಗೆ ಅಂಕಿತ ಹಾಕಿರುವರು. ಬ್ರಿಟನ್ ಅಮೇರಿಕ ಮತ್ತು ಫ್ರಾನ್ಸ ಈ ಮೂರು ರಾಷ್ಟ್ರಗಳು ಕಳೆದ ಮಾರ್ಚ ೪ ನೇ ತಾರೀಕಿಗೆ ಪ್ರಕಟನೆಯೊಂದನ್ನು ಹೊರಡಿಸಿ ಕೆಲವು ಕರಾರುಗಳನ್ನು ಸೂಚಿಸಿದ್ದರು. ಈ ಕರಾರುಗಳನ್ನು ಸ್ಪೇನ ಸರಕಾರ ಪೂರೈಸಿದಲ್ಲಿ ಸ್ಪೇನದಿಂದ ಗಂಡಾಂತರವಿಲ್ಲೆಂದು ತಿಳಿಯಬೇಕೆಂದು ಸೂಚಿಸಲಾಗಿತ್ತು. ಫ್ರ್ಯಾಂಕೋನ ಆಡಳಿತ ಹಿಂತೆಗೆದುಕೊಳ್ಳಲ್ಪಟ್ಟು ಆ ಕರಾರುಗಳು ಪೂರೈಸಲ್ಪಟ್ಟರೆ ಸ್ವತಂತ್ರ ಚುನಾವಣೆಯಿಂದ ಆಯ್ಕೆ ನಡೆದು ಸಂಸ್ಥಾನಿಕ ಸರಕಾರವು ಯುಕ್ತ ರಾಷ್ಟ್ರದ ಸುನ್ನಣೆಗಾಗಿ ಅರ್ಜಿ ಮಾಡಿಕೊಳ್ಳಬಹುದು ,ಅದನ್ನು ಸಹಾನುಭೂತಿಪೂರ್ವಕವಾಗಿ ವಿಚಾರಿಸಬಹುದು. ಈ ವರದಿಗೆ ಸಾಮಾನ್ಯವಾಗಿ ಎಲ್ಲ ಸದಸ್ಯರು ಸಹಿಮಾಡಿದ್ದಾರೆ. ಬ್ರಿಟಿಶ್ ಪ್ರತಿನಿಧಿಯಾದ ಸರ್ ಅಲೆಕ್ಸಂಡರ ಕ್ಯಾಡಗಾನರು ತಮ್ಮ ಭಿನ್ನಾಭಿಪ್ರಾಯದ ವರದಿಯಲ್ಲಿ ಸ್ಪೇನದಲ್ಲಿ ಆಡಳಿತ ಇರುವವರೆಗೆ ಅಲ್ಲಿನ ಪರಿಸ್ಥಿತಿ ಸುಧಾರಿಸುವದಿಲ್ಲೆಂದು ತಾವು ಮನಗಂಡಿದ್ದರೂ ಆ ಆಡಳಿತೆ ಅಂತರ್‌ರಾಷ್ಟ್ರೀಯ ಶಾಂತಿಗೆ ಗಂಡಾಂತರ ತರುವಷ್ಟು ದಾರಿ ತಪ್ಪಿಲ್ಲೆಂದು ಈಗಲಾದರೂ ಹೇಳಬಯಸುತ್ತೇವೆಂದು ಬರೆದಿರುವರು. ಸ್ಪೇನದ ಹೆಸರಿನಲ್ಲಿ ಎರಡೂ ಸರಕಾರಗಳೆಂದ ಮೇಲೆ ಅಲ್ಲಿ ಭೀಕರ ಗಂಡಾಂತರವೆಂದು ತಾನೇ ವ್ಯಕ್ತವಾಗುತ್ತದೆಂದು ಫ್ರ್ಯಾಂಕೋನ ವೈರಿಗಳು ಅಭಿಪ್ರಾಯ ಪಡುತಿರುವರು. ಈ ಉಪಸಮಿತಿಯ ವರದಿಯನ್ನು ನೋಡಿದರೆ ಫ್ರ್ಯಾಂಕೋನಿಗೆ ಉಳಿಗಾಲವಿಲ್ಲೆಂಬುದು ಸ್ಪಷ್ಟವಾಗುವದು.

ಡಚ್--ಇಂಡೋನೇಶಿಯಾ ಸಮಸ್ಯೆ

ಇಂಡೋನೇಶಿಯದ ಸಮಸ್ಯೆ ದಿನ ದಿನಕ್ಕೆ ಕಠಿನವಾಗುತ್ತ ನಡೆದಿದೆ. ಡಚ್‌ರು ಆದಕ್ಕೆ ಹಾಕಿದ ಕರಾರಗಳಿಗೆ ಇಂಡೋನೇಶಿಯದ ಪ್ರಮುಖರಾದ ಡಾ. ಶಹರೀರರು ಇನ್ನೂ ತಮ್ಮ ಪ್ರತಿ ಸೂಚನೆಗಳನ್ನು ಕಳಿಸಿರುವುದಿಲ್ಲ. ಆದರೆ ಡಚ್‌ರ ಸಾಮ್ರಾಜ್ಯದ ಧೋರಣ ನೋಡಿದರೆ ಇಂಡೋನೇಶಿಯದ ಸಮಸ್ಯೆ ಬಗ್ಗೆ ದೊಡ್ಡ ಯುದ್ಧವೇ ಆಗುವದೆಂದು ತೋರುತ್ತದೆ. ಈ ಯುದ್ಧದಿಂದ ಏಶಿಯ ವಿಶೇಷತಃ ನೈಋತ್ಯ ಏಶಿಯ ಮತ್ತು ಪಾಶ್ಚಾತ್ಯರ ಸಂಬಂಧ ನಿರ್ಣಯಿಸಲ್ಪಡುವುದು. ಈ ವರೆಗೆ ಬ್ರಿಟಿಶ್‌ರ ಸಲಹೆಯಿಂದ ಡಚ್ಚರು ಇಂಡೋನೇಶಿಯನ್‌ರ ಬಗ್ಗೆ ತಳೆದ ಧೋರಣವು ಕೇವಲ ಮೋಹಕವಾಗಿದ್ದು ಅದನ್ನು ಬಲೆಯಲ್ಲಿ ಕೆಡುಹಬೇಕೆಂಬ ಹಂಚಿಕೆಯದೇ ಆಗಿತ್ತೆಂದು ಹೇಳಬೇಕಾಗುವದು. ಆದರೆ ಇಂಡೋನೇಶಿಯನ್‌ರು ಈ ಬಲೆಯಲ್ಲಿ ಬೀಳದ್ದರಿಂದ ಈಗ ತಿಕ್ಕಾಟಕ್ಕೆ ಅವಕಾಶ ಸಿಕ್ಕಂತಾಗಿದೆ. ಡಾ. ಶಹರೀರರು ಎಷ್ಟೇ ಸೌಮ್ಯ ಮತ್ತು ಮಿತ್ರತ್ವದ ಧೋರಣವನ್ನು ವಹಿಸಿದರೂ ಮೂಲಭೂತ ಹಕ್ಕುಬಾಧ್ಯತೆಗಳನ್ನು ಬಿಟ್ಟುಗೊಡಲು ಇಂಡೋನೇಶಿಯನ್‌ರು ಸಿದ್ಧರಾಗಲಾರರೆಂಬುದು ಸ್ಪಷ್ಟವಿದೆ. ಇಂಡೋನೇಶಿಯದ ಚಳವಳಿಯನ್ನು ಹತ್ತಿಕ್ಕಲು ಅಲ್ಲಿಳಿದ ಬ್ರಿಟಿಶ್ ಸೈನ್ಯ ಎಂದಿಗೂ ಯಶಸ್ವಿಯಾಗದು. ಡಾ. ವಾನಮೂಕರ ಉದ್ದೇಶವೀಗ ಇಂಡೋನೇಶಿಯನ್‌ರಿಗೆ ತಿಳಿದಿದ್ದು ಇನ್ನು ಮುಂದೆ ಅವರ ಮೋಹಕ ಮಾತುಗಳಿಗೆ ಅವರು ಬಲೆಬೀಳುವಂತಿಲ್ಲ. ಇವೆರಡು ರಾಷ್ಟ್ರಗಳಲ್ಲಿನ ತಿಕ್ಕಾಟ ನಿಲ್ಲಿಸಬೇಕಾದರೆ ಜಾಗತಿಕ ಶಾಂತತಾಮಂಡಲಡವರು ಪ್ರಯತ್ನಿಸಲಿಕ್ಕೆ ಬೇಕು. ಜಾಗತಿಕ ಶಾಂತಿ ಮತ್ತು ಪ್ರಜಾಪ್ರಭುತ್ವದ ಹೆಸರಿನಲ್ಲಿ ಸ್ಥಾಪಿತವಾದ ಮಂಡಳವು ಈ ಸಮಯದಲ್ಲಿ ಇಂಡೋನೇಶಿಯನ್‌ರಿಗೆ ನ್ಯಾಯವನ್ನು ದೊರಕಿಸಿ ಕೊಡದಿದ್ದರೆ ಸಂಸ್ಥೆಯ ಸದುದ್ದೇಶದ ಬಗ್ಗೆ ದುರ್ಬಲ ರಾಷ್ಟ್ರಗಳಿಗೆ ಸಂಶಯ ಬರದೇಇರದು. ಆದರೆ ಈ ಮಂಡಳದ ಈ ವರೆಗಿನ ಧೋರಣವನ್ನು ನೋಡಿದರೆ ಇಂಡೋನೇಶಿಯನ್‌ರು ಸ್ವಾತಂತ್ರ್ಯ ರಕ್ಷಣೆಗಾಗಿ ಹೋರಾಟವನ್ನೇ ಹೂಡುವ ಪ್ರಸಂಗ ಇದೆಂದು ಹೇಳಬೇಕಾಗುವುದು.

ದುರ್ಬಲ ಸಯಾಮು

ಫ್ರಾನ್ಸವು ಅನ್ಯಾಯವಾಗಿ ಸಯಾಮುದ ಮೇಲೆ ಮಾಡಿದ ಆಕ್ರಮಣದಿಂದ ಪ್ರಬಲ ರಾಷ್ಟ್ರಗಳ ಆಕ್ರಮಕ ಧೋರಣದ ಮೇಲೆ ಸ್ವಚ್ಛ ಪ್ರಕಾಶ ಬೀಳುವದು ಸಯಾಮು ಸರಕಾರದವರು ಫ್ರೆಂಚರ ಈ ಆಕ್ರಮಕಧೋರಣವನ್ನು ತಡೆಯುವುದಕ್ಕಾಗಿ ಯುಕ್ತ ರಾಷ್ಟ್ರ ಮಂಡಲಕ್ಕೆ ಬಿನ್ನವಿಸಿಕೊಳ್ಳಬೇಕೆಂದು ಮಾಡಿದ್ದರು. ಆದರೀಗ ಪರಕೀಯ ಒತ್ತಾಯಕ್ಕೊಳಗಾಗಿ ಅವರು ತಮ್ಮ ಧೋರಣವನ್ನು ಬದಲು ಮಾಡಿದಂತೆ ತೋರುವುದು. ತಾವೇನು ಆ ಬಗೆಗೆ ಈಗಲೆ ಯುಕ್ತ ರಾಷ್ಟ್ರಗಳಿಗೆ ತಕರಾರು ಮಾಡುವದಿಲ್ಲವಾಗಿ ಸಯಾಮು ಸರಕಾರ ಸಾರಿದೆ. ಜಾಗತಿಕ ಮಂಡಲದ ಸೈನಿಕರೊಡನೆ ಯಾವದೇ ಬಗೆಯ ತಿಕ್ಕಾಟ ನಡೆಸಬೇಡಿರೆಂದೂ ಅಲ್ಲಿನ ತಮ್ಮ ಸೈನ್ಯಕ್ಕೆ ವಿಧಿಸಿದ್ದಾರೆ. ವಿಚಿ ಸರಕಾರವು ಸಯಾಮುದಲ್ಲಿ ಗಳಿಸಿದ ಪ್ರದೇಶದ ಬಗ್ಗೆ ಫ್ರೆಂಚರ ತಿಕ್ಕಾಟವಿದ್ದರೆ ಸಯಾಮು ಸರಕಾರದವರು ಆ ಪ್ರಶ್ನೆಯನ್ನು ಆಂಗ್ಲೊ-ಅಮೇರಿಕನ್‌ರ ಮಧ್ಯಸ್ತಿಕೆಗೆ ಒಪ್ಪಿಸಲು ಸಿದ್ಧರಿರುವರು. ಶಾಂತ ಮತ್ತು ನ್ಯಾಯ್ಯ ಮಾರ್ಗದಿಂದ ಈ ಪ್ರಶ್ನೆಯ ನಿರ್ಣಯವಾಗಲೆಂದೂ ಅದರ ಬೇಡಿಕೆ. ಸಯಾಮುದ ಈ ಸೂಚನೆ ಸಮಂಜಸವಾಗಿದ್ದು ಫ್ರೆಂಚ ಸರಕಾರವು ಮನ್ನಿಸುವಂತಹದಿದೆ.


ರಶಿಯದ ಧೋರಣೆ

ರಶಿಯದ ಪರರಾಷ್ಟ್ರ ಧೋರಣೆಯ ಬಗ್ಗೆ ಬ್ರಿಟಿಶ ಕಾಮನ್ಸ ಸಭೆಯಲ್ಲಿ ಚರ್ಚೆ ನಡೆದಿದೆ. ಬ್ರಿಟಿಶ್‌ಪರರಾಷ್ಟ್ರಮಂತ್ರಿ ಬೆವಿನ ಹಿಂದಿನ ಮುಖ್ಯ ಮಂತ್ರಿ ಚರ್ಚಿಲ್ ಮೊದಲಾದವರು ರಶಿಯದ ಧೋರಣವನ್ನು ಖಂಡಿಸಿ ಅವರ ಧೋರಣದಿಂದ ಜಗತ್ತಿಗೇ ಹೇಗೆ ಗಂಡಾಂತರದ ಭೀತಿಯುಂಟಾಗಿದೆಂಬುದನ್ನು ಪ್ರತಿಪಾದಿಸಿದ್ದಾರೆ. ಬ್ರಿಟಿಶ್ ಪರರಾಷ್ಟ್ರ ಮಂತ್ರಿ ಬೆವಿನ್‌ರು ಈ ಚರ್ಚೆಯನ್ನು ಪ್ರಾರಂಭಿಸುತ್ತ ಯುರೋಪಿಯನ ಸಮಸ್ಯೆ ಪರಿಹಾರದಲ್ಲಿ ರಶಿಯವು ಮನಸ್ಸಿನಿಂದ ಸಹಕರಿಸಿದ್ದಾದರೆ ಮಾತ್ರ ಅದು ಶಕ್ಯವಾಗಿದೆಂದು ಅಭಿಪ್ರಾಯ ಪಟ್ಟರು. ‘ಆದರೆ ರಶಿಯದ ಪದ್ಧತಿಯೆ ನಿಜವಾದ ಪ್ರಜಾಪ್ರಭುತ್ವ ಪದ್ಧತಿಯಾಗಿದ್ದು ಉಳಿದ ಪದ್ಧತಿಗಳು ಫೆಸಿಸ್ಟ ಪದ್ಧತಿಯವಾಗಿವೆಯೆಂದು ರಶಿಯನ ಭಾಷಣ ಮತ್ತು ಲೇಖನಗಳಿಂದ ಸ್ಪಷ್ಟವಾಗಿದೆಂದು ಬೆವಿನ್‌ರು ಹೇಳಿದರು. ಈ ಬಗೆಯ ಧೋರಣೆ ಜಾಗತಿಕಶಾಂತಿಗೆ ಗಂಡಾಂತರಪ್ರದವಾಗಿದೆಂದು ಬೆವಿನ್‌ರು ಹೇಳಿದರು. ನಾವೇನು ಯಾರ ಮೇಲೆಯೂ ನಮ್ಮ ಅಧಿಕಾರ ನಡೆಸಬಯಸುವದಿಲ್ಲ. ಆದರೆ ನಾವು ಸಮಂಜಸ ರೀತಿಯಿಂದ ಮುಂದೆ ಮಾಡಿದ ಅಭಿಪ್ರಾಯಗಳ ಬಗ್ಗೆ ಪೂರ್ಣ ವಿಚಾರ ಮಾಡಿರೆಂದಿಷ್ಟೇ ಹೇಳಿಕೊಳ್ಳುತ್ತೇವೆಂದು ಬೆವಿನ್‌ರು ಹೇಳಿದರು.

ಜಾಗತಿಕ ಯುದ್ಧದ ಬೀಜ

ರಶಿಯ ಈ ಧೋರಣೆಯಿಂದ ಜಾಗತಿಕ ಯುದ್ಧದ ಬೀಜ ಬಿತ್ತುತಿದೆಂದು ಹಿಂದಿನ ಮುಖ್ಯ ಮಂತ್ರಿ ಚರ್ಚಿಲರು ತಮ್ಮ ಭಾಷಣದಲ್ಲಿ ಹೇಳಿದರು. ರಶಿಯದ ಕಬ್ಬಿಣಪಡದೆ ಬಾಲ್ಟಿಕ್‌ದಿಂದ ಆಡ್ರಿಯಾಟಿಕಕ್ಕೆ ಇಳಿದದ್ದಲ್ಲದೆ ಅದರ ಹಿಂದೆ ರಶಿಯದ ಹೊರತಾಗಿ ಯುರೋಪಿನ ಜನಸಂಖ್ಯೆಯ ೧।೩ ಸಂಖ್ಯೆಯೊಳಗೊಂಡ ವಿಶಾಲವಾದ ಪ್ರದೇಶವಿರುವದೆಂದು ಜರ್ಮನಿಯ ಸೋವಿಯೆಟ ಆಕ್ರಮಣ ಪ್ರದೇಶವನ್ನು ಸೋವಿಯೆಟದಲ್ಲಿ ರೂಪಾಂತರಿಸಲು ಪ್ರಯತ್ನ ನಡೆದಿದೆಯೆಂದೂ ಅವರು ನುಡಿದರು. ನಮಗೆ ಸೌಹಾರ್ದದ ಹೊರತು ರಶಿಯದಿಂದ ಹೆಚ್ಚಿಗೇನು ಬೇಕಾಗಿಲ್ಲ. ನಾವು ಅದರ ನ್ಯಾಯ್ಯವಾದ ಹಕ್ಕುಗಳ ರಕ್ಷಣೆ ಹಾಗು ಭದ್ರತೆಗಾಗಿ ಶಕ್ಯವಿದ್ದ ಸಹಾಯ ಮಾಡುವೆವೆಂದು ಚರ್ಚಿಲರು ನುಡಿದರು. ಅಮೇರಿಕೆಯನ್ನು ಸಿಟ್ಟಿಗೆಬ್ಬಿಸುತ್ತ ಹೋಗುವದರಲ್ಲಿ ರಶಿಯದ ಹಿತವಿಲ್ಲ. ಈ ದೇಶದಲ್ಲಿ ಸಹ ರಶಿಯದ ಪ್ರಚಾರ ಈಗ ಬಹಳ ನಡೆದಿದೆಂದು ಚರ್ಚಿಲರು ಗುಣಗುಟ್ಟಿದರು. ಬ್ರಿಟಿಶ ಕಮ್ಯುನಿಸ್ಟರಿಗೆ ಮಾಸ್ಕೋದಿಂದ ಅಜ್ಞೆಗಳು ಬರುತಿರುವವೆಂದೂ ರಶಿಯಾವು ಯುದ್ಧದಲ್ಲಿ ಸೇರಿದ ಕೂಡಲೆ ಅವರ ಧೋರಣ ಬದಲಾಗುತಿದೆಂದೂ ನುಡಿದರು. ಕಮ್ಯುನಿಸ್ಟರು ಇದಕ್ಕೆ ಆಕ್ಷೇಪವೆತ್ತಿ ಯುದ್ಧದಲ್ಲಿ ಕಮ್ಯುನಿಸ್ಟರು ತಮ್ಮ ಕರ್ತವ್ಯ ಮಾಡಿಲ್ಲೆಂಬುದಕ್ಕೆ ಚರ್ಚಿಲ್ಲರು ಪುರಾವೆ ಕೊಡಬೇಕೆಂದು ಆಹ್ವಾನಿಸಿದರು.

ಮುಖ್ಯ ಮಂತ್ರಿ ಅ್ಯಟ್ಲೀಯವರು ಮಾತಾಡುತ್ತ ರಶಿಯನ್‌ರಿಗೆ ಕೆಲ ಮಾತುಗಳನ್ನು ಹೇಳಿದರು. ಬ್ರಿಟನದಂಥ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಎಲ್ಲರಿಗೂ ಭಾಷಣ, ಲೇಖನ ಸ್ವಾತಂತ್ರ್ಯವಿದ್ದುದರಿಂದ ರಶಿಯದ ಇಲ್ಲವೆ ಬೇರೆ ರಾಷ್ಟ್ರದ ಧೋರಣೆಯನು ಟೀಕಿಸಲು ಮುಕ್ತದ್ವಾರ ಅಷ್ಟರಿಂದ ಸರಕಾರದ ಧೋರಣ ಅದೇ ಬಗೆಯದಾಗಿದೆಂದು ತಿಳಿಯಬಾರದು. ರಶಿಯನ್‌ರು ನಮ್ಮಗೂಡ ವಿಚಾರ ವಿನಿಮಯ ಮಾಡಿ ಏನೆಂಬುದನ್ನು ನಿರ್ಧರಿಸಿಕೊಳ್ಳಬೇಕು. ಇದು ಅತ್ಯವಶ್ಯವಾಗಿದೆ. ಅ್ಯಟ್ಲೀಯವರು ತಮ್ಮ ಭಾಷಣದಲ್ಲಿ ರಶಿಯನ್ನರು ಗುಡ್ಡಗಾಡ ಪ್ರದೇಶದಲ್ಲಿ ಹುಟ್ಟಿ ಬೆಳದಿರುವರೇದೂ ಗಾಳಿ ಬೆಳಕು ಸ್ವಾತಂತ್ರ್ಯವನ್ನನುಭವಿಸಿಲ್ಲೆಂದೂ ಆಧುದ್ದರಿಂದ ಅವರು ತಪ್ಪುತಿಳುವಳಿಕೆಗೆ ಅವಕಾಶಕೊಡದೆ ಪರಸ್ಪರ ತಿಳಿವಳಿಕೆ ಮಾಡಿಕೊಳ್ಳಬೇಕೆಂದೂ ನುಡಿದರು. ಈ ರೀತಿಯಾಗಿ ರಶಿಯದ ಧೋರಣದ ಬಗ್ಗೆ ಬ್ರಿಟಿಶ ಸರಕಾರದವರು ಸಂತಪ್ತರಾಗಿರುವರೆಂಬುದು ಸುಸ್ಪಷ್ಟವಾಗುವುದು. ಇವೆಲ್ಲ ರಾಷ್ಟ್ರಗಳಿಗೆ ಸ್ವಾರ್ಥ ಅಡ್ಡ ಬರುವುದರಿಂದ ಹೀಗೆ ಪರಸ್ಪರ ಸಂಶಯ ಅವಿಶ್ವಾಸಕ್ಕೆ ಅವಕಾಶ ಸಿಕ್ಕುವುದು ಜಾಗತಿಕ ಶಾಂತಿಗೆ ಅನವಶ್ಯಕ ಭಂಗವುಂಟಾಗುವದು.



ಮುಂಬಯಿ ಶೇರ ಪೇಟೆ

ತಾ. ೭

ಕಳೆದ ವಾರಾಂತ್ಯದಲ್ಲಿ ಶೇರಪೇಟೆಯಲ್ಲಿ ಮಾರಾಟ ಜೋರಿನಿಂದ ಸಾಗಿತು. ಟಾಟಾ ಡೆಫರ್ಡ ೩೧೦೫ ರಿಂದ ಪ್ರಾರಂಭವಾಗಿ ೩೦೮೨/೮ ಕ್ಕಿಳಿಯಿತು. ಮುಂದೆ ಅದು ೩೯೯೦ ರ ಸುತ್ತಲೂ ಸುಳಿದಾಡಹತ್ತಿತು. ಆರ್ಡಿನರಿ ಶೇರುಗಳು ಇಳಿದವು. ಜವಳಿ ಗಿರಣಿ ಶೇರುಗಳ ಮಾರಾಟವೂ ಜೋರಾಗಿ ನಡೆಯಿತು. ಬಾಂಬೆ ಡಾಯಿಂಗ ೨೬೧೫ ರಿಂದ ಪ್ರಾರಂಭವಾಗಿ ೨೩ ರೂ. ಕಡಮೆಯಾಯಿತು. ಆದರೆ ಮುಂದೆ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಿಸಿದಂತಾಗಿ ೨೬೦೦ ರ ಸುತ್ತಲೂ ಸುಳಿದಾಡಹತ್ತಿತು. ನಾಗಪುರ ಗೋಕಾಕ ಪಿನ್ಲೆ ಕೋಹಿನೂರ ಸ್ವದೇಶಿ ಸಿಂಪ್ಲೆಕ್ಸ ಮತ್ತು ಸ್ವಾನ ಗಿರಣಿಗಳ ಶೇರುಗಳೂ ಇಳಿದವು. ಅನುಕ್ರಮವಾಗಿ ಅವುಗಳ ದರ ೪೯೦, ೪೦೮, ೪೬೮, ೯೭೫, ೮೪೨, ೪೫೧ ಮತ್ತು ೫೦೬ ಇದ್ದವು.

ಬ್ಯಾಂಕು ಹಾಗು ವಿಮೆಯ ದರಗಳು ಹಿಮ್ಮೆಟ್ಟವು. ಸಿಂದ್ಯೇಕ್ಕೆ ಏನೋ ಸ್ವಲ್ಪ ಬೆಂಬಲದೊರೆಯಿತು. ಅದು ೫೦/೮ ರಲ್ಲಿ ಸ್ಥಿರವಾಗಿ ನಿಂತಿತು. ಸಾಲಪತ್ರಗಳ ಹಣೆ ಬರಹವೂ ಹೀಗೆಯೆ ಆಯಿತು. ೩॥ ದರದ ಸರಕಾರಿ ಸಾಲಪತ್ರ ೧೦೩-೪-೦ ಕ್ಕೆ ಮಾರಾಟಾಯಿತು. ಆದರೆ ಮುಂದೆ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸಿತು. ಪೇಟೆ ಮುಚ್ಚುವ ಹೊತ್ತಿಗೆ ದರಗಳು ಹೀಗಿದ್ದವು.

ಬಾಂಬೆ ಡಾಯಿಂಗ ೨೬೦೫ ಸೆಂಚುರಿ ೧೦೬೦, ಸೆಂಟ್ರಲ್ ಇಂಡಿಯಾ ೪೮೬, ಸ್ವದೇಶಿ ೮೪೪, ಸಿಂಪ್ಲೆಕ್ಸ ೪೫೧ ಕೋಹಿನೂರ ೯೭೧ ಗೋಕಾಕ ೪೦೬, ಫೋನಿಕ್ಸ ೧೯೨೫ ಫಿನ್ಲೆ ೪೬೬ ರಿಜರ್ವ ಬ್ಯಾಂಕ ೧೭೪।೮ ಇಂಪೀರಿಯಲ್ ೭೮೨।೮ ಸೆಂಟ್ರಲ ಇಂಡಿಯಾ ೧೪೧।೮ ದರಗಳಿದ್ದವು.

ಚಿನ್ನ—ಬೆಳ್ಳಿ

ಚಿನ್ನದ ಪೇಟೆಯ ಪರಿಸ್ಥಿತಿಯು ಇಂದು ಅಸ್ಥಿರವಾಯಿತು. ರೂಪಾಯಿ ನಾಣ್ಯಗಳನ್ನು ಕೂಡ ಸರಕಾರದವರು ರದ್ದುಪಡಿಸಿ ನಿಕೆಲ್ ನಾಣ್ಯಗಳನ್ನು ಪ್ರಾರಂಭಿಸುವರೆಂಬ ಸುದ್ದಿ ಹಬ್ಬಿದ್ದರಿಂದ ಪೇಟಿ ಮತ್ತಷ್ಟು ಇಳಿಯಿತು. ಆದರಿಂದ ಬೆಳ್ಳಿ ೧... ಕ್ಕೆ ಪ್ರಾರಂಭವಾಗಿ ೧೮೨ ಕ್ಕಿಳಿಯಿತು. ತಯಾರಿ ಭಂಗಾರದ ಧಾರಣೆಯು ಒಂದು ರೂಪಾಯಿ ಕಡಿಮೆಯಾಯಿತು. ಸಾವರಿನ ದರ ೬೭-೮-೦ ಆಯಿತು. ಪೇಟೆ ಮುಚ್ಚುವ ಹೊತ್ತಿಗೆ ಬಂಗಾರ ತಯಾರಿ ೧೦೫-೮-೦ ಮತ್ತು ಬೆಳ್ಳಿ ತಯಾರಿ ೧೭೯-೮ ಹಾಗು ಸಾವರಿನ ೬೬-೧೨-೦ ಇದ್ದಿತು.

ಅರಳೆ

ಅರಳೆ ಪೇಟೆಯಲ್ಲಿಯೂ ಇಳಿತವು ಕಂಡು ಬಂದಿತು. ಜುಲೈ ವಾಯದೆ ೪೩೮ ಕ್ಕೆ ಮತ್ತು ಸಪ್ಟಂಬರ ವಾಯದೆ ೪೪೮-೮-೦ ಕ್ಕಿಳಿದವು.

ಎಣ್ಣೆಕಾಳು

ಶೇಂಗಾ	ರೂ. ೧೩೭—೦—೦
ಅಗಸಿ	,, ೨೬-೪—೦
ಅಗಸಿ ಎಣ್ಣೆ	೧೫-೧೨-೦

ಸಾಂಗಲಿ ಪೇಟೆ

ಬೆಲ್ಲ ಬಂಗಾಲಿ ಮಣ	ರೂ.	೧೪—೧೬
ಅರಿಸಿಣ ಹೇರು	,,	೭೮—೮೯
ಮೆಣಸಿನಕಾಯಿ ಹೇರು	,,	೧೮೦—೨೦೦
ಶೇಂಗಾ (ಖಂಡಿ)	,,	೧೦೩
ದೇಶಿ ತಂಬಾಕು ಹೇರು		೧೨೫-೨೫೦
ಪಂಢರಪುರಿ	”	೨೦೦—೩೦೦
ತಂಬಾಕು ಆಕೋಳ (ಹೇರು)		೨೫೦—೪೦೦

ಶಿವಮೊಗ್ಗೆ

ದೇಶಾವರ ಅಡಿಕೆ ನಂ. ೧ (ಮಣ)	ರೂ.	೨೩-೨೫
,, ,, ೨ ,,		೨೧-೨೩
,, ,, ೩ ,,		೧೯-೨೧
ರಾಜಾ ಅಲವು	”	೨೧-೨೪
ಬೆಟ್ಟೆ	”	೧೨-೧೪

ಹುಬ್ಬಳ್ಳಿ ಪೇಟೆ

ಜಯವಂತ ಹತ್ತಿ	ನಂ. ೧	೨೯೫
,,	ನಂ. ೨	೨೮೫
,,	ನಂ. ೩	೨೮೦
ಅಪಲಂಡ ಹತ್ತಿ		೨೭೫-೨೯೫
ಜಿನ		೨೧೦-೨೨೦
ಸಾಜಿನ		೨೦೫-೨೧೦
. ಡಬಲರೋಲರ		೨೦೫-೨೧೫

ಜೀವನ ಮತ್ತು ವಿಜ್ಞಾನ

ಹಿಂದುಸ್ತಾನದಲ್ಲಿ ಕೃತಕ ಗೊಬ್ಬರಗಳು

ಲೇ:— ಶ್ರೀ ವೆಂಕೋಬಾಚಾರ್ಯ ಉಪಾಧ್ಯಾಯ ಎಂ. ಎಸ್ ಸಿ. ಹೈದ್ರಾಬಾದ

ಸಸ್ಯಗಳ ಬೆಳವಣಿಗೆಗೆ ಅನೇಕ ಮೂಲ ವಸ್ತುಗಳನ್ನೊಳಗೊಂಡ ವಿಧವಿಧವಾದ ಸಂಯುಕ್ತ ಪದಾರ್ಥಗಳು ಅವಶ್ಯಕ. ಇವುಗಳನ್ನು ಸಸಿಗಳು ಮಣ್ಣಿನಿಂದಲೂ ವಾಯುವಿನಿಂದಲೂ ಪಡೆಯುತ್ತದೆ. ಸಾಮಾನ್ಯವಾಗಿ ಮಣ್ಣಿನಲ್ಲಿ ಸಸ್ಯಗಳ ಬೆಳವಣಿಗೆಗೆ ಬೇಕಾದ ವಸ್ತುಗಳು ಸಾಕಷ್ಟು ಪ್ರಮಾಣದಲ್ಲಿರುವದಿಲ್ಲ. ಹೀಗೆ ಕಡಮೆಯಾಗಿರುವ ಪದಾರ್ಥಗಳಲ್ಲಿ ಸಾರಜನಕ (Nitrogen), ರಂಜಕ (Phosphorus), ಮತ್ತು ಪೋಟಾಸಿಯಂ (Potassium). ಈ ಮೂಲ ವಸ್ತುಗಳನ್ನೊಳಗೊಂಡ ಪದಾರ್ಥಗಳೇ ಮುಖ್ಯವಾದವುಗಳು. ಈ ಎಲ್ಲ ಪದಾರ್ಥಗಳನ್ನು ಕೂಡಿಕೊಂಡಿದ್ದ ಮಣ್ಣಿಗೆ ಫಲವತ್ತಾದ ಮಣ್ಣು ಎಂದು ಕರೆಯಲಾಗಿದೆ.

ಒಂದುವೇಳೆ ಮೇಲೆ ತಿಳಿಸಿದ ಮುಖ್ಯ ಪದಾರ್ಥಗಳಿಲ್ಲದ ಮಣ್ಣಿನಿಂದ ಹೆಚ್ಚು ಬೆಳೆಯನ್ನು ಪಡೆಯಬೇಕಾದರೆ ಕೆಲವೊಂದು ಸಂಯುಕ್ತ (compound)ಗಳನ್ನು ಕೃತಕ ರೀತಿಯಿಂದ ತಯಾರಿಸಿ ಮಣ್ಣಿನಲ್ಲಿ ಸೇರಿಸಬೇಕಾಗುತ್ತದೆ. ಇಂಥ ಸಂಯುಕ್ತಗಳಿಗೆ 'ಕೃತಕ ಗೊಬ್ಬರ' ಗಳೆಂದು ಹೆಸರು. ಇವು ಭೂಮಿಯಲ್ಲಿ ಸೇರಿಕೊಂಡು ಅದನ್ನು ಫಲವತ್ತಾಗಿ ಮಾಡುತ್ತವೆ.

ಮೂರುಪ್ರಕಾರದ ಕೃತಕ ಗೊಬ್ಬರಗಳಿವೆ.

೧ ಸಾರಜನಕಯುಕ್ತ ಗೊಬ್ಬರಗಳು

(ಮುಖ್ಯವಾದದ್ದು ಅಮೋನಿಯಂ ಸಲ್ಫೇಟ್ Ammonium Sulphate)

೨ ರಂಜಕಯುಕ್ತ ಗೊಬ್ಬರಗಳು.

(ಮುಖ್ಯವಾದದ್ದು ಸುಪರ್ ಫಾಸ್ಪೇಟ್ Super Phosphate

೩ ಪೊಟಾಸಿಯಂ ಗೊಬ್ಬರಗಳು

(ಮುಖ್ಯವಾದದ್ದು ಪೋಟಾಸಿಯಂ ಸಲ್ಫೇಟ್) Potassium Sulphate)

ಇವುಗಳಲ್ಲಿ ಅಮೋನಿಯಂ ಸಲ್ಫೇಟ್ ಮತ್ತು ಸುಪರ್ ಫಾಸ್ಫೇಟಗಳು ಬಹಳ ಉತ್ತಮ ತರಹದ ಗೊಬ್ಬರಗಳೆಂದು ಎಣಿಸಲ್ಪಟ್ಟಿವೆ ಇಲ್ಲಿಯ ಭೂಮಿಗೆ ಇವು ಹೆಚ್ಚಿನ ಪ್ರಮಾಣದಲ್ಲಿ ಬೇಕಾಗಿದ್ದರಿಂದ ಇಲ್ಲಿಯ ಎಷ್ಟೋ ಕಾರ್ಖಾನೆಗಳಲ್ಲಿ ಇವುಗಳನ್ನು ತಯಾರಿಸುತ್ತಿದ್ದಾರೆ. ಇವುಗಳ ತಯಾರಿಯಲ್ಲಿ ಉಪಯೋಗಿಸಲ್ಪಡುವ ವಸ್ತುಗಳಲ್ಲಿ ಗಂಧಕಾಮ್ಲ (Sulphuric Acid)ವು ಬಹಳ ಮಹತ್ವದ್ದಾಗಿದೆ.

ಗಂಧಕಾಮ್ಲವನ್ನು ತಯಾರಿಸಲಿಕ್ಕೆ ಬೇಕಾದ ಕಚ್ಚಾವಸ್ತುಗಳಲ್ಲಿ ಪ್ರಕೃತಿದತ್ತವಾದ ಗಂಧಕ (Brimstone) ಮತ್ತು ಅಯರ್ನ್ ಪೈರಿಟೀಜ್ (Iron Pyrites)ಮುಖ್ಯವಾದವುಗಳು ಇದಲ್ಲದೇ ಜಿಂಕ್‌ಬ್ಲೆಂಡ್(ZincBlende),ಕಾಪರ್‌ಪೈರಿಟೀಜ್ (Copper Pyrites).ಮತ್ತು ಜಿಪ್‌ಸಂ (Gypsum) ಮುಂತಾದವುಗಳನ್ನು ಕೆಲವು ದೇಶಗಳಲ್ಲಿ ಉಪಯೋಗಿಸುತ್ತಾರೆ. ಇಲ್ಲಿಯ ವರೆಗೆ ಹಿಂದುಸ್ತಾನದಲ್ಲಿಎರಡು ಕಡೆ ಅಯರ್ನ್ ಸಲ್ಫಾಯಿಡ್(Iron Sulphide)ಹುಡುಕಿತೆಗೆದಿದ್ದಾರೆ ಒಂದು ಸಿಮ್ಲಾ ದಹತ್ತರದಲ್ಲಿರುವ ತಾರಾದೇವಿ ಎಂಬ ಸ್ಥಳದಲ್ಲಿ ಮತ್ತೊಂದು ಹೈದರಾಬಾದ ದಕ್ಷಿಣದಲ್ಲಿರುವ ತಾಂಡೂರು ಕಲ್ಲಿದ್ದಲೆಯ ಕಣಿಯಲ್ಲಿ ಪ್ರಕೃತಿದತ್ತವಾದ ಗಂಧಕವು ಇಲ್ಲಿಯ ವರೆಗೆ ಕೇವಲ ಬಲುಚಿಸ್ತಾನ ಮತ್ತು ಸಿಮ್ಲಾದ ಗುಡ್ಡಗಳಲ್ಲಷ್ಟೇ ಸಿಕ್ಕಿರುತ್ತದೆ.

ಹಿಂದುಸ್ತಾನದಲ್ಲಿ ಈಗ ಇಪ್ಪತ್ತು ವರ್ಷಗಳಿಂದ ವ್ಯವಸಾಯದಲ್ಲಿ ಹೆಚ್ಚು ಬೆಳವಣಿಗೆಯಾದ ಮೂಲಕ ಕೃತಕ ಗೊಬ್ಬರಗಳ ಅವಶ್ಯಕತೆ ದಿನ ಮೇಕ ಹೆಚ್ಚಾಗುತ್ತಿದೆ. ಇವುಗಳಲ್ಲಿ ಎರಡು ಮುಖ್ಯ ಸಂಯುಕ್ತಗಳು ಅಮೋನಿಯಂ ಸಲ್ಫೇಟ್ ಮತ್ತು ಸುಪರ್ ಫಾಸ್ಫೇಟಗಳು ಗಾಳಿಯಲ್ಲಿದ್ದ ಸಾರಜನಕದಿಂದ ಅಮೋನಿಯಾ (Ammonia) ತಯಾರಿಸಿ ಇದರ ಮೇಲೆ ಗಂಧಕಾಮ್ಲದ ಕ್ರಿಯೆಯಿಂದ ಅಮೋನಿಯಂ ಸಲ್ಫೇಟನ್ನು ಮತ್ತು ಎಲುವಿನ ಜಿನುಗಾದ ಪುಡಿಯ ಮೇಲೆ ಗಂಧಕಾಮ್ಲದ ಕ್ರಿಯೆಯಿಂದ ಸುಪರ್ ಫಾಸ್ಫೇಟ್‌ನ್ನೂ ತಯಾರಿಸುತ್ತಾರೆ. ಕೇವಲ ಮೈಸೂರು ಮತ್ತು ತಿರ್ವಾಂಕೋರು ಕಾರ್ಖಾನೆಗಳಲ್ಲಿ ಅಮೋನಿಯಂ ಸಲ್ಫೇಟ್ ತಯಾರಾಗುತ್ತದೆ. ಹಿಂದುಸ್ತಾನಕ್ಕೆ ಒಂದು ವರ್ಷಕ್ಕೆ ೨೦ ಲಕ್ಷ ಟನ್ನಿನಷ್ಟು ಗೊಬ್ಬರದ ಅವಶ್ಯಕತೆ ಇದೆ ಎಂದು ಅಂದಾಜುಮಾಡಲಾಗಿದೆ. ಎಂದಮೇಲೆ ನಮ್ಮಲ್ಲಿ ಇನ್ನು ಅನೇಕ ಕಾರ್ಖಾನೆಗಳು ಮೇಲೆ ತಿಳಿಸಿದ ಗೊಬ್ಬರವನ್ನು ಹೆಚ್ಚಿನ ಪ್ರಮಾಣದಲ್ಲಿ ತಯಾರಿಸಬಹುದಾಗಿದೆ. ರಂಜಕಯುಕ್ತ ಗೊಬ್ಬರಗಳಲ್ಲಿ ಶ್ರೇಷ್ಠ ಗೊಬ್ಬರವಾದ ಸುಪರ್ ಫಾಸ್ಫೇಟು ನಮ್ಮ ದೇಶದಲ್ಲಿ ಬಹಳ ಕಡಮೆ ಪ್ರಮಾಣದಲ್ಲಿ ತಯಾರಾಗುತ್ತದೆ. ನಮಗೆ ತಿಳಿದ ಮಟ್ಟಿಗೆ ಮದ್ರಾಸಿನ ಪೆರಿ ಅಂಡ್ ಕಂಪನಿ ಮತ್ತು ಹೈದರಾಬಾದಿನ ಕೆಮಿಕಲ್ಸ್ ಅಂಡ ಫರ್ಟಿಲಾಯಜರ್ಸ (Hyderabad Chemicals and Fertilzers) ಕಾರ್ಖಾನೆಗಳನ್ನು ಬಿಟ್ಟರೆ ಮತ್ತಾವ ಕಾರ್ಖಾನೆಯೂ ಸುಪರ್ ಫಾಸ್ಫೇಟ್ ತಯಾರಿಸುವದಿಲ್ಲ. ಪೆರಿ ಅಂಡ ಕಂಪನಿಯಿಂದ ವರ್ಷಕ್ಕೆ ೩ ಸಾವಿರ ಟನ್ನಿನಷ್ಟು ಸುಪರ್ ಫಾಸ್ಫೇಟ್ ತಯಾರಾಗುತ್ತದೆ.

ಮೇಲೆ ತಿಳಿಸಿದ ಗೊಬ್ಬರಗಳ ಅವಶ್ಯಕತೆ ಹೆಚ್ಚಿಗಿದ್ದಮೂಲಕ ಸದ್ಯಕ್ಕೆ ಇಂಥ ಗೊಬ್ಬರಗಳನ್ನು ತಯಾರಿಸುವ ಕಾರ್ಖಾನೆಗಳು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಇವುಗಳನ್ನು ತಯಾರಿಸುವ ಪ್ರಯತ್ನ ಮಾಡಬೇಕು. ಇದಲ್ಲದೆ ಇನ್ನೂ ಅನೇಕ ಹೊಸ ಕಾರ್ಖಾನೆಗಳು ಹುಟ್ಟಿ ಇವುಗಳನ್ನು ತಯಾರಿಸಿ ಗೊಬ್ಬರದ ಕೊರತೆಯನ್ನು ದೂರಮಾಡಬಹುದೆಂದು ಆಶಿಸಲಾಗಿದೆ.

ಕಾಕಂಬಿಯಿಂದ ಸಬಲ ಮದ್ಯಸಾರ

ಸಕ್ಕರೆಯ ಕಾರ್ಖಾನೆಗಳಲ್ಲಿ ಸಕ್ಕರೆಯನ್ನು ಸ್ವಚ್ಛಮಾಡುವಾಗ ಸಂಜನಿತ (By product) ನಾಗುವ ವಸ್ತುವೇ ಕಾಕಂಬಿ. ಮೊದಮೊದಲು ಈ ಕಾಕಂಬಿಯನ್ನು ಅಗ್ಗವಾದ ಬೆಲೆಯಲ್ಲಿ ಮಾರಿಬಿಡುತ್ತಿದ್ದರು. ಆದರೆ ಈಗೀಗ ಅದರಿಂದ ಮದ್ಯಸಾರ (Alcohol) ತಯಾರಿಸಿ ಪೆಟ್ರೋಲ್ ದೊಡನೆ ಮಿಶ್ರಮಾಡಿ ಮೋಟರು ಕಾರ ಮುಂತಾದವುಗಳಲ್ಲಿಯೂ ಮತ್ತೆ ಇನ್ನನೇಕ ಉದ್ಯಮಗಳಲ್ಲಿಯೂ ಉಪಯೋಗಿಸುತ್ತಾರೆ. ಹೈದರಾಬಾದಿನಲ್ಲಿ ಬೋಧನ್ ಸಕ್ಕರೆ ಕಾರ್ಖಾನೆಯ ಜೊತೆಗೆ ಸಬಲಮದ್ಯಸಾರ(Power Alcohol)ದ ಕಾರ್ಖಾನೆಯನ್ನು ಕೂಡ ಸ್ಥಾಪಿಸಿದ್ದಾರೆ. ಈ ಕಾರ್ಖಾನೆಗಳಲ್ಲಿ ಕಾಕಂಬಿಯಿಂದ ಲಕ್ಷಾಂತರ ಗ್ಯಾಲನ್ ಸಬಲ ಮದ್ಯಸಾರ ತಯಾರಿಸಿ ಪರದೇಶಗಳಿಗೂ ಕಳಿಸುತ್ತಾರೆ. ಇದರಂತೆಯೆ ಹಿಂದುಸ್ತಾನದ ಎಲ್ಲ ಸಕ್ಕರೆಯ ಕಾರ್ಖಾನೆಗಳಲ್ಲಿ ಕಾಕಂಬಿಯನ್ನು ಅಗ್ಗವಾದ ಬೆಲೆಯಲ್ಲಿ ಮಾರದೆ ಇದರಿಂದ ಸಬಲ ಮದ್ಯಸಾರ ತಯಾರಿಸುತ್ತಾರೆ. ಕಬ್ಬಿನಿಂದ ರಸತೆಗೆದ ಮೇಲೆ ಉಳಿದ ಸಿಪ್ಪೆಯನ್ನು ನಮ್ಮಲ್ಲಿ ಹಾಗೆಯೇ ಚಲ್ಲಿಬಿಡುತ್ತಾರೆ. ಪಾಶ್ಚಾತ್ಯರು ಈ ಸಿಪ್ಪೆಯಿಂದ ದಪ್ಪನ್ನ ಕಾಗದಗಳನ್ನು ತಯಾರಿಸುತ್ತಾರೆ. ಇದರ ಕಡೆಗೆ ನಮ್ಮ ಕಾರ್ಖಾನೆದಾರರ ಗಮನ ಹರಿಯಬೇಕು.

ಇದಲ್ಲದೆ ಇತ್ತೀಚೆಗೆ ಜಮಾಯಿಕಾದ ಒಂದು ದೊಡ್ಡ ಕಾರ್ಖಾನೆಯಲ್ಲಿ ಇದೇ ಕಾಕಂಬಿಯಿಂದ ಯೀಸ್ಟ (yeast)! ತಯಾರಿಸಿ ಇದರಿಂದ ವರ್ಷಕ್ಕೆ ೨೦೦೦ ಟನ್ನಿನಷ್ಟು ಕೃತಕ ಮಾಂಸವನ್ನು ತಯಾರಿಸುತಿದ್ದಾರೆ. ಈ ಕೃತಕ ಮಾಂಸವನ್ನು ಎಲ್ಲಕ್ಕೂ ಮೊದಲು ರಾಷ್ಟ್ರೀಯ ರಾಸಾಯನಿಕ " ಪ್ರಯೋಗಶಾಲೆಯಲ್ಲಿ ತಯಾರಿಸಲಾಯಿತು ಈ ಮಾಂಸಕ್ಕೆ ಟೋರು ಲಾಯುಟಿಲಿಸ್ (Torula Utilis) ಎಂದು ಹೆಸರುಕೊಟ್ಟಿದ್ದಾರೆ. ಈ ಮಾಂಸವು ರುಚಿಯಲ್ಲಿ ಸ್ವಾಭಾವಿಕ ಮಾಂಸದಂತೆಯೇ ಆಗಿದೆ ಇದರಲ್ಲಿ ಉತ್ತಮ ತರಹದ ಜೀವಸತ್ವಗಳು (Vitamins) ಮತ್ತು ಸಾರಜನಕಾಂಶ (Proteins) ಗಳಿವೆ ಯುದ್ಧಕಾಲದಲ್ಲಿ ಈ ಮಾಂಸವನ್ನು ತತ್ತಿ ಮತ್ತು ಮೀನಗಳ ಬದಲಾಗಿ ಉಪಯೋಗಿಸಬಹುದಾಗಿದೆ.

ವಾಸುನ ವನವಾಸ

(೨ನೇ ಪುಟದಿಂದ ಮುಂದರಿದುದು)

', ಯಾರ ಕಡೆಗಿದೆ?' ಎಂದು ದನಿಯನ್ನು ಏರಿಸಿದನು.

" ಕಾಳು ಮಾರಿಯೇ ಇಲ್ಲ. ನೀನು ಬುಟ್ಟಿಯನ್ನು ತಲೆಯ ಮೇಲೆ ಹೊರಸಿದ ನಂತರ ಎಂಟು-ಹತ್ತು ಓಣಿಯಲ್ಲಿ ತಿರುಗಾಡಿ ಕೆಲ ದೊಡ್ಡವರಿಗೆ ತೋರಿಸಿದೆ. ಅವರು ಕೊಳ್ಳಲಿಲ್ಲ. ಹಾಗೆ ತಂದೆ' ಎಂದೆನು.

" ಹಾಗಾದರೆ ಅರ್ಧ ಸೇರು ಕಾಳಿನ ಬೆಲೆ?'

" ನೀನು ತಿಂದೆಯೋ, ಬುಟ್ಟಿಯು ತಿಂದಿತೋ?' ಎಂದು ಗದುರಿಸಿದೆನು.

"ನಾನು ಮುಂಜಾನೆಯಿಂದ ಮಧ್ಯಾಹ್ನದ ಹನ್ನೆರಡರ ವರೆಗೆ ನಡೆದ ಸಂಗತಿಯನ್ನು ಹೇಳಿದೆ. ಅದು ಅವನಿಗೆ ಸರಿಯೆನಿಸಲಿಲ್ಲ. ನಾನೇ ತಿಂದಿರುವೆನೆಂದು ದೃಢಪಡಿಸಿಕೊಂಡನು. ನನ್ನ ಆಣೆ, ಚೂರಿ ಅವನನ್ನು ನಂಬುವಂತೆ ಮಾಡಲಿಲ್ಲ. ಒಂದು ಆಣೆಯನ್ನು ನಾನು ಕೊಡಬೇಕೆಂದು ಹಟ ಹಿಡಿದನು.

"ನಾನು ಬೆರಗಾಗಿ ನಿಂತು ಬಿಟ್ಟೆನು. ನನ್ನ ಮಾತುಗಳೆಲ್ಲ ಅವನ ಸಿಟ್ಟನ್ನು ಹೆಚ್ಚು ಮಾಡಿದವು.

'ಆಣೆಯನ್ನು ಕೊಡು, ಇಲ್ಲದಿದ್ದರೆ ಆಣೆಯಷ್ಟು ದುಡಿ' ಎಂದು ಚೀರಿದನು. ಜನರು ನೆರೆದರು. ಬಾಯಿ ಬಿಟ್ಟಿದ್ದರೆ ನಾನೇ ಅವರ ಮುಂದೆ ಹುಚ್ಚನಾಗುವ ಅಟ. ನನ್ನ ಮಾನವನ್ನು ಉಳಿಸಿಕೊಂಡು ಬರಲಿಕ್ಕೆ ಅವನ ಅಜ್ಞೆಯಂತೆ ನಡೆಯುವದು ಒಳ್ಳೆಯದೆಂದು ಸಿದ್ಧನಾಗಿ ನಿಂತೆ.

"ಅಂಗಡಿಯ ಮುಂದೆ ಬಿದ್ದ ಒಂದು ಗಾಡಿ ಕಟ್ಟಿಗೆಯ ಮೇಲೆ ಅವನ ಕಣ್ಣು ಮೇಲಿಂದ ಮೇಲೆ ಕುಣಿದಾಡಿ ಬರುತ್ತಿದ್ದಿತು."

" ಏನು ಮಾಡೆಂದು ಹೇಳುವಿ ಅದನ್ನು ಮಾಡುವೆ ಶಂಭುಲಿಂಗಪ್ಪ !" ಎಂದೆನು.

"ಆ ಕಟ್ಟಿಗೆಯನ್ನು ಒಳಗೆ ಹಾಕು ಮುಟ್ಟಿತೆನ್ನುವೆನು" ಅಂದನು.


"ನಾನು ತುಟಿ ಎರಡು ಮಾಡದೆ ಆ ಕೆಲಸವನ್ನು ನೆರವೇರಿಸಿದೆ."

"ಇನ್ನು ಹೋಗುವೆನು'' ಅಂದೆನು.

"ಅವನು ಒಂದು ಹಿಡಿ ಕಾಳನ್ನು ಕೊಟ್ಟನು. ನಾನು ತೆಗೆದುಕೊಂಡೆ. ಆದರೆ ತಿನ್ನಲಿಲ್ಲ. ಸಮೀಪದಲ್ಲಿ ನಿಂತ ಒಬ್ಬ ಭಿಕ್ಷುಕಿಯ ಹರಿವಾಣದಲ್ಲಿ ಹಾಕಿದೆನು. ಮಧ್ಯಾಹ್ನ ಅವನ ಅಂಗಡಿಗೆ ಹೋಗಲಿಲ್ಲ." ಒಂದು ತಂಬಿಗೆಯ ಮೇಲೆ ಬೆರಳಿನಿಂದ ದಿನ್‌ದಿನ್ ಎಂದು ಬಾರಿಸಿದನು.

ತಂಬಿಗೆಯನ್ನು ಬೆಸೆಯಲಿಕ್ಕೆ ಹೋಗುವ ಕಾರಣವು ತಿಳಿಯಿತು. ನಾಲ್ಕು ಬಿಲ್ಲಿಯನ್ನು ಅವನ ಕೈಗೆ ಇಟ್ಟೆ.

ನಾನು ಕೊಟ್ಟದ್ದು ಯೋಗ್ಯವೋ, ಅಯೋಗ್ಯವೋ ನನಗೆ ತಿಳಿಯದು. ಆದರೆ ಇಂಥ ಕಪಟಿ ಸಮಾಜದಲ್ಲಿ ವಾಸುನು ಹೇಗೆ ಬದುಕಬೇಕು ? ಶಂಭುಲಿಂಗಪ್ಪನ ಪ್ರಕರಣದಲ್ಲಿ ತಪ್ಪುಯಾರದು ? ಎಂದು ವಿಚಾರಿಸುತ್ತಿರುವ ನಿಮಗೆ ತಿಳಿದರೆ ಹೇಳುವಿರಾ ?



ಜ್ಯೋತಿಷಿ:–ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಜೂನ ತಾ. ೧೦ರಿಂದ ೧೬ರ ವರೆಗೆ

ಮೇಷ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೆ ಮಕ್ಕಳಲ್ಲಿ ಒಬ್ಬರಿಗೆ ಬಹಳ ಕಾಯಿಲೆ ಮತ್ತು ಬಹುತರ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ. ಉದ್ಯೋಗದಲ್ಲಿ ಪ್ರಗತಿ ಬಹಳ ಕಡಿಮೆ, ಆದರೆ ಪ್ರತಿಷ್ಠೆ ಮತ್ತು ಲಾಭ ತುಂಬಾ. ಮಿತ್ರಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಜೋರು ಇದ್ದರೂ ಯಶಸ್ಸು ನಿಮ್ಮ ಪದರಿನಲ್ಲಿ. ಸ್ಥಾವರದಲ್ಲಿ ಸ್ವಲ್ಪ ಹೆಚ್ಚಳ. ಆದರೆ ರೋಖ ಸಂಗ್ರಹದ ಸುರಕ್ಷಿತತೆಯ ಬಗ್ಗೆ ಕಾಳಜಿಯ ಪ್ರಸಂಗ. ಪ್ರವಾಸ ತೊಂದರೆಯದು ಭೆಟ್ಟಿಗಿಂತಲೂ ಪತ್ರವ್ಯವಹಾರ ಹೆಚ್ಚು ಅನುಕೂಲ. ಅಶ್ವಿನಿಯ ೪ನೇ ಮತ್ತು ಭರಣಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೦, ೧೧, ೧೫, ೧೬ ಅನುಕೂಲ.

ಅದರಂತೆಯ ೧೪ನೇ ತಾರೀಕಿನ ದಿನ ಈ ಮೊದಲು ವಕ್ರವಾಗಿ ಕರ್ಕದಿಂದ ಮಿಥುನಕ್ಕೆ ಹೊದವನು ಮತ್ತೆ ಕರ್ಕದಲ್ಲಿ ಬರುಹನು. ಅರ್ಥಾತ್ ಈ ರಾಶಿಗೆ ೪ನೆಯವನಾಗುವನು. ಆದುದರಿಂದ ಆಪ್ತವಿರೋಧ ತಾಯಿ ಇಲ್ಲವೆ ತತ್ಸಮ ವ್ಯಕ್ತಿಗಳಿಗೆ ವ ಸ್ವತಃಕ್ಕೆ ರೋಗ. ಆದರೆ ಸಂಗ್ರಹದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಯಶಸ್ಸು. ಶತ್ರುನಾಶ.

ಅದರಂತೆ ೧೪ನೇ ತಾರೀಕಿನ ದಿನ ರಾತ್ರಿ ೧೦–೧೫ ಗಂಟೆಗೆ ವೃಶ್ಚಿಕ ರಾಶಿಯಲ್ಲಿ ಜ್ಯೇಷ್ಠಾ ನಕ್ಷತ್ರದ ಚತುರ್ಥ ಚರಣದಲ್ಲಿ ಸುರುವಾಗಿ ಮಧ್ಯರಾತ್ರಿ ನಂತರ ೨-೪ಕ್ಕೆ ಧನು ರಾಶಿಯಲ್ಲಿಯ ಮೂಲಾ ನಕ್ಷತ್ರದ ಪ್ರಥಮ ಚರಣದಲ್ಲಿ ಬಿಡುವ ಖಗ್ರಾಸ ಚಂದ್ರಗ್ರಹಣವು ಈ ರಾಶಿಗೆ ೮ನೇ ಮತ್ತು ೯ನೇಯುವನಾಗುವದರಿಂದ ಮೊದಲಿನ ಒಂದೂವರೆ ತಿಂಗಳು ಬಹಳ ಭಾಗ್ಯವರ್ಧಕ ಫಲಗಳನ್ನು ಕೊಡುವನು. ಏಕೆಂದರೆ ಚಂದ್ರಗ್ರಹಣದ ಫಲಕಾಲ ಅದು ಆಗಿ ಮುಂದೆ ೩ ತಿಂಗಳ ಇರುವದು.

ವೃಷಭ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಮಕ್ಕಳಲ್ಲಿ ಉತ್ಕರ್ಷ ಮತ್ತು ಪ್ರಾಪಂಚಿಕ ಸುಖ ಮನಸ್ಸಿನಂತೆ. ಬಂಧುವರ್ಗದವರಿಂದ ಸ್ವಲ್ಪ ವಿರೋಧ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ನಿಮ್ಮ ವಿರೋಧಿಗಳ ಉತ್ಕರ್ಷ ನೋಡಿ ಮನಸ್ಸಿಗೆ ವಿಷಾದ. ಮಿತ್ರಸುಖ ಉತ್ತಮ. ವಾದದಲ್ಲಿ ಇಲ್ಲವೆ ಸ್ಪರ್ಧೆಯಲ್ಲಿ ಶತ್ರುಗಳ ಜೋರು ಕಾಯುಮವೆ. ಆದರೆ ಕೊನೆಗೆ ಯಶಸ್ಸು. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಕೃತ್ತಿಕೆಯ ೪ನೇ ಮತ್ತು ರೋಹಿಣಿಯ ಮೊದಲನೆ ೩ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೧೨, ೧೩, ೧೪ ಉತ್ತಮ.

ಅದರಂತೆ ೧೪ನೇ ತಾರೀಕಿಗೆ ಬರುವ ೩ನೆ ಶನಿ ಈ ರಾಶಿಗೆ ೩ನೆಯವನಾಗುವದರಿಂದ ಈ ರಾಶಿಯ ಸಾಡೇಸಾತಿ ಪೂರ್ಣ ಹೋದ ಫಲಗಳು ದೊರೆಯುವವು. ಆದುದರಿಂದ ದೊಡ್ಡ ಪರಾಕ್ರಮದ ಯಶಸ್ಸಿನ ಕೃತ್ಯಗಳು. ಉತ್ತಮ ಲಾಭ. ಒಳ್ಳೆ ಭಾಗ್ಯೋದಯ. ಪ್ರಾಪಂಚಿಕ ಸುಖ ಉತ್ತಮ. ಬಂಧುವರ್ಗದವರಿಗೆ ಮಾತ್ರ ಅನಿಷ್ಟದಾಯಕ ಫಲ ಕೊಡುವನು.

ಚಂದ್ರಗ್ರಹಣ ಈ ರಾಶಿಗೆ ೭ ಮತ್ತು ೮ನೇಯವನಾಗಿರುವದರಿಂದ ಹೆಂಡತಿಗೆ ಮತ್ತು ಸ್ವತಃಕ್ಕೆ ಶರೀರ ಕ್ಲೇಶ. ವಾದದಲ್ಲಿ ಅಪಯಶಸ್ಸು, ಅಕಲ್ಪಿತ ಹಾನಿ ಮೊದಲಾದ ಫಲ ಸಿಕ್ಕುವವು.

ಮಿಥುನ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಸ್ವಲ್ಪ ಸಾಹಸ ಮತ್ತು ಪೂರ್ಣ ಯಶಸ್ಸು ಸಿಕ್ಕು ದೊಡ್ಡ ಪ್ರತಿಷ್ಠೆ ಮತ್ತು ತುಂಬ ಲಾಭ. ಆದರೆ ವೆಚ್ಚವೂ ವಿಪರೀತ. ಮಿತ್ರ ಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವಿಜಯ. ಪ್ರವಾಸ ತೊಂದರೆಯದು. ಭೆಟ್ಟಿ ಮತ್ತು ಪತ್ರವ್ಯವಹಾರ ಉತ್ತಮ. ಆದರೆ ಮೃಗಾದ ೪ನೇ ಮತ್ತು ಆರಿದ್ರಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೦, ೧೧, ೧೫, ೧೬ ಅನುಕೂಲ.

ಅದರಂತೆ ೧೪ನೇ ತಾರೀಕಿಗೆ ಈಗ ಈ ರಾಶಿಗೆ ಇದ್ದ ಸಾಡೇಸಾತಿಯು ಕೇವಲ ೨॥ ವರ್ಷ ಶಿಲ್ಕು ಉಳಿದುದರ ಫಲ ಕಾಣಹತ್ತುವವು. ೨ನೇ ಶನಿ ಕೌಟುಂಬಿಕ ಕ್ಲೇಶ. ಧನಹಾನಿ ಗೃಹಕಲಹ. ಮಿತ್ರದ್ರೋಹ ಫಲ ಕೊಡುವದು.

ಚಂದ್ರಗ್ರಹಣ ೬ ಮತ್ತು ೭ನೇ ಸ್ಥಾನದಲ್ಲಿರುವದರಿಂದ ಶತ್ರುನಾಶ, ಸತ್ತಾವೃದ್ಧಿ ಆದರೆ ಸ್ತ್ರೀಕ್ಲೇಶ. ವಾದದಲ್ಲಿ ಅಪಯಶಸ್ಸು ಇಂಥ ಫಲ ಕೊಡುವನು.

ಕರ್ಕ

ಪ್ರಕೃತಿ ಸಾಧಾರಣವೆ. ಸ್ತ್ರೀಸುಖದಲ್ಲಿ ಆಗಂತುಕ ಕಾರಣಗಳಿಂದ ವಿರಸ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಉತ್ತಮ. ಪ್ರತಿಷ್ಠೆ ಜೋರಿನಲ್ಲಿ ಆದರೆ ಲಾಭ ಕಡಮೆ. ಮಿತ್ರತ್ವದಲ್ಲಿ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನಸ್ಥಿತಿ. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಅನುಕೂಲ, ಪುಷ್ಯದ ೪ನೇ ಮತ್ತು ಆಶ್ಲೇಷಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೨, ೧೩, ೧೪ ಅನುಕೂಲ.

೧೪ನೇ ತಾರೀಕು ಸಾಡೇಸಾತಿಯ ನಡುವಿನ ೨॥ ವರ್ಷ ಸುರುವಾಗುವದರ ಫಲ ತೋರಹತ್ತುವವು. ಮೊದಲನೆ ಶನಿ ಪ್ರಕೃತಿಗೆ ಕ್ಲೇಶ. ತಂದೆ ಇಲ್ಲವೆ ತತ್ಸಮ ವ್ಯಕ್ತಿಗಳ ವಿಯೋಗ ಸ್ವಭಾವದಲ್ಲಿ ವಿತಂಡವಾದಿತನ. ಪಾಪವಿಚಾರ ಹೆಚ್ಚು. ಇಂಥ ಫಲ ದೊರಕುವವು.

ಪಂಚಮ ಮತ್ತು ಷಷ್ಠಸ್ಥಾನಗಳಿಗೆ ಚಂದ್ರಗ್ರಹಣವಾಗುವದರಿಂದ ಮಕ್ಕಳಿಗೆ ಕ್ಲೇಶ. ವಿದ್ಯೆಯಲ್ಲಿ ಅಪಯಶಸ್ಸು. ಮತ್ತು ದುರ್ಬುದ್ಧಿ ಆದರೆ ಶತ್ರುನಾಶ. ಮತ್ತು ಸತ್ತಾವೃದ್ಧಿ ಇಂಥ ಫಲ ದೊರೆಯುವವು.

ಸಿಂಹ

ಪ್ರಕೃತಿ ಉತ್ತಮ. ಆದರೆ ಸ್ತ್ರೀಸುಖದಲ್ಲಿ ಕೆಲ ಕಾರಣಗಳಿಂದ ವ್ಯತ್ಯಯ ಬರುವ ಸಂಭವ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಮನಸಿನಂತೆ. ಸಂಗ್ರಹಕ್ಕಾಗಿ ವೆಚ್ಚ ಮಾಡುವ ಯೋಜನೆ ನಡೆದೇ ಇದೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಮಾತ್ರ ಹಿಂದಕ್ಕೆ ಹೋಗಬೇಕಾಗುವ ರಾಗರಂಗ. ಮಿತ್ರಸುಖ ಉತ್ತಮ. ಬಂಧುವರ್ಗದವರಲ್ಲಿ ಉತ್ಕರ್ಷ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿ ಇವು ಬಹಳ ಉತ್ತಮ. ಮಘಾದ ೪ನೆ ಮತ್ತು ಪೂರ್ವಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೦, ೧೧, ೧೫, ೧೬ ಅನುಕೂಲ.

೧೪ನೇ ತಾರೀಕಿಗೆ ಶನಿ ೧೨ನೇಯವನಾಗುವದರಿಂದ ಆದರ ಫಲ ಕಾಣಹತ್ತುವದು. ಆದರಿಂದ ಅತಿ ವೆಚ್ಚ ಕ್ವಚಿತ್ ಸಾಲದ ಯೋಗ. ದೀರ್ಘಶ್ರಮದಿಂದ ಶತ್ರುನಾಶ. ಗೃಹಕಲಹ, ಹೆಂಡತಿಗೆ ಕ್ಲೇಶ. ಭಾಗ್ಯದಲ್ಲಿ ವಿಘ್ನ ಇವೆಲ್ಲ ಫಲ ಸಿಕ್ಕುವವು.

ಚತುರ್ಥ ಮತ್ತು ಪಂಚಮ ಸ್ಥಾನಗಳಲ್ಲಿ ಚಂದ್ರಗ್ರಹಣವಾಗುವದರಿಂದ ಮಾತೃಕ್ಲೇಶ, ಸ್ಥಾವರ ನಾಶ, ಮತ್ತು ಸಂತತಿ ಕ್ಲೇಶ, ದುರ್ಬುದ್ಧಿ, ವಿದ್ಯೆಯಲ್ಲಿ ಅಪಯಶಸ್ಸು ಮೊದಲಾದ ಫಲ ಸಿಕ್ಕುವವು.

ಕನ್ಯಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ ಆದರೆ ಅಗಂತುಕರ ಕಿಟಿಕಿಟಿ ಬಹಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭ ಬಹಳ ಉತ್ತಮ ಆದರೆ ವೆಚ್ಚ ಸಹಿತ ಅಷ್ಟೆ ಹೆಚ್ಚು. ಮಿತ್ರ ಸುಖ ಉತ್ತಮ ವಾದದಲ್ಲಿ ಶತ್ರುಗಳ ಜೋರು ಬಹಳ ಆದರೆ ಯಶಸ್ಸಿನ ಒಲವು ನಿಮ್ಮ ಕಡೆಗೇ. ಸ್ಥಾವರದಲ್ಲಿ ಹೆಚ್ಚಳ. ಪ್ರವಾಸಾದಿ ಕೆಲಸ ಸುಖಕರ. ಉತ್ತರಾದ ೪ನೆ ಹಸ್ತಾದ ಮೊದಲಿನ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೦, ೧೧, ೧೨, ೧೩ ಅನುಕೂಲ.

೧೪ನೇ ತಾರೀಕಿನಿಂದ ಬರುವ ೧೧ನೇ ಶನಿಯಿಂದ ದ್ರವ್ಯ ಲಾಭ ಅಂದಾಜು ಮೀರಿ ನಡೆಯುವದು. ಮಕ್ಕಳ ಉತ್ಕರ್ಷ, ದುರ್ಘಟ ಕೆಲಸಗಳಲ್ಲಿಯೂ ಯಶಸ್ಸು ಆದರೆ ಸ್ವತಃಕ್ಕೆ ಮತ್ತು ಮಿತ್ರರಿಗೆ ಸಣ್ಣ ದೊಡ್ಡ ಕಾಯಿಲೆ.

ತೃತೀಯ ಮತ್ತು ಚತುರ್ಥಸ್ಥಾನದಲ್ಲಿ ಆಗುವ ಚಂದ್ರಗ್ರಹಣ ಪರಾಕ್ರಮಸಿದ್ಧಿ; ತುಂಬ ಲಾಭ, ಅಧಿಕಾರ ಪ್ರಾಪ್ತಿ ಆದರೆ ಬಂಧುವರ್ಗದವರಿಗೆ ಮತ್ತು ತಾಯಿಗೆ ಕ್ಲೇಶ. ವಾಹನ ಪೀಡೆ, ಸ್ಥಾವರ ನಾಶ ಮೊದಲಾದ ಫಲಗಳು ದೊರೆಯುವವು.

ತುಲಾ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ ಆದರೆ ಉಳಿದ ಪ್ರಾಪಂಚಿಕ ವಿಷಯಗಳಲ್ಲಿ ಅನೇಕ ಕಟಕಟಿ, ಉತ್ಪನ್ನವಾಗುವ ಸಂಭವ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಮನಸ್ಸಿನಂತೆ. ಕದಾಚಿತ ಅವಚಿತ ಲಾಭದ ಸಂಭವವೂ ಉಂಟು. ಆದರೆ ಪ್ರತಿಯೊಂದು ಕೆಲಸ ಪೂರ್ಣ ಮಾಡುವಲ್ಲಿ ತೊಂದರೆ ಮತ್ತು ವೆಚ್ಚ ಬಹಳ, ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನ ಸ್ಥಿತಿ. ಮಿತ್ರ ಸುಖ ಸಾಮಾನ್ಯ ತೊಂದರೆಯುವೆ. ಪ್ರವಾಸಾದಿ ಕೆಲಸ ಮನಸ್ಸಿನಂತೆ. ಚಿತ್ರಾದ ೪ನೆ ಮತ್ತು ಸ್ವಾತಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೦, ೧೧, ೧೨, ೧೫ ಅನುಕೂಲ.

ತಾ. ೧೪ಕ್ಕೆ ಬರುವ ೧೦ ನೇ ಶನಿ ದ್ರವ್ಯಲಾಭಕ್ಕೆ ಪ್ರತಿಕೂಲ ಆದರೆ ಇತರ ಮಹತ್ವದ ಕೆಲಸ ಯಶಸ್ವಿಯಾಗುವದಕ್ಕೆ ಅಷ್ಟೇ ಅನುಕೂಲ. ತಂದೆಗೆ ಕ್ಲೇಶ, ವರಿಷ್ಠರು ಇಲ್ಲವೆ ಆಶ್ರಯದಾತರು ಕ್ಷಣಕ್ಕೆ ನಿಮ್ಮ ಮೇಲೆ ಮರ್ಜಿ ತೋರಿದರೆ ಮರುಕ್ಷಣಕ್ಕೆ ಗೈರಮರ್ಜಿಯಾಗುವದು, ಹೆಂಡತಿಗೆ ಕ್ಲೇಶ, ಸ್ಥಾವರ ಸಂಗ್ರಹದಲ್ಲಿ ಹೆಚ್ಚಳ, ಮಕ್ಕಳು ಸೊಕ್ಕಿನ ಕೆಲಸ ಮಾಡುವರು.

ದ್ವಿತೀಯ ಮತ್ತು ತೃತೀಯ ಸ್ಥಾನಗಳಲ್ಲಿ ಆಗುವ ಚಂದ್ರಗ್ರಹಣದಿಂದ ಕಲಹ, ಬಗೆಬಗೆಯ ಪ್ರಾಪಂಚಿಕ ತೊಂದರೆ ಸಂಗ್ರಹ ಹಾನಿ. ಬಂಧುವರ್ಗದವರಲ್ಲಿ ಕ್ಲೇಶ ಆದರೆ ಪರಾಕ್ರಮದಲ್ಲಿ ಯಶಸ್ಸು ಆದರೆ ಸಾಹಸದ ಕೃತ್ಯಗಳು ಮೊದಲಾದ ಫಲ ದೊರೆಯುವವು.

ವೃಶ್ಚಿಕ

ನಿಮ್ಮ ಪ್ರಕೃತಿ ಉತ್ತಮ ಆದರೆ ಹೆಂಡತಿಯದು ಅಲ್ಪ ಸ್ವಲ್ಪ ಸೂಕ್ಷ್ಮವೆ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ, ಮಕ್ಕಳಲ್ಲಿ ಉತ್ಕರ್ಷದ ಹೆಚ್ಚಳ. ಉದ್ಯೋಗದಲ್ಲಿ [ಕೊನೆಯ ೫ ದಿನ] ಒಳ್ಳೇ ಜೋರಾದ ಪ್ರಗತಿ ಮತ್ತು ದ್ರವ್ಯ ಲಾಭ ಯಾವಾಗಲೂ ತುಂಬ, ಪ್ರತಿಷ್ಠೆಗೆ ಮಾತ್ರ ಕೆಲವೊಂದು ಕಲಂಕ ಹತ್ತುವ ಸಂಭವ ಅಧಿಕಾರ ಇಲ್ಲವೆ ಸತ್ತೆಯ ಹೆಚ್ಚಳ, ಮಿತ್ರಸುಖ ಉತ್ತಮ, ಅವಚಿತ ಲಾಭದ ಸಂಭವ, ವಾದದಲ್ಲಿ ಇಲ್ಲವೆ ಸ್ಪರ್ಧೆಯಲ್ಲಿ ಬಹಳ ಅನುಕೂಲತೆ, ಪ್ರವಾಸಾದಿ ಕೆಲಸ ಕಷ್ಟಸಾಧ್ಯ. ಅನುರಾಧೆಯ ೪ನೇ ಮತ್ತು ಜೇಷ್ಠಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೩, ೧೫ ೧೬ ಅನುಕೂಲ.

೧೪ನೇ ತಾರೀಕಿಗೆ ಬರುವ ೯ನೇ ಶನಿ ಉತ್ಕರ್ಷ ಮತ್ತು ಲಾಭ, ಆರೋಗ್ಯ ಉತ್ತಮ, ಶತ್ರು ನಾಶ, ಮಿತ್ರಸುಖ ಆದರೆ ಕೌಟುಂಬಿಕ ಧಕ್ಕೆಯ ಪ್ರವಾಸ, ಅಧರ್ಮವೃತ್ತಿಯ ಲೋಕಾರೋಪ ಬರುವ ಫಲ ಸಿಕ್ಕುವವು.

ಪ್ರಥಮ ಮತ್ತು ದ್ವಿತೀಯ ಸ್ಥಾನಗಳಲ್ಲಿ ಆಗುವ ಚಂದ್ರಗ್ರಹಣದಿಂದ ಪ್ರಕೃತಿಗೆ ಕ್ಲೇಶ, ಅವಿಚಾರದ ಕೃತ್ಯಗಳು ಸಂಗ್ರಹಹಾನಿ, ಗೃಹಕಲಹ ಮೊದಲಾದ ಫಲ ದೊರೆಯುವವು.

ಧನು

ಪ್ರಕೃತಿಗೆ ಕಿರುಕಳ ಕ್ಲೇಶ ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ, ಮಕ್ಕಳಲ್ಲಿ ಬಹಳ ಉತ್ಕರ್ಷ. ಉದ್ಯೋಗದಲ್ಲಿ ಪ್ರಗತಿ ಕಡಮೆ. ಆದರೆ ವಿರೋಧಿಗಳಿಗೆ ಅಂಜಿಕೆ ಕೂಡುವಂಥ ಕೆಲವೊಂದು ಸಂಗತಿಗಳು. ಪ್ರತಿಷ್ಠೆ ಮತ್ತು ಲಾಭ ತುಂಬ, ಪ್ರತಿಯೊಂದು ಕೆಲಸದಲ್ಲಿ ಒಳ್ಳೆ ಮನೋತ್ಸಾಹ, ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು, ಮಿತ್ರಸುಖ ಉತ್ತಮ, ಪ್ರವಾಸ ತೊಂದರೆಯದು ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಉತ್ತಮ. ಮೂಲಾದ ೪ನೆ ಮತ್ತು ಜ್ಯೇಷ್ಠಾದ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೧೦, ೧೧, ೧೫, ೧೬ ಅನುಕೂಲ.

ಆದರೆ ೧೪ನೇ ತಾರೀಕಿಗೆ ಬರುವ ೮ನೇ ಶನಿ ನಿಮ್ಮ ಮತ್ತು ಮಕ್ಕಳ ಪ್ರಕೃತಿಗೆ ಒಮ್ಮೆಯಾದರೂ ಪುನರ್ಜನ್ಮವತ್ ಕ್ಲೇಶ. ಜೋರಾದ ಗ್ರಹಕಲಹ, ದುರ್ಬುದ್ಧಿಯ ಕೃತ್ಯಗಳು, ಏನೇನೋ ಕಾರಸ್ಥಾನಗಳನ್ನು ರಚಿಸುವ ಇಚ್ಛೆ; ದ್ವಾದಶ ಮತ್ತು ಪ್ರಥಮ ಸ್ಥಾನದಲ್ಲಿ ಆಗುವ ಚಂದ್ರಗ್ರಹಣದಿಂದ ಅತಿ ಮತ್ತು ಮುಳುಗುವ ವೆಚ್ಚ ಅನೇಕರೊಡನೆ ನಿರರ್ಥಕ ವೈರ ಪ್ರಕೃತಿಗೆ ಕ್ಲೇಶ. ಅವಿಚಾರದ ಕೃತ್ಯಗಳು.

ಮಕರ

ಪ್ರಕೃತಿಯಲ್ಲಿ ಬಹಳ ಸುಧಾರಣೆ, ಬಹಳ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಮನಸ್ಸಿನಂತೆ, ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ ಆದರೆ ಬಹುತರ ಕೆಲಸಗಳಲ್ಲಿ ಎರಡನೆಯವರ ಬೊಗಸೆಯಿಂದ ನೀರು ಕುಡಿಯಬೇಕಾದ ಪ್ರಸಂಗ, ಅವಚಿತ ಲಾಭದ ಸಂಭವ, ಮಿತ್ರಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನಸ್ಥಿತಿ ಪ್ರವಾಸಾದಿ ಕೆಲಸ ಅಲ್ಪ ಸ್ವಲ್ಪ ತೊಂದರೆಯಿಂದ ಪೂರ್ಣವಾಗುವ ಯೋಗ, ಉತ್ತರಾಷಾಢಾದ ೪ನೇ ಮತ್ತು ಶ್ರವಣಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೦, ೧೧, ೧೨, ೧೩ ಅನುಕೂಲ.

ತಾ. ೧೪ ಕ್ಕೆ ಬರುವ ೭ನೇ ಶನಿ ಹೆಂಡತಿಗೆ ಕಾಯಿಲೆ, ಸ್ಥಾವರ ಆಸ್ತಿಯ ವಿಷಯಗಳಲ್ಲಿ ಸ್ವಲ್ಪ ತೊಂದರೆ, ತಾಯಿಗೆ ಕ್ಲೇಶ ಆದರೆ ಭಾಗ್ಯ ಲಾಭ, ಮಕ್ಕಳ ಉತ್ಕರ್ಷ ಇಂಥ ಉತ್ತಮ ಫಲ ಕೊಡುವನು.

ಏಕಾದಶ ಮತ್ತು ದ್ವಾದಶ ಸ್ಥಾನಗಳಲ್ಲಿ ಆಗುವ ಚಂದ್ರಗ್ರಹಣದಿಂದ ದ್ರವ್ಯಲಾಭ ತುಂಬ ಆದರೆ ವೆಚ್ಚವೂ ವಿಪರೀತ ಮಿತ್ರರಿಗೆ ಉತ್ತಮ ಸುಖ ಆದರೆ ವಿರೋಧಿಗಳಿಂದಲೂ ವಿಪರೀತ ತೊಂದರೆ. ಈ ಬಗೆಯ ಫಲ ಸಿಕ್ಕುವವು.

ಕುಂಭ

ನಿಮ್ಮ ಪ್ರಕೃತಿಗೆ ಕ್ಲೇಶ ಆದರೆ ಒಂದು [illegible] ಅಂಜಿಕೆಯಿಂದ ಪತ್ನಿಗೆ ಮಾನಸಿಕ ಕ್ಲೇಶ, ಮಕ್ಕಳಲ್ಲಿ ಬಹಳ ಉತ್ಕರ್ಷ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ, ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ ಆದರೆ ವೆಚ್ಚ ವಿಪರೀತವಾಗುವದರಿಂದ ಮನಸ್ಸಿನಲ್ಲಿ ವಿಷಾದ, ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು ಆದರೆ ಅದಕ್ಕಾಗಿ ದಗದಗಿ ಬಹಳ. ಪ್ರವಾಸಾದಿ ಕೆಲಸ ಬಹಳ ಸುಖಕರ. ಧನಿಷ್ಠೆಯ ೪ನೇ ಮತ್ತು ಶತತಾರಿಕೆಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು ತಾ. ೧೧, ೧೨, ೧೩, ೧೬ ಅನುಕೂಲ.

೧೪ನೇ ತಾರೀಕಿನಿಂದ ಬರುವ ೬ನೇ ಶನಿ ಪ್ರಕೃತಿಗೆ ಕ್ಲೇಶ ಮತ್ತು ಕುಟುಂಬದಲ್ಲಿಯ ಜನರಿಗೆ ಕಲಹಕಾರಿ ಎನಿಸಿದರೂ ಶತ್ರು ಮತ್ತು ಸಂಕಟಗಳ ನಾಶ ಮತ್ತು ಮಹತ್ವದ ಕೆಲಸಗಳಲ್ಲಿ ಯಶಸ್ಸು ಇಂಥ ಫಲ ದೊರೆಯುವವು.

ದಶಮ ಮತ್ತು ಏಕಾದಶ ಸ್ಥಾನಗಳಲ್ಲಿ ಆಗುವ ಚಂದ್ರಗ್ರಹಣದಿಂದಅಧಿಕಾರ ಲೌಕಿಕಮತ್ತು ಪ್ರತಿಷ್ಠೆಯಲ್ಲಿ ಹೆಚ್ಚಳ, ತುಂಬ ದ್ರವ್ಯ ಲಾಭ ಮತ್ತು ಉತ್ತಮ ಮಿತ್ರ ಸುಖ. ಈ ಬಗೆಯ ಫಲ ದೊರೆಯುವವು.

ಮೀನ

ಪ್ರಕೃತಿ ಉತ್ತಮ ಪ್ರಾಪಂಚಿಕ ಸುಖದಲ್ಲಿ ಅಲ್ಪ ಸ್ವಲ್ಪ ಕಟಕಟಿ ಆದರೆ ಸ್ತ್ರೀಸುಖ ಉತ್ತಮ, ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ, ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ [illegible] ಯಶಸ್ಸು ಸಿಕ್ಕು ಶತ್ರುಗಳು ಪೂರ್ಣ ಪರಾಜಯ ಹೊಂದುವರು. ಮಿತ್ರಸುಖ ಉತ್ತಮ ಪ್ರವಾಸಾದಿ ಕೆಲಸ ಸುಖದ್ದು. ಪೂರ್ವಾಭಾದ್ರಪದದ ೪ನೇ ಮತ್ತು ರೇವತಿಯ ಮೊದಲನೆ ೩ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೧೩, ೧೪, ೧೫, ೧೬ ಅನುಕೂಲ.

೧೪ನೇ ತಾರೀಕಿಗೆ ಬರುವ ೫ನೇ ಶನಿ ಲಾಭಕ್ಕೆ ಮತ್ತು ಮಿತ್ರ ಸುಖಕ್ಕೆ ಬಹಳ ಉತ್ತಮ ಆದರೆ ಕುಬುದ್ಧಿ ಸಂತತಿ ಕ್ಲೇಶ, ಗೃಹಕಲಹ ಮೊದಲಾದ ಫಲ ದೊರೆಯುವವು.

ಚಂದ್ರಗ್ರಹಣ ನವಮ ಮತ್ತು ದಶಮ ಸ್ಥಾನದಲ್ಲಿ ಆಗುವದರಿಂದ ಭಾಗ್ಯವೃದ್ಧಿ ಕೀರ್ತಿ ಲೌಕಿಕ ಮತ್ತು ಸತ್ತೆ ಇವುಗಳ ಹೆಚ್ಚಳ ಮಾಡುವವು.

ಹಿಂದುಸ್ಥಾನದ ಭವಿಷತ್ ರಾಜ್ಯಘಟನೆ

(೧ನೇ ಪುಟದಿಂದ ಮುಂದರಿದುದ)

ಚಪಲವಾದ ವ್ಯವಸ್ಥೆಯನ್ನು ಕಂಡುಹಿಡಿಯಬೇಕಾಗುವದು. ಕೆಲವು ಘಟನೆಗಳಲ್ಲಿ ವಿವಾದವೊದಗಿದಾಗ ಘಟನೆಯ ಅರ್ಥವನ್ನು ನಿರ್ಣಯಿಸುವ ಅಧಿಕಾರ ಉಚ್ಚತರ ಶಾಸನ ಸಭೆಗೇ ಇರುವದು. ಹಿಂದುಸ್ಥಾನ ಸರಕಾರದ ಕಾಯಿದೆಯನ್ನು ಸಂವಾಹಿ ವಿಷಯಗಳ ವಿಚಾರದಲ್ಲಿ ಕೇಂದ್ರಕ್ಕೂ ಪ್ರಾಂತಗಳಿಗೂ ಬರಬಹುದಾದ ವಿವಾದವನ್ನು ತಡೆಯಲು ಗವರ್ನರ ಜನರಲ್ಲರ ಸಮ್ಮತಿಯನ್ನು ಉಪಯೋಗಿಸಲಾಗಿದೆ. ಮೂರು ಮೆಟ್ಟಲುಳ್ಳ ಘಟನೆಯಲ್ಲಿ ಮೇಲಿಂದ ಮೇಲೆ ತಿದ್ದುಪಡಿಗಳೂ ಬೇಕಾಗುವವು. ಘಟನೆಯ ಕೆಲಭಾಗಗಳನ್ನು ತಿದ್ದಬೇಕಾದರೆ ಅಸಾಧಾರಣ ಕ್ರಮವನ್ನು ಉಪಯೋಗಿಸಬೇಕೆಂದೂ ಇನ್ನು ಕೆಲವನ್ನು ಸಾಮಾನ್ಯ ಶಾಸನ ಸಭಾ ನಿರ್ಣಯದಿಂದಲೇ ತಿದ್ದಬಹುದೆಂದೂ ನಿಯಮ ಮಾಡಬೇಕು. ಪ್ರವಾಹಿ ಘಟನೆಯಿದ್ದರೆ ಹಿಂದುಸ್ಥಾನದ ಆರ್ಥಿಕ ಪರಿವರ್ತನೆ ಬೇಗನೆ ಆಗಬಹುದು. ಆದರೆ ಪ್ರಬಲ ರಾಜಕೀಯ ಪಕ್ಷಗಳು ಅದನ್ನು ಆಯೋಗ್ಯ [illegible]ಯಿಂದ ಉಪಯೋಗಿಸಿಕೊಳ್ಳಲೂಬಹುದು. ಒಟ್ಟಿನ ಮೇಲೆ ಮಂತ್ರಿಗಳ ಯೋಜನೆಯನ್ನು ತೀವ್ರಗಾಮಿಗಳು ಸ್ವಾಗತಿಸಬಹುದು. ಸಾದಾಹಾದಿಯನ್ನು ಬಿಟ್ಟುಕೊಟ್ಟದ್ದಕ್ಕೆ ಸಂಪ್ರದಾಯವಾದಿಗಳು ದುಃಖಪಡಲೆಡೆಯುಂಟು.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನ ಪರವಾಗಿ ಹ. ರಾ. ಪುರೋಹಿತರವರಿಂದ ಮುದ್ರಿತ ಪ್ರಕಟವಾಯಿತು.